ಪ್ರಚಾರ ಪುಸ್ತಕ ಮಾಲೆ

250

ಗಾಂಧೀಜಿ

ಉ. ಕಾ. ಸುಬ್ಬರಾಯಾಚಾರ್

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರ ಪುಸ್ತಕಮಾಲೆ—೨೫೦

ಗಾಂಧೀಜಿ

ಉ. ಕಾ. ಸುಬ್ಬರಾಯಾಚಾರ್

೧೯೮೭

ಮೊದಲನೆಯ ಮುದ್ರಣ : ೧೯೮೭

೫,೦೦೦ ಪ್ರತಿಗಳು

ಬೆಲೆ : ರೂ. ೧-೦೦

ಪ್ರಕಾಶಕರು

ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೬

ಮುದ್ರಕರು

ನಿರ್ದೇಶಕರು, ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು-೬

ಮುನ್ನುಡಿ

ನಮ್ಮ ವಿಶ್ವವಿದ್ಯಾನಿಲಯದ ಮೊದಲನೆಯ ಛಾನ್ಸಲರೂ ಆಳಿದ ಮಹಾಸ್ವಾಮಿಯವರೂ ಆದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಬಹದ್ದೂರ್ ಅವರು ಮೊದಲನೆಯ 'ಸೆನೆಟ್' ಸಭೆಯ ಪ್ರಾರಂಭೋತ್ಸವದ ಸಮಯದಲ್ಲಿಯೂ, ಮೊದಲನೆಯ 'ಕಾನ್ವೊಕೇಷನ್' ಸಮಾರಂಭದ ಕಾಲದಲ್ಲಿಯೂ ವಿಶ್ವವಿದ್ಯಾನಿಲಯದ ವಿದ್ಯೆ, ಪಟ್ಟಣಗಳಲ್ಲಿ ಮಾತ್ರ ಕೇಂದ್ರೀಕೃತವಾಗದೆ ನಾಡಿನ ಮೂಲೆ ಮೂಲೆಗೂ ಪ್ರಸರಿಸಿ, ಉಚ್ಚ ಶಿಕ್ಷಣವನ್ನು ಪಡೆಯಲು ಅವಕಾಶ ಹೊಂದದ ಸಾಮಾನ್ಯ ಜನರ ಹೃದಯವನ್ನು ಬೆಳಗಿ, ಸಮಷ್ಟಿ ಪ್ರಜ್ಞೆಯ ವಿಕಾಸಕ್ಕೆ ಕಾರಣವಾಗಬೇಕು ಎಂಬ ಮಹದಾಶಯವನ್ನು ವ್ಯಕ್ತಪಡಿಸಿದ್ದರು. ಅವರ ಆಶಯ ಇಂದು ಫಲದಾಯಕವಾಗುತ್ತಿದೆ. ನಮ್ಮ ವಿಶ್ವವಿದ್ಯಾನಿಲಯದ ಪ್ರಸಾರಾಂಗ, ನಾಡಿನ ಮೂಲೆಮೂಲೆಯಲ್ಲಿ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಿ, ಸಂಸ್ಕೃತಿಯ ಪ್ರಸಾರ ಕಾರ್ಯವನ್ನು ಬಹಳ ಸಮರ್ಪಕವಾದ ರೀತಿಯಲ್ಲಿ ನೆರವೇರಿಸುತ್ತಿದೆ.

ಜನರು ಬಯಸಿದೆಡೆಗಳಲ್ಲಿ ಈ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಲಾಗುತ್ತಿದೆ. ವಿಶ್ವವಿದ್ಯಾನಿಲಯದಲ್ಲಿ ಅನೇಕ ವರ್ಷಗಳು ಪಾಠ ಹೇಳಿ ಮಿಗಿಲಾದ ಜ್ಞಾನವನ್ನು ಗಳಿಸಿರುವ ಘನ ವಿದ್ವಾಂಸರು ಜನರು ಅಪೇಕ್ಷಿಸುವ ವಿಷಯಗಳನ್ನು ಕುರಿತು ಸರಳವೂ, ಸುಲಭಗ್ರಾಹ್ಯವೂ ಆದ ಕನ್ನಡ ಭಾಷೆಯ ಮೂಲಕ ತಿಳುವಳಿಕೆ ಕೊಡುತ್ತಾರೆ. ಜ್ಞಾನವನ್ನು ಹಂಚುವುದರಲ್ಲೂ ಆನಂದವಿದೆ. ಅಧ್ಯಾಪಕವೃಂದದವರು ಹಳ್ಳಿಗಳಲ್ಲಿಯೇ ಒಂದೆರಡು ದಿನ ನೆಲೆಸಿ, ಸಾಮಾನ್ಯ ಜನರಂತೆಯೇ ಇದ್ದು

ಕೊಂಡು, ಗಳಿಸಿರುವ ಜ್ಞಾನವನ್ನು ಜನಸಾಮಾನ್ಯರ ಹೃದಯ ದಲ್ಲಿ ಬಿತ್ತಿ, ತಾವೂ ಆನಂದವನ್ನು ಅನುಭವಿಸುತ್ತಾ ಮತ್ತು ಇತರರಿಗೂ ಆನಂದವನ್ನುಂಟುಮಾಡುತ್ತಾರೆ. ಈ ಉಪನ್ಯಾಸ ಗಳು ವಿಶ್ವವಿದ್ಯಾನಿಲಯದ ಮೆಟ್ಟಿಲನ್ನು ಹತ್ತಲು ಅವಕಾಶವಿಲ್ಲ ದವರಿಗೆ ವಿಶ್ವವಿದ್ಯಾನಿಲಯ ವಿದ್ಯೆಯ ಸೌಲಭ್ಯವನ್ನು ನೀಡಲು ನೆರವಾಗುತ್ತವೆ. ವಿಶ್ವವಿದ್ಯಾನಿಲಯದಲ್ಲಿ ಜ್ಞಾನವನ್ನು ಗಳಿಸಿ, ನಾಡಿನ ಬೇರೆ ಬೇರೆ ಭಾಗಗಳಲ್ಲಿ ವಿವಿಧ ಕಾರ್ಯರಂಗಗಳಲ್ಲಿ ನಿರತರಾಗಿರುವ ಜನರಿಗೆ ಮಾರ್ಗದರ್ಶಕವಾಗುತ್ತವೆ. ನಮ್ಮ ಸಮಾಜದಲ್ಲಿನ ಭೇದಭಾವಗಳನ್ನು ಹೋಗಲಾಡಿಸಿ ಸಮಾನತೆ ಯನ್ನು ಸ್ಥಾಪಿಸಲು ಸಹಾಯಕವಾಗುತ್ತವೆ; ವಿಶ್ವವಿದ್ಯಾ ನಿಲಯಕ್ಕೂ ಸಾಮಾನ್ಯ ಜನತೆಗೂ ಮಧ್ಯೆ ಇರುವ ದೊಡ್ಡ ಅಂತರವನ್ನು ಪರಿಹರಿಸಲು ನೆರವಾಗುತ್ತವೆ; ಜನರಲ್ಲಿ ಜ್ಞಾನೋದಯವನ್ನುಂಟುಮಾಡಿ, ಅವರ ದುಃಖಕ್ಕೆ ಮೂಲ ಕಾರಣವಾದ ಅಸಮಾನತೆಯನ್ನು ಹೋಗಲಾಡಿಸಿ, ವಿಶಾಲ ಭಾವನೆಯು ಮೂಡುವಂತೆ ಮಾಡುತ್ತವೆ.

ಪ್ರಚಾರೋಪನ್ಯಾಸಗಳನ್ನು ಕಿರುಹೊತ್ತಿಗೆಗಳ ರೂಪದಲ್ಲಿ ಪ್ರಕಟಿಸಲಾಗುತ್ತಿದೆ. ಈ ಉಪನ್ಯಾಸಗಳನ್ನು ಕೇಳಲು ಅವಕಾಶ ಸಿಕ್ಕದವರು ಈ ಹೊತ್ತಗೆಗಳನ್ನು ಕೊಂಡು ಓದಿ ತಿಳುವಳಿಕೆ ಪಡೆಯಲು ಅವಕಾಶವಿದೆ. ಈ ಮಾಲೆಯ ಪುಸ್ತಕಗಳು ಹೆಚ್ಚು ಜನಪ್ರಿಯವಾಗಿವೆ. ಪುಸ್ತಕಗಳು ಅಚ್ಚಿನ ಮನೆಯಿಂದ ಹೊರಬಿದ್ದ ಕೂಡಲೆ ಜನರು ಆದರದಿಂದ ಕೊಂಡು ಓದುತ್ತಾರೆ. ಈ ಮಾಲೆಯಲ್ಲಿ ಈಗಾಗಲೇ ಭೌತವಿಜ್ಞಾನ, ರಸಾಯನವಿಜ್ಞಾನ, ಪ್ರಾಣಿವಿಜ್ಞಾನ, ವೈದ್ಯವಿಜ್ಞಾನ, ಗಣಿತವಿಜ್ಞಾನ, ಸಮಾಜ ವಿಜ್ಞಾನ, ಅರ್ಥಶಾಸ್ತ್ರ, ತತ್ತ್ವಶಾಸ್ತ್ರ, ಸಾಹಿತ್ಯ ಮತ್ತು ಕಲೆ

ಮುಂತಾದ ವಿಷಯಂಗಳನ್ನು ಕುರಿತ ಇನ್ನೂರ ನಲವತ್ತೊಂಬತ್ತು ಪುಸ್ತಕಗಳು ಪ್ರಕಟವಾಗಿವೆ ಎಂಬುದನ್ನು ತಿಳಿಸಲು ನನಗೆ ಬಹಳ ಸಂತೋಷವಾಗಿದೆ.

ಈ ಮಾಲೆಯಲ್ಲಿ ಈಗ ಹೊರಬೀಳುತ್ತಿರುವ ಶ್ರೀ ಉ. ಕಾ. ಸುಬ್ಬರಾಯಾಚಾರ್ ಅವರ 'ಗಾಂಧೀಜಿ' ಹೆಚ್ಚು ಜನಪ್ರಿಯ ವಾಗಲೆಂದು ನಾನು ಆಶಿಸುತ್ತೇನೆ.

ವೈ. ಪಿ. ರುದ್ರಪ್ಪ
ಕುಲಪತಿಗಳು

ಪರಿವಿಡಿ

೧. ಪೀಠಿಕೆ

ಅಪೂರ್ಣತೆಯಿಂದ ಪೂರ್ಣತೆಯತ್ತ ಸಾಗಿದ ಸಾಹಸಮಯ ಸಾಧನೆಯೇ ಗಾಂಧೀಜಿಯವರ ಜೀವನ. ಜೀವನದಲ್ಲಿ ಅವರನ್ನು ಮುನ್ನಡೆಸಿದ ಮಹಾಶಕ್ತಿಗಳೆಂದರೆ ಸತ್ಯಸಂಧತೆ ಮತ್ತು ಅಹಿಂಸೆ. ಆ ಶಕ್ತಿಗಳು ಅನೀತಿಯನ್ನೂ ದಬ್ಬಾಳಿಕೆಯನ್ನೂ ಪ್ರತಿಭಟಿಸಲು ಕ್ರಿಯಾಶೀಲವಾದುದು ಪ್ರಪ್ರಥಮವಾಗಿ ದಕ್ಷಿಣ ಆಫ್ರಿಕದಲ್ಲಿ. ಗಾಂಧೀಜಿ ಭಾರತಕ್ಕೆ ಹಿಂತಿರುಗಿದ ಬಳಿಕ, ಭಾರತದ ಸ್ವಾತಂತ್ರ್ಯ, ಅಸ್ಪೃಶ್ಯತೆಯ ನಿವಾರಣೆ, ಗ್ರಾಮೋದ್ಧಾರ, ಖಾದಿಪ್ರಚಾರ, ಪಾನನಿರೋಧ, ಸರ್ವೋದಯ—ಮೊದಲಾದ ಹಲವು ಕ್ಷೇತ್ರಗಳಲ್ಲಿ ದುಡಿದರು. ಅವರ ಜೀವನಕ್ಕೆ ಪರಿಮಳ ಬಂದುದು, ಅವರ ನೈತಿಕ ನಿಷ್ಠೆಯಿಂದ.

ಗಾಂಧೀಜಿಯವರ ಮೇಲೆ ಮೊದಲು ಪ್ರಭಾವ ಬೀರಿದುದು ರಸ್ಕಿನ್ ಅವರ 'ಅನ್‌ಟು ದಿ ಲಾಸ್ಟ್' ಎಂಬ ಪುಸ್ತಕ. ಅವರು ಚಿರಂತನ ಸ್ಫೂರ್ತಿಯನ್ನು ಪಡೆದುದು ಭಗವದ್ಗೀತೆಯಿಂದ. ಅವರ ಸಚ್ಚಾರಿತ್ರ್ಯವೇ ಅಖಂಡ ಭಾರತದ ಜನತೆಯ ಮೇಲೆ ಪ್ರಭಾವ ಬೀರಲು ಶಕ್ತವಾಯಿತು. ತಾವು ಭಗವಾನರೆಂದಾಗಲಿ, ಸರ್ವಜ್ಞರೆಂದಾಗಲಿ, ಪರಿಪೂರ್ಣರೆಂದಾಗಲಿ ಎಂದೂ ಅವರು ಹೇಳಿಕೊಳ್ಳಲಿಲ್ಲ. ಮಾನವ ಸಹಜವಾದ ಕೆಲವು ದೌರ್ಬಲ್ಯಗಳು ಅವರಲ್ಲಿದ್ದುವು. ಆದರೆ ಅವರು ಆ ದೌರ್ಬಲ್ಯಗಳನ್ನು ದೂರ ಮಾಡಲು ಸತತವಾಗಿ ಯತ್ನಿಸಿದರು. ಅವರ ಉಜ್ವಲ ರಾಷ್ಟ್ರ ಪ್ರೇಮ ಹಾಗೂ ತ್ಯಾಗವನ್ನು ಅರಿತು, ಜನತೆ ಅವರನ್ನು ಮಹಾತ್ಮಾ ಎಂದು ಗೌರವಿಸಿತು.

ಮೃದು ಸ್ವಭಾವದ ಗಾಂಧೀಜಿ, ತತ್ತ್ವ ಹಾಗೂ ಆದರ್ಶದ

ಪ್ರಶ್ನೆ ಬಂದಾಗ, ಅವುಗಳ ರಕ್ಷಣೆಗಾಗಿ ಉಕ್ಕಿನಂತಾಗುತ್ತಿದ್ದರು. ಇಂದಿನ ವಿದ್ಯಾರ್ಥಿಗಳೂ ಯುವಜನರೂ ಗಾಂಧೀಜಿಯವರಿಂದ ಪ್ರಭಾವಿತರಾದರೆ, ನವರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಮಹತ್ತರ ಪಾತ್ರವನ್ನು ವಹಿಸುವುದು ಸಾಧ್ಯ. ಯಾವ ಆದರ್ಶಗಳಿಗಾಗಿ ಗಾಂಧೀಜಿ ಬದುಕಿದರೋ ಆ ಮೌಲ್ಯಗಳು ನಾಶವಾಗಲು ಬಿಡದೆ, ನವ ಸಮಾಜದ ಸೃಷ್ಟಿಗೆ ಎಲ್ಲರೂ ಸೊಂಟಕಟ್ಟಿ ನಿಲ್ಲಬೇಕು. ರಾಷ್ಟ್ರದಲ್ಲಿ ಕಾಣುವ ಭ್ರಷ್ಟಾಚಾರಗಳನ್ನು ನಿರ್ಮೂಲನ ಮಾಡಬೇಕಾದರೆ, ಗಾಂಧೀಜಿಯವರ ಸತ್ಯಸಂಧತೆ ಹಾಗೂ ನಿರ್ಮಲ ದೃಷ್ಟಿ ವ್ಯಕ್ತಿ ವ್ಯಕ್ತಿಗಳಲ್ಲಿ ನೆಲಸಬೇಕು.

೨. ಬಾಲ್ಯ ಮತ್ತು ವಿದ್ಯಾಭ್ಯಾಸ

ಮೋಹನದಾಸ್ ಕರಮ್‌ಚಂದ್ ಗಾಂಧೀ ಗುಜರಾತಿನ ಪೋರ್‌ಬಂದರ್‌ನಲ್ಲಿ ಅಕ್ಟೋಬರ್ ೨, ೧೮೬೯ರಲ್ಲಿ ಜನಿಸಿದರು. ಅವರ ತಂದೆ ಕರಮ್‌ಚಂದ್ ಗಾಂಧಿ, ತಾಯಿ ಪುತ್ಲೀಬಾಯಿ. ಉದಾರಿಯೂ ಸತ್ಯಪಕ್ಷಪಾತಿಯೂ ಆದ ಕರಮ್‌ಚಂದ್ ಪೋರ್‌ಬಂದರ್‌ನಲ್ಲಿ ದಿವಾನರಾಗಿದ್ದರು. ಪುತ್ಲೀಬಾಯಿ ಧರ್ಮನಿಷ್ಠರು. ಅವರ ದೈವಭಕ್ತಿ ಹಾಗೂ ಅವರು ಹೇಳುತ್ತಿದ್ದ ಮಹಾಪುರುಷರ ಜೀವನ ಕಥೆಗಳು ಬಾಲಕ ಗಾಂಧಿಯ ಮೇಲೆ ತುಂಬ ಪ್ರಭಾವ ಬೀರಿದವು.

ಗಾಂಧಿಯವರ ಪ್ರಾಥಮಿಕ ವಿದ್ಯಾಭ್ಯಾಸ ನಡೆದುದು ಪೋರ್‌ಬಂದರಿನಲ್ಲಿ. ಅವರಿಗೆ ಕಷ್ಟವಾದ ಪಾಠವೆಂದರೆ, ಗಣಿತ. ತಂದೆ ಕರಮ್‌ಚಂದ್ ಗಾಂಧಿಯವರು ಪೋರ್‌ಬಂದರ್ ಬಿಟ್ಟು ಕಾಥಿಯವಾಡಿನ ದಿವಾನರಾದ ಬಳಿಕ, ಮೋಹನದಾಸ್ ಗಾಂಧಿಯವರ ವ್ಯಾಸಂಗ ರಾಜಕೋಟೆಯಲ್ಲಿ ಮುಂದುವರಿಯಿತು. ಪ್ರೌಢಶಾಲೆ

ಯಲ್ಲಿ ಅವರು ಓದುತ್ತಿದ್ದಾಗ, ಒಂದು ದಿನ ವಿದ್ಯಾಇಲಾಖೆಯ ಅಧಿಕಾರಿಗಳು, ಅಧ್ಯಾಪಕರ ಬೋಧನೆಯನ್ನು ಪರೀಕ್ಷಿಸಲೆಂದು ತರಗತಿಗೆ ಹೋದರು. ಆ ಸಮಯದಲ್ಲಿ ಗಾಂಧಿ ಇಂಗ್ಲಿಷ್ ಪದವಾದ 'ಕೆಟಲ್' (kettle) ಎಂಬುದನ್ನು ತಪ್ಪಾಗಿ ಬರೆದರು. ತರಗತಿಯ ಅಧ್ಯಾಪಕರು, ಪಕ್ಕದ ಹುಡುಗನು ಬರೆದುದನ್ನು ನೋಡಿ, ತಿದ್ದಿ ಬರೆಯಲು ಸೂಚನೆ ಕೊಟ್ಟರೂ ಗಾಂಧಿ ಕಿವಿಗೊಡಲಿಲ್ಲ. ಅಧಿಕಾರಿಗಳು ಹೋದ ಬಳಿಕ, ಅಧ್ಯಾಪಕರು ಗಾಂಧಿಯವರನ್ನು ತರಾಟೆಗೆ ತೆಗೆದುಕೊಂಡರು. ಗಾಂಧಿ ಅದನ್ನು ಮನಸ್ಸಿಗೆ ಹಚ್ಚಿಕೊಳ್ಳಲಿಲ್ಲ. ಪ್ರಾಮಾಣಿಕತೆಯಲ್ಲಿ ಅವರಿಗಿದ್ದ ನಿಷ್ಠೆ, ಈ ಘಟನೆಯಿಂದ ತಿಳಿಯುತ್ತದೆ.

ಪ್ರೌಢಶಾಲೆಯಲ್ಲಿದ್ದಾಗ. ಗಾಂಧಿಯವರಿಗೆ ಷೇಕ್ ಮಹತಾಬ್ ಎಂಬ ಬಲಿಷ್ಠ ಯುವಕನೊಡನೆ ಸ್ನೇಹವಾಯಿತು. "ಮಾಂಸ ತಿಂದವರು ಶಕ್ತಿವಂತರಾಗುತ್ತಾರೆ" ಎಂದು ಮಹತಾಬ್ ಹೇಳಿದುದನ್ನು ನಂಬಿ, ಮನೆಯವರು ತಿಳಿಯದಂತೆ ಗುಟ್ಟಾಗಿ ಗಾಂಧಿ ಮಾಂಸ ತಿಂದರು. ಆದರೆ, ಅದು ಒಗ್ಗದೆ, ಅದನ್ನು ಬಿಟ್ಟುಬಿಟ್ಟರು. ಸ್ನೇಹಕ್ಕೆ ಕಟ್ಟುಬಿದ್ದು, ಹೊಗೆಬತ್ತಿ ಸೇದುವುದನ್ನೂ ಕಲಿತು, ಅನಂತರ ಅದನ್ನು ಅವರು ತ್ಯಜಿಸಿದರು. ಒಂದು ದಿನ, ಷೇಕ್ ಮಹತಾಬನೊಡನೆ ಒಬ್ಬ ವೇಶ್ಯೆಯ ಮನೆಗೂ ಗಾಂಧಿ ಹೋದರು. ತನ್ನ ಬಳಿ ಗಾಂಧಿ ಮಂಕು ಬಡಿದವನಂತೆ ಕುಳಿತಿದ್ದುದನ್ನು ಕಂಡ ವೇಶ್ಯೆ, ಆ ಅರಸಿಕನನ್ನು ಹೊರಕ್ಕೆ ಕಳುಹಿಸಿದಳಂತೆ! ಅಧಃಪತನದಿಂದ ಪಾರಾಗಿ, ಚಾರಿತ್ರ್ಯವನ್ನು ಉಳಿಸಿಕೊಂಡು ವೇಶ್ಯಾಗೃಹದಿಂದ ಹೊರಬಂದುದಕ್ಕಾಗಿ, ಗಾಂಧಿ ತಮ್ಮ ಕೃತಜ್ಞತೆಯನ್ನು ದೇವರಿಗೆ ಅರ್ಪಿಸಿದರು. ಒಮ್ಮೆ ಅವರಿಗೆ ಹಣ ಬೇಕಾದಾಗ, ಅಣ್ಣನಿಗೆ ಸೇರಿದ ಸ್ವಲ್ಪ ಚಿನ್ನವನ್ನು ಕದ್ದು ಮಾರಿ, ಬಳಿಗೆ ಪಶ್ಚಾತ್ತಾಪದಿಂದ ಅಣ್ಣನಲ್ಲಿ ಕ್ಷಮಾಪಣೆ ಕೇಳಿಕೊಂಡರು.

ಗಾಂಧಿಯವರ ಮದುವೆಯಾದುದು ಅವರ ಹದಿಮೂರನೆಯ ವಯಸ್ಸಿನಲ್ಲಿ. ಅವರ ಪತ್ನಿ ಕಸ್ತೂರಿಬಾ. ಅವರದು ಮೃದು ಸ್ವಭಾವ, ಸತ್ಯನಿಷ್ಠ ಮನಸ್ಸು. ಅವರಿಗೂ ಆಗ ಹದಿಮೂರು ವರ್ಷ ವಯಸ್ಸು. ಮದುವೆಯಾದ ಕೆಲವು ದಿನಗಳ ಬಳಿಕ, ತಮ್ಮ ತಂದೆ ಅನಾರೋಗ್ಯದಿಂದ ಬಳಲುತ್ತ ಮಲಗಿದ್ದಾಗ, ಅವರ ಶುಶ್ರೂಷೆಯಲ್ಲಿ ತೊಡಗಿದ್ದ ಗಾಂಧಿಯವರಿಗೆ ಪತ್ನಿಯದೇ ಯೋಚನೆ. ತಮ್ಮ ಚಿಕ್ಕಪ್ಪ ಬಂದೊಡನೆ, ಗಾಂಧಿ, ತಂದೆಯವರ ಸೇವೆಯನ್ನು ಚಿಕ್ಕಪ್ಪನಿಗೆ ವಹಿಸಿ, ತಮ್ಮ ಪತ್ನಿಯ ಬಳಿಗೆ ಹೋದರು. ಕಾಮಿಯಾದ ಗಾಂಧಿ ನಿದ್ರಿಸುತ್ತಿದ್ದ ತಮ್ಮ ಪತ್ನಿಯನ್ನು ಎಬ್ಬಿಸಿ,ಅವರೊಡನೆ ಸರಸಸಲ್ಲಾಪಗಳಲ್ಲಿ ತೊಡಗಿದ್ದಾಗಲೆ, ಅವರ ಕೊಠಡಿಯ ಬಾಗಿಲನ್ನು ತಟ್ಟಿದ ಶಬ್ದವಾಯಿತು. ಬಾಗಿಲನ್ನು ತೆಗೆದಾಗ, ಗಾಂಧಿಯವರಿಗೆ ತಿಳಿದದ್ದು, ತಮ್ಮ ತಂದೆಯ ಮರಣದ ವಾರ್ತೆ. ತಂದೆಯ ಮರಣದ ಸಮಯದಲ್ಲಿಯೂ ಲೈಂಗಿಕ ಭಾವನೆ ತಮ್ಮ ಮನಸ್ಸಿನಲ್ಲಿ ತುಂಬಿದ್ದುದನ್ನು ನೆನೆದು ಅವರಿಗೆ ದುಃಖವಾಯಿತು. ಆ ಘಟನೆಯನ್ನು ಗಾಂಧಿ ಸ್ಮರಿಸಿಕೊಂಡು, ತಮ್ಮ ಜೀವನದಲ್ಲಿ ಹಲವು ಬಾರಿ ಪರಿತಪಿಸಿದರು.

ರಾಜಕೋಟೆಯ ಪ್ರೌಢಶಾಲೆಯಲ್ಲಿ ಓದುತ್ತಿದ್ದ ಗಾಂಧಿ ೧೮೮೭ರಲ್ಲಿ ಮೆಟ್ರಿಕುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಹಿತೈಷಿಗಳ ಆದೇಶದಂತೆ, ಅವರು ಬಾರ್-ಅಟ್-ಲಾ ಅಧ್ಯಯನಕ್ಕಾಗಿ ಇಂಗ್ಲೆಂಡಿಗೆ ತೆರಳಲು ಸಿದ್ಧರಾದರು. ಮಗನನ್ನು ವಿದೇಶಕ್ಕೆ ಕಳುಹಿಸಲು ತಾಯಿಗೆ ಇಷ್ಟವಿರಲಿಲ್ಲ. ಕಡೆಗೆ, ತಾಯಿಯ ಬಳಿ ಮಾಂಸ, ಮದ್ಯ ಮತ್ತು ಪರಸ್ತ್ರೀಯರಿಂದ ದೂರವಿರುವ ಪ್ರತಿಜ್ಞೆ ಮಾಡಿ, ಗಾಂಧಿ ೧೮೮೮, ಸೆಪ್ಟೆಂಬರ್ ೪ ರಂದು, ಹಡಗಿನಲ್ಲಿ ಇಂಗ್ಲೆಂಡಿಗೆ ಪ್ರಯಾಣ ಮಾಡಿದರು. ಆಗ ಅವರಿಗೆ ಹದಿನೆಂಟು ವರ್ಷ ವಯಸ್ಸು.

ಇಂಗ್ಲೆಂಡನ್ನು ಸೇರಿದ ಮೇಲೆ ತಾಯಿಗೆ ಕೊಟ್ಟ ವಚನವನ್ನು ಗಾಂಧಿ ಮರೆಯಲಿಲ್ಲ. ಪ್ರಾರಂಭದಲ್ಲಿ ಅವರು ಒಳ್ಳೆಯ ಉಡುಪು, ಹ್ಯಾಟ್ ಮೊದಲಾದುವುಗಳನ್ನು ಕೊಳ್ಳಲು ಹೆಚ್ಚು ಹಣ ಖರ್ಚು ಮಾಡಿದರು. ಫ್ರೆಂಚ್ ಭಾಷೆಯ ವ್ಯಾಸಂಗಕ್ಕಾಗಿಯೂ, ನೃತ್ಯ ಮತ್ತು ಪಿಟೀಲಿನ ಅಭ್ಯಾಸಕ್ಕಾಗಿಯೂ ಅವರು ಶ್ರಮಿಸಿದರು. ಇವಕ್ಕೆಲ್ಲ ಹೆಚ್ಚು ಹಣ ಖರ್ಚಾಯಿತು. ಬಹು ಕಷ್ಟದಿಂದ ಅವರಿಗೆ ಹಣ ಕಳುಹಿಸುತ್ತಿದ್ದವರು ಅವರ ಅಣ್ಣ. ಖರ್ಚನ್ನು ಕಡಿಮೆ ಮಾಡಿಕೊಳ್ಳದೆ, ಅವರು ಜೀವಿಸುವುದು ಕಷ್ಟವಾದುದರಿಂದ, ಅನಾವಶ್ಯಕವಾದ ಖರ್ಚು ತನ್ನಷ್ಟಕ್ಕೆ ತಾನೇ ನಿಂತುಹೋಯಿತು.

ಭಗವದ್ಗೀತೆಯನ್ನು ಮೊದಲ ಬಾರಿಗೆ ಗಾಂಧಿಯವರು ಓದಿದ್ದು ಇಂಗ್ಲೆಂಡಿನಲ್ಲಿದ್ದಾಗ. ಗೀತೆಯ ಆಳವಾದ ಅಭ್ಯಾಸವನ್ನು ಅವರು ಆರಂಭಿಸಿದ್ದು, ಹಲವು ವರ್ಷಗಳಾದ ಬಳಿಕ. ಬಾರ್-ಅಟ್-ಲಾ ಪರೀಕ್ಷೆಯನ್ನು ಮುಗಿಸಿ, ಗಾಂಧಿಯವರು ಭಾರತಕ್ಕೆ ಹಿಂತಿರುಗಿದ್ದು ೧೮೯೧ ಜೂನ್ ೧೨ರಂದು. ಭಾರತಕ್ಕೆ ಹಿಂತಿರುಗಿದ ಬಳಿಕ, ತಮ್ಮ ತಾಯಿ ನಿಧನರಾಗಿದ್ದ ವೃತ್ತಾಂತ ತಿಳಿದು. ಅವರಿಗೆ ಬಹು ದುಃಖವಾಯಿತು. ವಿದೇಶದಲ್ಲಿದ್ದ ಗಾಂಧಿಯವರಿಗೆ, ತಾಯಿ ನಿಧನರಾದ ವಾರ್ತೆಯನ್ನು ತಿಳಿಸಿದರೆ, ಅವರ ಓದಿಗೆ ತೊಂದರೆಯಾಗಬಹುದೆಂಬ ದೂರದೃಷ್ಟಿಯಿಂದ, ಅವರ ಅಣ್ಣ ಆ ಸುದ್ದಿಯನ್ನು ತಿಳಿಸಿರಲಿಲ್ಲ.

ಮಿತ್ರರ ಸಲಹೆಯಂತೆ, ಗಾಂಧಿಯವರು ಬೊಂಬಾಯಿಯಲ್ಲಿ ಅಡ್ವೊಕೇಟರಾಗಿ ಕೆಲಸ ಆರಂಭಿಸಿದರು. ಅಲ್ಲಿ ಹಣವನ್ನಾಗಲಿ ಯಶಸ್ಸನ್ನಾಗಲಿ ಗಾಂಧಿಯವರು ಗಳಿಸಲು ಸಮರ್ಥರಾಗಲಿಲ್ಲ. ಜೀವನ ನಿರ್ವಹಣೆಗಾಗಿ ಅವರ ಖರ್ಚು ಮಾತ್ರ ಏರುತ್ತಲೇ ಇತ್ತು. ಆಗ ಅವರ ಅಣ್ಣ ಅವರನ್ನು ರಾಜಕೋಟೆಗೆ ಹಿಂತಿರುಗಿ,

ತಮಗೆ ಸಹಾಯ ಮಾಡಬೇಕೆಂದು ಕೇಳಿಕೊಂಡರು. ಮನಸ್ಸಿಲ್ಲದ ಮನಸ್ಸಿನಿಂದ ಗಾಂಧಿ ರಾಜಕೋಟೆಗೆ ಹಿಂತಿರುಗಿ, ಪ್ಲೀಡರ್ ಆಗಿದ್ದ ಅಣ್ಣನಿಗೆ ಸಹಾಯ ಮಾಡಲು ತಮ್ಮ ಕಛೇರಿಯನ್ನು ಆರಂಭಿಸಿದರು.

೩. ದಕ್ಷಿಣ ಆಫ್ರಿಕದಲ್ಲಿ

ದಕ್ಷಿಣ ಆಫ್ರಿಕದಲ್ಲಿ ವ್ಯಾಪಾರದಲ್ಲಿ ತೊಡಗಿದ್ದ ದಾದಾ ಅಬ್ದುಲ್ಲಾ ಎಂಬುವರ ವ್ಯಾಪಾರ ಸಂಸ್ಥೆಗೆ ಒಬ್ಬ ಅಡ್ವೊಕೇಟರ ಆವಶ್ಯಕತೆ ಇತ್ತು. ಅವರ ಬಳಿ ಒಂದು ವರ್ಷಕಾಲ ಕೆಲಸ ಮಾಡಲು ಗಾಂಧಿಯವರಿಗೆ ಆಹ್ವಾನ ಬಂದಿತು. ೧೮೯೩ರ ಏಪ್ರಿಲ್ ತಿಂಗಳಲ್ಲಿ ಗಾಂಧಿಯವರು ಹಡಗಿನಲ್ಲಿ ಪ್ರಯಾಣ ಮಾಡಿ, ಡರ್ಬಾನ್ ಸೇರಿದರು. ಅಲ್ಲಿ ಅವರಿಗೆ ಎಲ್ಲವೂ ಹೊಸ ಅನುಭವ. ಡರ್ಬಾನನ್ನು ಸೇರಿದ ಮೂರು ದಿನಗಳಲ್ಲಿ, ಅಬ್ದುಲ್ಲಾರ ಪರವಾಗಿ ವಾದಿಸಲು ಗಾಂಧಿಯವರು ಕೋರ್ಟಿಗೆ ಹೋದರು. ಆಗ, ಅವರು ಧರಿಸಿದ್ದ ರುಮಾಲಿನ ಮೇಲೆ ನ್ಯಾಯಾಧೀಶರ ಕಣ್ಣು. ಗಾಂಧಿಯವರ ಕಡೆ ಅವರು ದುರುಗುಟ್ಟಿ ನೋಡಿ, ತಲೆಯ ಮೇಲಣ ರುಮಾಲನ್ನು ತೆಗೆಯಬೇಕೆಂದರು. ಗಾಂಧಿಯವರು ರುಮಾಲನ್ನು ತೆಗೆಯಲಿಲ್ಲ. ಅವರು ಕೋರ್ಟಿನಿಂದ ಹಿಂತಿರುಗಿ, ರುಮಾಲನ್ನು ಧರಿಸುವ ತಮ್ಮ ಹಕ್ಕನ್ನು ಪ್ರತಿಪಾದಿಸಿ, ಪತ್ರಿಕೆಗೆ ಒಂದು ಲೇಖನವನ್ನು ಬರೆದರು. ಅದರಿಂದ ಅವರಿಗೆ ಪ್ರಚಾರ ಸಿಕ್ಕಿದಂತಾಯಿತು.

ಪ್ರಿಟೋರಿಯಾ

ರುಮಾಲಿನ ಘಟನೆ ನಡೆದ ಕೆಲವು ದಿನಗಳಲ್ಲಿ, ಗಾಂಧಿ ಟ್ರಾನ್ಸ್‌ವಾಲ್‌ನ ರಾಜಧಾನಿಯಾದ ಪ್ರಿಟೋರಿಯಾಕ್ಕೆ ರೈಲಿನಲ್ಲಿ

ಪ್ರಯಾಣ ಮಾಡಲು ಪ್ರಥಮ ದರ್ಜೆಯ ಟಿಕೆಟ್ಟನ್ನು ಕೊಂಡು ಕೊಂಡರು. ಅವರು ಪ್ರಯಾಣ ಮಾಡುತ್ತಿದ್ದ ರೈಲು ಮಾರಿಟ್ಸ್‌ಬರ್ಗ್ ಎಂಬ ನಿಲ್ದಾಣದಲ್ಲಿ ನಿಂತಾಗ, ಬಿಳಿಯನೊಬ್ಬ ಪ್ರಥಮ ದರ್ಜೆಯ ಗಾಡಿಯನ್ನು ಹತ್ತಿದ. ಬಿಳಿಯರಲ್ಲದ ಗಾಂಧಿಯವರನ್ನು ಕಂಡು ಅವನಿಗೆ ವಿಪರೀತ ಕೋಪ ಬಂದಿತು. ಪ್ರಥಮ ದರ್ಜೆಯ ಗಾಡಿಯಲ್ಲಿ ಪ್ರಯಾಣ ಮಾಡುವುದು ಬಿಳಿಯರದೇ ವಿಶೇಷ ಹಕ್ಕೆಂದು ಆ ಬಿಳಿಯ ತಿಳಿದಿದ್ದನು. ಅವನ ದೃಷ್ಟಿಯಲ್ಲಿ ಭಾರತೀಯರೆಲ್ಲರೂ ಕೂಲಿಗಳು. ಅಡ್ವೊಕೇಟರಾದ ಗಾಂಧಿಯವರೂ ಬಿಳಿಯನ ದೃಷ್ಟಿಯಲ್ಲಿ ಕೂಲಿಯೇ! ಗಾಂಧಿಯವರು ಆ ಗಾಡಿಯಿಂದ ಇಳಿಯಬೇಕೆಂದು ಬಿಳಿಯನ ಆರ್ಭಟ. ತಮ್ಮ ಬಳಿ ಪ್ರಥಮ ದರ್ಜೆಯ ಟಿಕೆಟ್ ಇರುವುದರಿಂದ ಇಳಿಯುವುದಿಲ್ಲವೆಂದರು ಗಾಂಧಿ. ಆ ಬಿಳಿಯ, ರೈಲಿನ ಅಧಿಕಾರಿಗೆ ದೂರಿತ್ತೊಡನೆ, ಅವನು ಬಂದು, ಗಾಂಧಿ ಆ ಗಾಡಿಯಿಂದ ಇಳಿದು ಹಿಂದಿನ ಗಾಡಿಯಲ್ಲಿ ಪ್ರಯಾಣ ಮಾಡಬೇಕೆಂದನು. ಗಾಂಧಿ ಅದಕ್ಕೆ ಒಪ್ಪಲಿಲ್ಲ. ಆಗ ಅವನು ಪೋಲೀಸರನ್ನು ಕರೆಸಿ, ಗಾಂಧಿಯವರನ್ನು ಬಲಾತ್ಕಾರವಾಗಿ ಗಾಡಿಯಿಂದ ಹೊರಕ್ಕೆ ಹಾಕಿದನು. ರೈಲು ಮುಂದಕ್ಕೆ ಪ್ರಯಾಣ ಮಾಡಿತು. ಚಳಿಯಲ್ಲಿ ರಾತ್ರಿಯನ್ನು ಕಳೆದು ಮರುದಿನ ಬಹು ಕಷ್ಟದಿಂದ ಗಾಂಧಿ ಪ್ರಿಟೋರಿಯಾಕ್ಕೆ ಪ್ರಯಾಣ ಮಾಡಿದರು. ಅಲ್ಲಿದ್ದ ಭಾರತೀಯರು ತಮ್ಮ ಕಷ್ಟಗಳನ್ನು ಹೇಳಿಕೊಂಡು, ಗಾಂಧಿಯವರಿಗಾದ ತೊಂದರೆ ಹಾಗೂ ಅಪಮಾನಗಳನ್ನು ಕೇಳಿ ನೊಂದುಕೊಂಡರು.

ಪ್ರಿಟೋರಿಯಾದಲ್ಲಿ ಭಾರತೀಯ ಕಕ್ಷಿ ಮತ್ತು ಪ್ರತಿಕಕ್ಷಿಗಳಿಬ್ಬರಿಗೂ ಹಿತವಚನಗಳನ್ನು ಹೇಳಿ, ಎರಡು ಪಕ್ಷದವರಲ್ಲಿ ಸೌಹಾರ್ದವನ್ನು ಮೂಡಿಸಿದ ಅಪಾರ ತಾಳ್ಮೆ ಗಾಂಧಿಯವರದು.

ಇದರಿಂದ ಎರಡು ಭಾರತೀಯ ಗುಂಪಿನವರು ಕೋರ್ಟಿಗೆ ಸುತ್ತಿ ಅಪಾರ ಹಣ ವ್ಯಯ ಮಾಡುವುದು ತಪ್ಪಿ, ಸ್ನೇಹ ಮೂಡು ವಂತಾಯಿತು.

ಭಾರತೀಯರು ಮೊದಲ ಬಾರಿ, ದಕ್ಷಿಣ ಆಫ್ರಿಕದ ತೋಟ ಗಳಲ್ಲಿ ಕೂಲಿ ಕೆಲಸ ಮಾಡಲು ಹೋದುದು ೧೮೬೦ರಲ್ಲಿ. ಐದು ವರ್ಷಗಳ ಕಾಲ, ಒಪ್ಪಂದದಂತೆ ಕೆಲಸ ಮಾಡಿದ ಬಳಿಕ, ಅವರು ಸ್ವತಂತ್ರವಾಗಿ ವ್ಯಾಪಾರವನ್ನೋ ಹೊಲಗಳನ್ನೊ ಮಾಡಿ ಕೊಂಡಿರಲು ಮೊದಲು ಸ್ವಾತಂತ್ರ್ಯವಿತ್ತು. ಹೀಗೆ ಸ್ವತಂತ್ರರಾದ ಭಾರತೀಯರಲ್ಲಿ ಕೆಲವರು ವ್ಯಾಪಾರಾದಿ ಕಾರ್ಯಗಳಲ್ಲಿ ನಿರತ ರಾಗಿ, ಸುಖವಾಗಿ ಬಾಳಲಾರಂಭಿಸಿದುದು, ಬಿಳಿಯರ ಹೊಟ್ಟೆಯ ಕಿಚ್ಚಿಗೆ ಕಾರಣವಾಯಿತು. ಬಿಳಿಯರ ಸರ್ಕಾರ, ಭಾರತೀಯರ ಮೇಲೆ ತಲಾ ವರ್ಷಕ್ಕೆ ಇಪ್ಪತ್ತೈದು ಪೌಂಡ್ ತೆರಿಗೆಯನ್ನು ವಿಧಿಸಿತು. ಆಗ ಇಪ್ಪತ್ತೈದು ಪೌಂಡುಗಳೆಂದರೆ, ೩೭೫ ರೂಪಾಯಿಗಳು. ಶಾಸನ ಸಭೆಯ ಸದಸ್ಯರಾಗಲು, ಸದಸ್ಯರನ್ನು ಆಯ್ಕೆ ಮಾಡುವಾಗ ಮತದಾನ ಮಾಡಲು ಭಾರತೀಯರಿಗೆ ಮೊದಲು ಹಕ್ಕಿತ್ತು. ಕಡೆಗೆ ಆ ಸ್ವಾತಂತ್ರ್ಯವು ಅವರಿಗೆ ತಪ್ಪಿ ಹೋಯಿತು. ಅಭಿವೃದ್ಧಿ ಹೊಂದುತ್ತಿದ್ದ ಭಾರತೀಯರನ್ನು ತುಳಿಯಲು ಬಿಳಿಯ ಸರ್ಕಾರ ನಾನಾ ಕಾಯಿದೆಗಳನ್ನು ಮಾಡಿತು. ಭಾರತೀಯರ ಎಲ್ಲ ಕಷ್ಟಗಳೂ ಗಾಂಧಿಯವರಿಗೆ ತಿಳಿದುವು. ಆದರೆ ಅವರು, ತಮ್ಮ ಒಂದು ವರ್ಷದ ಕೆಲಸದ ಅವಧಿ ಮುಗಿ ದುದರಿಂದ, ಪ್ರಿಟೋರಿಯಾದಿಂದ ಡರ್ಬಾನಿಗೆ ಬಂದು ಭಾರತಕ್ಕೆ ಹಿಂತಿರುಗಲು ಸಿದ್ಧತೆ ಮಾಡಿಕೊಂಡರು. ಆಗ ಭಾರತೀಯರ ಸ್ವಾತಂತ್ರ್ಯವನ್ನು ಮತ್ತಷ್ಟು ಮೊಟಕು ಮಾಡುವ ಕಾಯಿದೆ ಯೊಂದು ಅನುಮೋದನೆಗಾಗಿ ನೇಟಾಲಿನ ವಿಧಾನಸಭೆಯ

ಮುಂದಿತ್ತು. ಆ ಕಾಯಿದೆಯನ್ನು ಪ್ರತಿಭಟಿಸಲಿಕ್ಕಾಗಿ, ಒಂದು ತಿಂಗಳ ಕಾಲವಾದರೂ ಗಾಂಧಿಯವರು ಅಲ್ಲಿರಬೇಕೆಂದು ಭಾರತೀಯರೆಲ್ಲರೂ ಒತ್ತಾಯ ಮಾಡಿದುದರಿಂದ ಅವರು ಅಲ್ಲಿಯೇ ನಿಂತರು.

ವಿಧಾನಸಭೆಯ ಮುಂದಿದ್ದ ಕಾಯಿದೆಯನ್ನು ವಿರೋಧಿಸಲು, ಗಾಂಧಿ ಮನವಿಯನ್ನು ಸಿದ್ಧಗೊಳಿಸಿ, ಐನೂರು ಮಂದಿ ಭಾರತೀಯರ ಸಹಿ ಹಾಕಿಸಿ, ಅಲ್ಲಿಯ ಮುಖ್ಯ ಮಂತ್ರಿಯವರಿಗೂ, ವಿಧಾನಸಭೆಯ ಅಧ್ಯಕ್ಷರಿಗೂ ಕಳುಹಿಸಿಕೊಟ್ಟರು. ಅದರೊಡನೆ, ಕಾಯಿದೆಯನ್ನು ಪ್ರತಿಭಟಿಸುವ ಭಾರತೀಯರ ನಿರ್ಣಯವನ್ನು ತಂತಿಯ ಮೂಲಕವೂ ಅವರಿಗೆ ತಿಳಿಸಿದರು. ಆದರೆ, ವಿಧಾನ ಸಭೆಯಲ್ಲಿ ಭಾರತೀಯರ ಸ್ವಾತಂತ್ರ್ಯಕ್ಕೆ ಧಕ್ಕೆ ತರುವ ಕಾನೂನು ಅನುಮೋದಿತವಾಯಿತು. ಆಗ, ಗಾಂಧಿಯವರು ಬ್ರಿಟಿಷ್ ವಸಾಹತುಗಳ ಕಾರ್ಯದರ್ಶಿಯವರಾದ ಲಾರ್ಡ್‌ರಿಪ್ಪನ್ ಅವರಿಗೆ, ಹತ್ತು ಸಾವಿರ ಭಾರತೀಯರ ಸಹಿಗಳಿಂದ ಕೂಡಿದ ಮನವಿಯನ್ನು ಕಳುಹಿಸಿ, ಭಾರತೀಯರಿಗೆ ನ್ಯಾಯ ಸಲ್ಲಿಸಬೇಕೆಂದು ಒತ್ತಾಯಪಡಿಸಿದರು. ಆ ಮನವಿಯ ಸಹಸ್ರಾರು ಪ್ರತಿಗಳನ್ನು ಅಚ್ಚು ಹಾಕಿಸಿ, ಭಾರತದಲ್ಲಿಯೂ ಇಂಗ್ಲೆಂಡಿನಲ್ಲಿಯೂ ವಿತರಣೆಯಾಗುವಂತೆ, ಅವರು ಮಾಡಿದುದರಿಂದ, ಭಾರತೀಯರಿಗೆ ದಕ್ಷಿಣ ಆಫ್ರಿಕದ ಭಾರತೀಯರ ಕಷ್ಟಗಳು ತಿಳಿಯುವಂತಾಯಿತು.

ನೇಟಾಲ್

ಗಾಂಧಿಯವರು ದಕ್ಷಿಣ ಆಫ್ರಿಕಾದಲ್ಲಿರಬೇಕಾದ ಒಂದು ತಿಂಗಳ ಅವಧಿಯೂ ಮುಗಿಯಿತು. ಆದರೆ ಅಲ್ಲಿಯ ಭಾರತೀಯರು ಅವರನ್ನು ಭಾರತಕ್ಕೆ ಹಿಂತಿರುಗಲು ಬಿಡಲಿಲ್ಲ. ಆಗ

ಗಾಂಧಿಯವರು ನೇಟಾಲಿನ ಸುಪ್ರೀಂ ಕೋರ್ಟಿನಲ್ಲಿ ಅಡ್ವೊಕೇಟರಾಗಿ ವ್ಯವಹರಿಸಲು ಕೋರ್ಟಿನ ಅನುಮತಿ ಕೇಳಿದರು. ಅದುವರೆಗೆ ಭಾರತೀಯ ಅಡ್ವೊಕೇಟರಾರೂ ಸುಪ್ರೀಂ ಕೋರ್ಟಿನಲ್ಲಿ ಕೆಲಸ ಮಾಡಿರಲಿಲ್ಲ. ಗಾಂಧಿಯವರು ಸುಪ್ರೀಂ ಕೋರ್ಟಿನಲ್ಲಿ ಕೆಲಸ ಮಾಡದಿರುವಂತೆ, ಬಿಳಿಯರು ಅಡ್ಡಿ ತಡೆಗಳನ್ನು ಒಡ್ಡಿದರು. ಆದರೆ, ಸರ್ಕಾರದಲ್ಲಿ ಗಾಂಧಿಯವರನ್ನು ತಡೆಹಿಡಿಯಲು ನಿಯಮವಿಲ್ಲದಿದ್ದುದರಿಂದ, ಸುಪ್ರೀಂ ಕೋರ್ಟಿನಲ್ಲಿ ಅಡ್ವೊಕೇಟರಾಗಿ ಕೆಲಸ ಮಾಡಲು ಅನುಮತಿ ದೊರಕಿತು. ಆದರೆ, ಅವರು ರುಮಾಲನ್ನು ಧರಿಸದೆ, ವ್ಯವಹರಿಸಬೇಕೆಂಬ ನಿಯಮವಾಯಿತು. ರುಮಾಲಿನ ವಿಷಯವಾಗಿ ಹೋರಾಡುವುದು ಯುಕ್ತವಲ್ಲವೆಂದು ತಿಳಿದ ಗಾಂಧಿಯವರು, ಆ ವಿಚಾರವನ್ನು ಬಿಟ್ಟು, ಅಡ್ವೊಕೇಟರಾಗಿ ಶ್ರೇಷ್ಠ ನ್ಯಾಯಾಲಯದಲ್ಲಿ ಕೆಲಸ ಮಾಡಲು ಆರಂಭಿಸಿದರು.

'ನೇಟಾಲ್ ಇಂಡಿಯನ್ ಕಾಂಗ್ರೆಸ್' ಎಂಬ ಸಂಸ್ಥೆ ಗಾಂಧಿಯವರ ನೇತೃತ್ವದಲ್ಲಿ ಉದಯವಾಯಿತು. ಆ ಸಂಸ್ಥೆಯನ್ನು ಸೇರಲು ಜಾತಿ, ಮತ, ವೃತ್ತಿಗಳ ಭೇದವಿರಲಿಲ್ಲ. ಒಂದು ದಿನ ಬಾಲಸುಂದರಂ ಎಂಬ ಕಾರ್ಮಿಕರೊಬ್ಬರು, ತಮ್ಮ ಬಿಳಿಯ ಧಣಿಯವರಿಂದ ಎರಡು ಹಲ್ಲುಗಳು ಮುರಿವವರೆಗೆ ಏಟು ತಿಂದು, ಮೈಯಲ್ಲೆಲ್ಲಾ ಗಾಯವಾಗಿ, ರಕ್ತಸಿಕ್ತವಾದ ಬಟ್ಟೆಯೊಡನೆ ಗಾಂಧಿಯವರ ಬಳಿಗೆ ಬಂದರು. ಆ ನತದೃಷ್ಟ ಕಾರ್ಮಿಕರನ್ನು ನೋಡಿ, ಗಾಂಧಿಯವರಿಗೆ ತುಂಬ ನೋವಾಯಿತು. ಅವರನ್ನು ವೈದ್ಯರ ಬಳಿಗೆ ಕರೆದುಕೊಂಡು ಹೋಗಿ, ಪರೀಕ್ಷೆ ಮಾಡಿಸಿ, ಬಿದ್ದ ಏಟಿಗಾಗಿ ಪ್ರಮಾಣ ಪತ್ರವನ್ನು ಪಡೆದರು. ಅನಂತರ, ಮ್ಯಾಜಿಸ್ಟ್ರೇಟರ ಬಳಿಗೆ ಕರೆದೊಯ್ದು ಲಿಖಿತ ಹೇಳಿಕೆಯನ್ನು

ಬಾಲಸುಂದರು ಪರವಾಗಿ ಸಲ್ಲಿಸಿದರು. ನ್ಯಾಯಾಧೀಶರಿಗೆ ಕಾರ್ಮಿಕ ಬಾಲಸುಂದರಂ ಅವರಿಗಾದ ಅನ್ಯಾಯ ಮನವರಿಕೆ ಯಾಯಿತು.

ದಕ್ಷಿಣ ಆಫ್ರಿಕದಲ್ಲಿ ಬಾಲಸುಂದರಂ ಸ್ವತಂತ್ರವಾಗಿರು ವಂತಿಲ್ಲ. ಎಲ್ಲಾದರೂ ಕೆಲಸಕ್ಕಿರಬೇಕು, ಆದುದರಿಂದ ಹೊಸ ಧಣಿಯನ್ನು ಆಶ್ರಯಿಸಬೇಕು. ಗಾಂಧೀಜಿ ಬೇರೊಬ್ಬ ಧಣಿ ಯನ್ನು ಹುಡುಕಿದರು. ಏಟು ಕೊಟ್ಟ ಬಿಳಿಯ ಧಣಿಯ ಬಳಿಗೆ ಹೋಗಿ, ಅವರು ಮಾಡಿದ ಕ್ರೌರ್ಯವನ್ನು ತಿಳಿಯುವಂತೆ ಮಾಡಿದರು ಗಾಂಧಿ. ಆ ಬಿಳಿಯ ಧಣಿ, ಬಾಲಸುಂದರಂ ಅವರ ಕರಾರು ಪತ್ರವನ್ನು ಗಾಂಧಿಯವರು ಹೇಳಿದ ಹೊಸ ಧಣಿಯ ಹೆಸರಿಗೆ ವರ್ಗಾಯಿಸಲು ಸಮ್ಮತಿಸಿದರು. ಕೆಲವು ದಿನಗಳ ವೈದ್ಯಕೀಯ ಚಿಕಿತ್ಸೆಯಿಂದ ಆರೋಗ್ಯ ಪಡೆದ ಬಳಿಕ ಬಾಲ ಸುಂದರಂ, ಹೊಸ ಧಣಿಯ ಬಳಿ ಕೆಲಸ ಮಾಡಲು ಆರಂಭಿಸಿದರು. ಈ ವಾರ್ತೆಯನ್ನು ತಿಳಿದ ಇತರ ಭಾರತೀಯ ಕಾರ್ಮಿಕರು, ಗಾಂಧಿಯವರನ್ನು ಆಪದ್ಬಾಂಧವರೆಂದು ತಿಳಿದರು.

ಭಾರತೀಯರ ಸತತವಾದ ನೈತಿಕ ಹೋರಾಟದಿಂದ, ಅವರ ಮೇಲೆ ಹೇರಿದ್ದ ವಾರ್ಷಿಕ ತಲೆಗಂದಾಯವಾದ ಇಪ್ಪತ್ತೈದು ಪೌಂಡ್, ಮೂರು ಪೌಂಡಿಗೆ ಇಳಿಯಿತು. ಕಾರ್ಮಿಕರೊಬ್ಬರ ಮನೆಯಲ್ಲಿ ಇಬ್ಬರು ಮಕ್ಕಳು ಮತ್ತು ಹೆಂಡತಿ ಇದ್ದರೆ, ನಾಲ್ವರ ಸಂಸಾರ ವರ್ಷಕ್ಕೆ ಹನ್ನೆರಡು ಪೌಂಡು ತಲೆಗಂದಾಯ ಕೊಡ ಬೇಕಾಗಿತ್ತು. ಗಾಂಧಿಯವರ ನೇತೃತ್ವದಲ್ಲಿ, ಆ ಕಾನೂನನ್ನು ವಿರೋಧಿಸಲು ಭಾರತೀಯರು ಸಂಘಟಿತರಾದರು. ೧೮೯೬ರ ಜೂನ್ ತಿಂಗಳಲ್ಲಿ ಗಾಂಧೀಜಿ ಕೆಲವು ಕಾಲ ಭಾರತದಲ್ಲಿರುವು ದಕ್ಕಾಗಿ ಬೊಂಬಾಯಿಗೆ ಪ್ರಯಾಣ ಮಾಡಿದರು.

ಭಾರತದಲ್ಲಿ ಕೆಲವು ತಿಂಗಳು

ಬೊಂಬಾಯಿಯಿಂದ ರಾಜಕೋಟೆಗೆ ಹೋದ ಬಳಿಕ ಗಾಂಧಿಯವರು, ದಕ್ಷಿಣ ಆಫ್ರಿಕದ ಭಾರತೀಯರ ಸ್ಥಿತಿಯನ್ನು ಕುರಿತು ಪುಟ್ಟ ಪುಸ್ತಕವನ್ನು ಬರೆದು, ಐದು ಸಾವಿರ ಪ್ರತಿಗಳನ್ನು ಮುದ್ರಿಸಿದರು. ಆ ಪುಸ್ತಕದ ಹೊದಿಕೆ ಹಸುರಾಗಿದ್ದುದರಿಂದ, 'ಹಸುರು ಪುಸ್ತಕ'ವೆಂದೇ ಪ್ರಚಾರವಾಯಿತು. ಈ ಹಸುರು ಪುಸ್ತಕದ ಮೊದಲ ಮುದ್ರಣದ ಪ್ರತಿಗಳೆಲ್ಲ ಮುಗಿದು, ಪುನಃ ಎರಡು ಬಾರಿ ಮುದ್ರಿತವಾದುವು ರಾಯಿಟರ್ ಸಂಸ್ಥೆಯ ಮೂಲಕ. 'ಹಸುರು ಪುಸ್ತಕ'ದ ವಿಚಾರ ಇಂಗ್ಲೆಂಡಿನ ಪತ್ರಿಕೆಗಳಲ್ಲಿ ಪ್ರಕಟವಾಯಿತು. ಅಲ್ಲಿಂದ ಆ ವಾರ್ತೆ ವಿಕೃತರೂಪ ತಾಳಿ ದಕ್ಷಿಣ ಆಫ್ರಿಕಕ್ಕೆ ಮುಟ್ಟಿತು. ಗಾಂಧಿಯವರು ದಕ್ಷಿಣ ಆಫ್ರಿಕದ ಬಿಳಿಯರನ್ನು ಅವಹೇಳನ ಮಾಡುತ್ತಿರುವರೆಂದು ತಿಳಿದ ಕೆಲವರು ಉದ್ರಿಕ್ತರಾದರು.

ದಕ್ಷಿಣ ಆಫ್ರಿಕದ ಭಾರತೀಯರ ಸ್ಥಿತಿಯನ್ನು ಕುರಿತು ಗಾಂಧೀಜಿ ಬೊಂಬಾಯಿಯ ಜಹಂಘೀರ್ ಭವನದಲ್ಲಿ ಉಪನ್ಯಾಸ ಮಾಡಿದರು. ಸಭಿಕರಿಗೆ ದಕ್ಷಿಣ ಆಫ್ರಿಕದ ಭಾರತೀಯರ ಸ್ಥಿತಿ ತಿಳಿಯುವಂತಾಯಿತು. ಪುಣೆಯಲ್ಲಿ ಪ್ರೊ॥ ಭಂಡಾರ್‌ಕರ್ ಅವರ ಅಧ್ಯಕ್ಷತೆಯಲ್ಲಿ ಗಾಂಧಿಯವರ ಉಪನ್ಯಾಸ ನಡೆಯಿತು. ಲೋಕಮಾನ್ಯ ಬಾಲಗಂಗಾಧರ ತಿಲಕ್ ಮತ್ತು ಗೋಪಾಲಕೃಷ್ಣ ಗೋಖಲೆಯವರ ಪರಿಚಯವೂ ಗಾಂಧಿಯವರಿಗೆ ಪುಣೆಯಲ್ಲಾಯಿತು. ಮದ್ರಾಸಿನಲ್ಲಿಯೂ ಅವರ ಉಪನ್ಯಾಸ ನಡೆಯಿತು. ಕಲ್ಕತ್ತೆಯನ್ನು ಸೇರಿದ ಗಾಂಧೀಜಿಯವರು ಸುರೇಂದ್ರನಾಥ ಬ್ಯಾನರ್ಜಿ, ಜ್ಯೋತೀಂದ್ರ ಮೋಹನ ಠಾಕೂರ್ ಮೊದಲಾದವರ

ಪರಿಚಯ ಮಾಡಿಕೊಂಡರು. ಗಾಂಧಿಯವರ ಭಾಷಣಕ್ಕೆ ಏರ್ಪಾಟು ನಡೆಯುತ್ತಿರುವ ಸಮಯದಲ್ಲಿಯೇ ದಕ್ಷಿಣ ಆಫ್ರಿಕದ ನೇಟಾಲಿನಿಂದ, ಅವರು ಕೂಡಲೆ ಹೊರಟು ಬರಬೇಕೆಂಬ ತಂತಿ ಸಮಾಚಾರ ಬಂದಿತು.

ಗಾಂಧಿಯವರು ಕೂಡಲೆ ಕಲ್ಕತ್ತೆಯಿಂದ ಹೊರಟು ರಾಜಕೋಟೆಗೆ ಹೋಗಿ, ತಮ್ಮ ಸಂಸಾರದೊಡನೆ ೧೮೯೬ರ ಡಿಸೆಂಬರ್ ತಿಂಗಳ ಮೊದಲ ವಾರದಲ್ಲಿ ಬೊಂಬಾಯಿಯಿಂದ ಹಡಗಿನಲ್ಲಿ ದಕ್ಷಿಣ ಆಫ್ರಿಕಾಕ್ಕೆ ಪ್ರಯಾಣ ಮಾಡಿದರು. ದಾದಾ ಅಬ್ದುಲ್ಲಾ ಅವರಿಗೆ ಸೇರಿದ, 'ಕೋರ್‌ಲ್ಯಾಂಡ್' ಮತ್ತು' ನದೇರಿ' ಎಂಬ ಎರಡು ಹಡಗುಗಳು ಬೊಂಬಾಯಿಯಿಂದ ದಕ್ಷಿಣ ಆಫ್ರಿಕಾಕ್ಕೆ ಪ್ರಯಾಣ ಮಾಡಿದುವು. ಗಾಂಧಿಯವರು ತಮ್ಮ ಸಂಸಾರದೊಡನೆ ಪ್ರಯಾಣ ಮಾಡಿದುದು ಅವುಗಳಲ್ಲಿ ಒಂದು ಹಡಗಿನಲ್ಲಿ.

ಪುನಃ ದಕ್ಷಿಣ ಆಫ್ರಿಕ

ಗಾಂಧಿಯವರು ಭಾರತೀಯರಿಂದ ತುಂಬಿದ ಎರಡು ಹಡಗುಗಳನ್ನು ನೇಟಾಲಿಗೆ ತರುತ್ತಿರುವರೆಂದೂ, 'ಹಸುರು ಪುಸ್ತಕ'ದ ಮೂಲಕ ದಕ್ಷಿಣ ಆಫ್ರಿಕದ ಬಿಳಿಯರನ್ನು ಅವಹೇಳನ ಮಾಡಿದುದಲ್ಲದೆ, ದಕ್ಷಿಣ ಆಫ್ರಿಕದಲ್ಲಿ ಭಾರತೀಯರ ಸಂಖ್ಯೆ ಹೆಚ್ಚು ಮಾಡುವ ತಂತ್ರ ಗಾಂಧಿಯವರೆಂದೂ ಬಿಳಿಯರಲ್ಲಿ ಕೆಲವರು ತಿಳಿದು ಕ್ರೋಧೋನ್ಮತ್ತರಾದರು. ಬಿಳಿಯರದು ಕೇವಲ ಕುಕಲ್ಪನೆ. ಅದರಲ್ಲಿ ಸತ್ಯವಿರಲಿಲ್ಲ. ಆದರೆ, ಮನಸ್ಸು ಉದ್ವಿಗ್ನವಾದಾಗ ವಿಚಾರಕ್ಕೆ ಸ್ಥಾನವೆಲ್ಲಿ? ಭಾರತದಿಂದ ಬಂದ ಎರಡು ಹಡಗುಗಳೂ ಭಾರತಕ್ಕೆ ಹಿಂತಿರುಗಬೇಕೆಂಬುದು ಬಿಳಿಯರ

ಷರತ್ತು. ಭಾರತೀಯರು ಹಡಗಿನಿಂದ ಇಳಿದರೆ, ಅವರೆಲ್ಲರನ್ನೂ ಸಮುದ್ರಕ್ಕೆ ತಳ್ಳುವುದಾಗಿ, ಅವರ ಆರ್ಭಟ.

ಹಡಗಿನಲ್ಲಿದ್ದ ಭಾರತೀಯರು, ತಾವು ಸತ್ತರೂ ಭಾರತಕ್ಕೆ ಹಿಂತಿರುಗಬಾರದೆಂಬ ನಿರ್ಧಾರಕ್ಕೆ ಬಂದರು. ಇಪ್ಪತ್ತಮೂರು ದಿನಗಳ ಕಾಲ ಹಡಗಿನಿಂದ ಭಾರತೀಯರಾರೂ ಇಳಿಯಲಿಲ್ಲ. ಸಮುದ್ರ ತೀರದಲ್ಲಿ ಸೇರಿದ್ದ ಬಿಳಿಯರ ಗುಂಪನ್ನು, ಎಸ್‌ಕೊಂಬೇ ಎಂಬ ದಕ್ಷಿಣ ಆಫ್ರಿಕದ ಸರ್ಕಾರದ ಒಬ್ಬ ಅಧಿಕಾರಿ, ಸಮಾಧಾನ ಮಾಡಿ ಚೆದುರುವಂತೆ ಮಾಡಿದರು. ಆದರೆ ಕೆಲವರು ಗಾಂಧಿ ಯವರ ಮೇಲೆ ಸೇಡು ತೀರಿಸಿಕೊಳ್ಳಲು ಕಾದಿದ್ದರು. ಹಡಗಿನ ಕ್ಯಾಪ್ಟನ್ ಹೇಳಿದ ಹಿತವಚನದಂತೆ, ಗಾಂಧಿಯವರು ತಮ್ಮ ಸಂಸಾರವನ್ನು ತಾವು ಇಳಿಯುವ ಮೊದಲೇ ರುಸ್ತುಂಜೀಯವರ ಮನೆಗೆ ಕಳುಹಿಸಿದರು. ಅನಂತರ ಅವರು ತಮ್ಮ ಮಿತ್ರರೂ ಹಿರಿಯ ಅಡ್ವೊಕೇಟರೂ ಆದ ಲಾಟನ್ ಅವರೊಡನೆ ಹಡಗಿ ನಿಂದಿಳಿದು, ರುಸ್ತುಂಜೀಯವರ ಮನೆಗೆ ಹೊರಟರು.

ಸಮುದ್ರ ತೀರದಲ್ಲಿದ್ದ ಕೆಲವು ಹುಡುಗರು, ಗಾಂಧಿಯವರನ್ನು ಕಂಡು, "ಗಾಂಧೀ, ಗಾಂಧೀ" ಎಂದು ಕೂಗುತ್ತ, "ಹೊಡಿ, ಬಡಿ" ಎಂದು ಕಿರಿಚಿದರು. ಆಗ. ಹುಡುಗರ ಕಾಟದಿಂದ ಪಾರಾಗಲು ಲಾಟನ್ ಅವರು ರಿಕ್ಷಾ ಗೊತ್ತು ಮಾಡಿದರು. ಆದರೆ, ಅಷ್ಟು ಹೊತ್ತಿಗೆ ಬಿಳಿಯರ ಗುಂಪು ಸೇರಿ, ರಿಕ್ಷಾ ಸಾರಥಿಯನ್ನು ಹೆದರಿಸಿ ಓಡಿಸಿತು. ಬೇರೆ ಮಾರ್ಗವಿಲ್ಲದೆ, ಗಾಂಧಿಯವರು ಲಾಟನ್ ಅವರೊಡನೆ ಕಾಲ್ನಡಿಗೆಯಲ್ಲಿಯೇ ಮುಂದುವರಿದರು. ಅದನ್ನು ಕಂಡು, ಬಲವಾದ ಬಿಳಿಯನೊಬ್ಬನು ಲಾಟನ್ನರನ್ನು ಬಲಾತ್ಕಾರ ವಾಗಿ ಗಾಂಧಿಯವರ ಹತ್ತಿರದಿಂದ ಎಳೆದುಕೊಂಡು ಹೋದನು. ಗಾಂಧಿಯವರು ಒಂಟಿಯಾದ ಬಳಿಕ, ಒಬ್ಬ ಅವರ ರುಮಾಲನ್ನು

ಕಿತ್ತು ಎಸೆದನು. ಮತ್ತೊಬ್ಬ ಅವರ ಕೆನ್ನೆಗೆ ಹೊಡೆದನು. ಇನ್ನೊಬ್ಬ ಅವರಿಗೆ ಒದ್ದನು. ಮತ್ತೆ ಕೆಲವರು ಸಿಕ್ಕಿದ್ದರಲ್ಲಿ ಅವರಿಗೆ ಹೊಡೆದರು. ಹುಚ್ಚೆದ್ದ ಬಿಳಿಯರ ಸ್ವಚ್ಛಂದ ವರ್ತನೆಗೆ ಪೂರ್ಣಾವಕಾಶ ದೊರಕಿದಂತಾಯಿತು. ಏಟು ತಿಂದು ಬಳಲಿದ ಗಾಂಧಿಯವರಿಗೆ ತಲೆ ಸುತ್ತತೊಡಗಿತು. ಆಗ ಹತ್ತಿರವಿದ್ದ ದಾರಿಯ ಮನೆಯ ಮುಂದಿದ್ದ ಕಂಬಿಯನ್ನು ಹಿಡಿದು ನಿಂತರು. ಆ ಸಮಯಕ್ಕೆ ಅದೇ ದಾರಿಯಲ್ಲಿ ಬರುತ್ತಿದ್ದ ಪೊಲೀಸ್ ಸೂಪರಿನ್‌ಟೆನ್‌ಡೆಂಟರ ಪತ್ನಿ, ಗಾಂಧಿಯವರ ಸ್ಥಿತಿಯನ್ನು ಕಂಡು, ಅವರ ಬಳಿಗೆ ಹೋದರು. ತಮ್ಮ ಛತ್ರಿಯನ್ನು ಗಾಂಧಿಯವರ ರಕ್ಷೆಗಾಗಿ ಬಿಚ್ಚಿ, ಅವರೊಡನೆ ಮುಂದೆ ಸಾಗಿದರು. ಗಾಂಧಿಯವರನ್ನು ಹಿಂಸಿಸಿದ ಬಿಳಿಯರ ಗುಂಪು, ಆ ಮಹಿಳೆಗೆ ಅಗೌರವವನ್ನುಂಟು ಮಾಡದೆ, ಚೆದರಿ ಹೋಯಿತು. ಅದೇ ಸಮಯಕ್ಕೆ ಪೊಲೀಸ್ ಸೂಪರಿನ್‌ಟೆನ್‌ಡೆಂಟ್ ಅಲೆಕ್ಸಾಂಡರರಿಗೆ ಗಾಂಧಿಯವರ ಸ್ಥಿತಿ ತಿಳಿದು, ಅವರ ರಕ್ಷೆಗಾಗಿ ಕೆಲವು ಪೊಲೀಸರನ್ನು ಕಳುಹಿಸಿದರು. ಗಾಂಧಿಯವರು ಪೊಲೀಸ್ ಠಾಣೆಯನ್ನು ಸೇರಿದ ಬಳಿಕ, ಅಲ್ಲಿಯೇ ವಿಶ್ರಮಿಸಿಕೊಳ್ಳಲು ಸೂಪರಿನ್‌ಟೆನ್‌ಡೆಂಟರು ಅವರಿಗೆ ಸಲಹೆ ಮಾಡಿದರು. ಅವರಿಗೆ ಕೃತಜ್ಞತೆಯನ್ನು ಸಲ್ಲಿಸಿ, ಗಾಂಧಿಯವರು ರುಸ್ತುಂಜೀಯವರ ಮನೆ ಸೇರಿದರು.

ಔಷಧೋಪಚಾರಗಳಿಂದ ಗಾಂಧಿಯವರು ಚೇತರಿಸಿಕೊಳ್ಳುತ್ತಿದ್ದಾಗಲೆ, ಬಿಳಿಯರ ದೊಡ್ಡ ಗುಂಪು, ರುಸ್ತುಂಜೀಯವರ ಮನೆಗೆ ಮುತ್ತಿಗೆ ಹಾಕಿ, "ಗಾಂಧಿಯನ್ನು ನಮಗೆ ಒಪ್ಪಿಸಿ; ಇಲ್ಲವಾದರೆ, ಮನೆಗೆ ಬೆಂಕಿಹಾಕಿ ಸುಟ್ಟು ಬಿಡುತ್ತೇವೆ" ಎಂದು ರ್ಘಟಿಸಿತು. ಈ ವಿಚಾರ ಪೊಲೀಸ್ ಸೂಪರಿನ್‌ಟೆನ್‌ಡೆಂಟರಿಗೆ ತಿಳಿದು, ಅವರು ಗುಪ್ತ ಪೊಲೀಸ್ ದಳದೊಂದಿಗೆ ಅಲ್ಲಿಗೆ ಹೋಗಿ,

ಒಂದು ಚೀಟಿಯನ್ನು ಗುಪ್ತ ಪೋಲೀಸರ ಮೂಲಕ ಗಾಂಧಿಯವರಿಗೆ ಕಳುಹಿಸಿದರು. ಅದರಲ್ಲಿ, "ನಿಮ್ಮ ಸ್ನೇಹಿತರ ಆಸ್ತಿಯನ್ನೂ, ನಿಮ್ಮ ಸಂಸಾರವನ್ನೂ, ನಿಮ್ಮ ಸ್ನೇಹಿತರ ಕುಟುಂಬದವರನ್ನೂ ರಕ್ಷಿಸುವ ಆಶೆಯಿದ್ದರೆ, ಈ ಕೂಡಲೆ ಪೊಲೀಸ್ ಕಾನ್‌ಸ್ಟೇಬಲ್ ಉಡುಪಿನಲ್ಲಿ ಹೊರಬಂದು, ಗುಂಪಿನಿಂದ ದೂರ ಹೋಗಿ. ನಿಮ್ಮನ್ನು ಪೊಲೀಸ್ ಠಾಣೆಗೆ ಕರೆದೊಯ್ಯಲು, ರಸ್ತೆಯ ತಿರುವಿನಲ್ಲಿ ವಾಹನ ಸಿದ್ಧವಾಗಿದೆ. ನನ್ನ ಸಲಹೆಯನ್ನು ಕೂಡಲೆ ಗಮನಿಸದಿದ್ದರೆ, ರುಸ್ತುಂಜೀಯವರ ಮನೆ ಭಸ್ಮವಾಗುತ್ತದೆ. ಎಷ್ಟು ಜನ ಬೂದಿಯಾಗುವರೋ ನನಗೆ ತಿಳಿಯದು"-ಎಂಬುದಾಗಿ ಪರಿಸ್ಥಿತಿಯ ಚಿತ್ರಣವಿತ್ತು. ಕ್ಷಣ ಕಾಲ ಯೋಚಿಸಿ, ಗಾಂಧಿಯವರು ಸೂಪರಿನ್‌ಟೆನ್‌ಡೆಂಟರು ಹೇಳಿದಂತೆಯೇ ಮಾಡಿ, ಸುರಕ್ಷಿತವಾಗಿ ಪೋಲೀಸ್‌ಠಾಣೆಯಲ್ಲಿ ರಕ್ಷಣೆ ಪಡೆದರು.

ಗಾಂಧಿಯವರು ಸುರಕ್ಷಿತವಾಗಿ ಪೊಲೀಸ್ ಠಾಣೆಯನ್ನು ಸೇರಿದ ವೃತ್ತಾಂತವನ್ನು ತಿಳಿದ ಪೊಲೀಸ್ ಸೂಪರಿನ್‌ಟೆನ್‌ಡೆಂಟರು, ಜನಸ್ತೋಮವನ್ನು ಕುರಿತು ಮಾತನಾಡಿದರು.

"ನಿಮಗೇನು ಬೇಕು?"

"ನಮಗೆ ಗಾಂಧಿ ಬೇಕು."

"ಅವರನ್ನು ಪಡೆದು ಏನು ಮಾಡುತ್ತೀರಿ?"

"ಅವರನ್ನು ಸುಟ್ಟು ಹಾಕುತ್ತೇವೆ."

"ಅವರು ನಿಮಗೆ ಏನು ತೊಂದರೆ ಮಾಡಿದ್ದಾರೆ?"

"ಅವರು ಭಾರತದಲ್ಲಿ ದಕ್ಷಿಣ ಆಫ್ರಿಕದ ಬಿಳಿಯರಿಗೆ ಅಪಮಾನ ಮಾಡಿದ್ದಾರೆ."

"ಅವರು ಮನೆಯಿಂದ ಹೊರಗೆ ಬಾರದಿದ್ದರೆ ಏನು ಮಾಡುತ್ತೀರಿ?"

"ನಾವು ಈ ಮನೆಯನ್ನು ಸುಟ್ಟು ಹಾಕುತ್ತೇವೆ".

"ಮನೆಯಲ್ಲಿ ಅವರ ಸಂಸಾರವಿದೆ, ಇತರರೂ ಇದ್ದಾರೆ. ಮಹಿಳೆಯರನ್ನೂ ಮಕ್ಕಳನ್ನೂ ನಿರಪರಾಧಿಗಳನ್ನೂ ಸುಡುತ್ತೇವೆ ಎಂದು ಹೇಳಲು ನಿಮಗೆ ನಾಚಿಕೆಯಾಗುವುದಿಲ್ಲವೆ?"

"ಆ ಜವಾಬ್ದಾರಿ ನಿಮ್ಮದು. ನಮಗೆ ಗಾಂಧಿ ಸಿಕ್ಕಿದರೆ ಸಾಕು. ಉಳಿದವರನ್ನು ನಾವು ಏನೂ ಮಾಡುವುದಿಲ್ಲ. ಆ ದುಷ್ಟ ಗಾಂಧಿಯನ್ನು ನಮಗೆ ಒಪ್ಪಿಸದಿದ್ದರೆ ಅದರಿಂದಾಗುವ ಅನಾಹುತಕ್ಕೆ ನೀವೇ ಹೊಣೆ."

"ಗಾಂಧಿ ಈಗಾಗಲೆ ಇಲ್ಲಿಂದ ಹೊರಟು ಹೋಗಿದ್ದಾರೆ" ಜನರ ಗುಂಪು ಗಟ್ಟಿಯಾಗಿ ನಕ್ಕು,

"ಸುಳ್ಳು, ಸುಳ್ಳು" ಎಂದು ಕೂಗಿತು.

"ಮೂರು ಅಥವಾ ನಾಲ್ಕು ಜನ ನಿಮ್ಮ ಪ್ರತಿನಿಧಿಗಳು ರುಸ್ತುಂಜೀಯವರ ಮನೆಯನ್ನು ಹುಡುಕಲಿ; ಗಾಂಧಿಯವರು ಮನೆಯಲ್ಲಿಲ್ಲದಿದ್ದರೆ, ನೀವೆಲ್ಲ ಶಾಂತರಾಗಿ ನಿಮ್ಮ ಮನೆಗೆ ಹೋಗಬೇಕು."

ರುಸ್ತುಂಜೀಯವರ ಮನೆಯಲ್ಲಿ ಗಾಂಧಿಯವರನ್ನು ಕಾಣದೆ, ಬಂದ ಗುಂಪು ಕರಗಿ ಹೋಯಿತು.

ಈ ರೀತಿಯ ಚಾಕಚಕ್ಯತೆಯಿಂದ ಸೂಪರಿನ್‌ಟೆನ್‌ಡೆಂಟರು, ಭಯಂಕರ ಅನಾಹುತವನ್ನು ತಪ್ಪಿಸಿದರು. ಈ ಘಟನೆ ನಡೆದದ್ದು ಜನವರಿ ೧೩, ೧೮೯೭ರಂದು.

ಗಾಂಧಿಯವರು ತಮ್ಮ ಸಂಸಾರದೊಡನೆ ದಕ್ಷಿಣ ಆಫ್ರಿಕದಲ್ಲಿ ನೆಲಸಿದ ಬಳಿಕ ತಮ್ಮ ಖರ್ಚನ್ನು ಕಡಿಮೆ ಮಾಡಿಕೊಂಡು ಬದುಕಲು ಯತ್ನಿಸಿದರು. ತಮ್ಮ ಬಟ್ಟೆಗಳನ್ನು ತಾವೇ ಇಸ್ತ್ರಿ

ಮಾಡಿಕೊಂಡರು. ತಮ್ಮ ತಲೆಗೂದಲನ್ನು ತಾವೇ ಕತ್ತರಿಸಿ ಕೊಂಡರು. ದಕ್ಷಿಣ ಆಫ್ರಿಕದ ಬಿಳಿಯ ಕ್ಷೌರಿಕರು ವರ್ಣೀಯ ರಾದ ಗಾಂಧಿಯವರ 'ಕ್ರಾಪ್' ಮಾಡಲು ನಿರಾಕರಿಸಿದುದನ್ನು ಕಂಡು ಗಾಂಧಿಯವರು ಚಿಂತಿಸಲಿಲ್ಲ. ಅನಾವಶ್ಯಕವಾದ ಖರ್ಚನ್ನು ನಿಲ್ಲಿಸಿ, ಸರಳ ಜೀವನ ನಡೆಸುವುದು ಆತ್ಮವಿಕಾಸಕ್ಕೆ ಸಹಾಯಕ ಎಂಬುದನ್ನು ಅವರು ಕಂಡುಕೊಂಡರು.

ಬೋಯರ್ ಯುದ್ಧ

ಡಚ್ ಸಂತತಿಗೆ ಸೇರಿದವರೇ ಬೋಯರ್ ಜನರು. ಅವರೂ ಕೂಡ ದಕ್ಷಿಣ ಆಫ್ರಿಕದಲ್ಲಿ ನೆಲಸಿದವರು. ಅವರು ಸ್ವಾತಂತ್ರ್ಯ ಪ್ರಿಯರು. ತಮ್ಮ ಸ್ವಾತಂತ್ರ್ಯ ಹಾಗೂ ಹಕ್ಕುಗಳಿಗಾಗಿ ಅವರು ಹೋರಾಡಬೇಕಾಯಿತು. ಬ್ರಿಟಿಷರು ಬೋಯರರ ಮೇಲೆ ಯುದ್ಧವನ್ನು ಆರಂಭಿಸಿದರು. ಆ ಸಮಯದಲ್ಲಿ ಗಾಂಧಿ ಯವರು ಒಂದು ಸಾವಿರದ ಒಂದು ನೂರು ಜನರಿಂದ ಕೂಡಿದ 'ಇಂಡಿಯನ್ ಆ್ಯಂಬುಲೆನ್ಸ್ ಕೋರ್' ಎಂಬ ತಂಡವನ್ನು ಆರಂಭಿಸಿದರು. ಈ ತಂಡ, ಯುದ್ಧಕಾಲದಲ್ಲಿ ಪ್ರಾಣಭೀತಿ ಯನ್ನೇ ತ್ಯಜಿಸಿ, ಯುದ್ಧಕ್ಷೇತ್ರದ ನಡುವೆಯೇ ಸೇವೆ ಸಲ್ಲಿಸಿತು. ಕೆಲವು ವೇಳೆ ಈ ಸೇವಾತಂಡ, ಗಾಯಗೊಂಡ ಸೈನಿಕರನ್ನು ಇಪ್ಪತ್ತು ಅಥವಾ ಇಪ್ಪತ್ತೈದು ಮೈಲಿಗಳ ದೂರ ಹೊತ್ತು ಕೊಂಡು ಹೋಗಿ ಚಿಕಿತ್ಸಾಲಯಗಳಿಗೆ ಸೇರಿಸಬೇಕಾಗಿತ್ತು. ಒಂದೊಂದು ಬಾರಿ ಈ ಸೇವಾತಂಡಕ್ಕೆ ಸೇರಿದ ಸ್ವಯಂ ಸೇವಕರು ಗುಂಡಿನೇಟಿಗೆ ಸಿಕ್ಕಿ ಸಾಯುತ್ತಿದ್ದರು. ಆದರೆ ಸೇವಾತಂಡದ ಧೈರ್ಯ ಕುಗ್ಗಲಿಲ್ಲ. ಸೇವಾತಂಡದ ನಿಸ್ವಾರ್ಥ ಸೇವೆಯನ್ನು ಕಂಡು ಬಿಳಿಯರೂ ಮೆಚ್ಚಿಕೊಂಡರು.

ಪುನಃ ಭಾರತದಲ್ಲಿ

ಬೋಯರ್ ಯುದ್ಧ ಮುಗಿದ ಬಳಿಕ ೧೯೦೧ರಲ್ಲಿ ಗಾಂಧಿಯವರು ತಮ್ಮ ಸಂಸಾರದೊಡನೆ ಭಾರತಕ್ಕೆ ಹಿಂತಿರುಗಿದರು. ಕಲ್ಕತ್ತೆಯ ರಾಷ್ಟ್ರೀಯ ಕಾಂಗ್ರೆಸ್ ಸಮ್ಮೇಳನದಲ್ಲಿ ಭಾಗವಹಿಸಿದ ಅವರಿಗೆ, ಭಾರತದ ರಾಜಕಾರಣಿಗಳು ಮಾತಿನಮಲ್ಲರಾಗಿ ಕಂಡರು. ಅಸ್ಪೃಶ್ಯತೆಯೂ ಅಲ್ಲಿ ಎದ್ದು ಕಾಣುತ್ತಿತ್ತು. ಪ್ರತಿನಿಧಿಗಳು ಉಪಯೋಗಿಸುತ್ತಿದ್ದ ಕಕ್ಕಸುಗಳಲ್ಲಿ ದುರ್ನಾತ ಹೊಡೆಯುತ್ತಿತ್ತು. ಇದನ್ನು ಕಂಡು ನೊಂದುಕೊಂಡ ಗಾಂಧಿಯವರು ಪರಕೆಯನ್ನು ಕೈಗೆ ತೆಗೆದುಕೊಂಡು ತಾವೇ ಕಕ್ಕಸುಗಳನ್ನು ಶುದ್ಧಗೊಳಿಸಿದರು. ಇತರರಿಗೆ ಅದರ ಪರಿವೆಯೇ ಇರಲಿಲ್ಲ.

ಒಂದು ದಿನ ಗಾಂಧಿಯವರು ಕಲ್ಕತ್ತೆಯಲ್ಲಿದ್ದ ಕಾಳೀಘಾಟಿಗೆ ಹೋದಾಗ, ಅಲ್ಲಿ ಪ್ರಾಣಿಗಳ ಬಲಿಯಾಗಿ ರಕ್ತ ಹರಿಯುತ್ತಿದ್ದುದನ್ನು ಕಂಡು ಮರುಗಿದರು. ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ, ಪ್ರಾಣಿಹತ್ಯೆಯನ್ನು ನಿಲ್ಲಿಸುವ ಸಂಕಲ್ಪಮಾಡಿ, ಅವರು ರಾಜಕೋಟೆಗೆ ಹಿಂತಿರುಗಿದರು. ಆ ಸಮಯಕ್ಕೆ ದಕ್ಷಿಣ ಆಫ್ರಿಕದ ಡರ್ಬಾನಿನಿಂದ ಅವರಿಗೆ ಬಂದ ತಂತೀ ಸಮಾಚಾರ ಅವರು ಕೂಡಲೆ ದಕ್ಷಿಣ ಆಫ್ರಿಕಕ್ಕೆ ಬರಬೇಕೆಂದು ತಿಳಿಸಿತು. ಗಾಂಧಿಯವರು ೧೯೦೨ರ ಡಿಸೆಂಬರ್ ತಿಂಗಳಲ್ಲಿ ದಕ್ಷಿಣ ಆಫ್ರಿಕವನ್ನು ಸೇರಿದರು.

ದಕ್ಷಿಣ ಆಫ್ರಿಕಾದಲ್ಲಿ ಹೋರಾಟ

ಗಾಂಧಿಯವರು ಜೊಹಾನ್ಸ್‌ಬರ್ಗಿನಲ್ಲಿ ನೆಲಸಿದರು. ಅವರ ಆಫೀಸು ಮತ್ತು ವಸತಿ ಒಂದೇ ಗೃಹದಲ್ಲಿರುವಂತೆ ಮಾಡಿಕೊಂಡರು. ‘ಇಂಡಿಯನ್ ಒಪೀನಿಯನ್’ ಎಂಬ ಪತ್ರಿಕೆಯನ್ನು

ಆರಂಭಿಸಿದರು. ಆದರಲ್ಲಿ ಇಂಗ್ಲಿಷ್, ಗುಜರಾತಿ, ಹಿಂದಿ ಮತ್ತು ತಮಿಳು ಈ ನಾಲ್ಕು ಭಾಷೆಗಳಲ್ಲಿ ಲೇಖನಗಳು ಪ್ರಕಟವಾದುವು. 'ಟ್ರಾನ್ಸ್‌ವಾಲ್ ಕ್ರಿಟಿಕ್' ಎಂಬ ಪತ್ರಿಕೆಯ ಸಂಪಾದಕೀಯ ಮಂಡಲಿಯಲ್ಲಿ ಕೆಲಸ ಮಾಡುತ್ತಿದ್ದ ಹೆನ್ರಿ ಪೋಲಕ್ ಎಂಬ ಇಂಗ್ಲಿಷ್ ತರುಣ, ಗಾಂಧೀಜಿಯವರ ಅನುಯಾಯಿಯಾಗಿ, 'ಇಂಡಿಯನ್ ಒಪೀನಿಯನ್' ಪತ್ರಿಕೆಗಾಗಿ ಕೆಲಸ ಮಾಡಲು ಆರಂಭಿಸಿದರು.

೧೯೦೪ರಲ್ಲಿ ಪ್ಲೇಗ್ ಹಾವಳಿ ಭಾರತೀಯರನ್ನು ಕಷ್ಟಕ್ಕೀಡು ಮಾಡಿತು. ಆಗ ಪ್ರಾಣ ಭೀತಿಯನ್ನು ತೊರೆದು, ಸೇವಾ ಕಾರ್ಯದಲ್ಲಿ ಮಗ್ನರಾದ ಗಾಂಧಿಯವರು ಶಕ್ತಿಮೀರಿ ದುಡಿದರು.

ಡರ್ಬಾನಿನಿಂದ ಹದಿನಾಲ್ಕು ಮೈಲಿಗಳ ದೂರದಲ್ಲಿದ್ದ ನಿವೇಶನವನ್ನು ಗಾಂಧಿಯವರು ಕೊಂಡು, ಅಲ್ಲಿ 'ಇಂಡಿಯನ್ ಒಪೀನಿಯನ್' ಪತ್ರಿಕೆಯ ಅಚ್ಚುಕೂಟವನ್ನೂ ಕಾರ್ಮಿಕರ ವಸತಿಯನ್ನೂ ಸ್ಥಾಪಿಸಿದರು. ಆ ವಸತಿ ಫೀನಿಕ್ಸ್ ಎಂಬ ರೈಲ್ವೇ ನಿಲ್ದಾಣದ ಬಳಿ ಇದ್ದುದರಿಂದ, ಫೀನಿಕ್ಸ್ ವಸತಿ ಎಂದು ಹೆಸರಾಯಿತು.

ಜೂಲು ಜನರ ಶುಶ್ರೂಷೆ

ಗಾಂಧಿಯವರು ಜೊಹಾನ್ಸ್‌ಬರ್ಗಿನಲ್ಲಿ ನೆಲಸಿದ ಬಳಿಕ ರಾಜಕೋಟೆಯಿಂದ ತಮ್ಮ ಸಂಸಾರವನ್ನು ಕರೆಸಿಕೊಂಡರು. ಪೋಲಕ್ ದಂಪತಿಗಳೂ ಅವರೊಡನೆ ನೆಲಸಿದರು. ಆಫ್ರಿಕದ ನಿವಾಸಿಗಳಾದ ಕಪ್ಪು ಜನರೇ ಜೂಲುಗಳು. ಅವರ ಮೇಲೆ ಅನ್ಯಾಯವಾಗಿ ಬಿಳಿಯ ಸರ್ಕಾರ ತೆರಿಗೆಯನ್ನು ವಿಧಿಸಿತು.

ದನ್ನು ಜೂಲುಗಳು ಎದುರಿಸಿದಾಗ ಸರ್ಕಾರ, ಅದನ್ನು
ೂಲು ದಂಗೆಯೆಂದು ಕರೆದು, ಆ ಬಡಪಾಯಿಗಳನ್ನು ಸ್ವೇಚ್ಛೆ
ಯಾಗಿ ಥಳಿಸಿತು. ಹಲವರನ್ನು ವಿವೇಕವಿಲ್ಲದೆ ಕೊಂದಿತು.
ಗ ಗಾಂಧಿಯವರು ತಮ್ಮ ಸಂಸಾರವನ್ನು ಫೀನಿಕ್ಸ್ ವಸತಿಗೆ
ಸುಹಿಸಿ, ತಾವು ಸ್ವಯಂಸೇವಕರ ತಂಡವನ್ನು ನಿರ್ಮಿಸಿ
ಯಗೊಂಡ ಜೂಲುಗಳಿಗೆ ಶುಶ್ರೂಷೆ ಮಾಡಲು ಆರಂಭಿಸಿ
ರು. ಜೂಲುಗಳ ಕರುಣಾಜನಕವಾದ ಸ್ಥಿತಿಯನ್ನು
ಡ ಅವರಿಗೆ ಬಿಳಿಯರ ಕ್ರೌರ್ಯದ ತೀವ್ರತೆ ಅರಿವಾಯಿತು.
ಜೂಲುಗಳ ಸೇವಾಕಾರ್ಯ ಮುಗಿದ ಬಳಿಕ ಗಾಂಧಿಯವರು
ಮಾಜಕ್ಕೆ ಹೆಚ್ಚಿನ ಸೇವೆ ಸಲ್ಲಿಸುವ ಉದ್ದೇಶದಿಂದ, ಆಜೀವನ
ರ್ಯಂತ ಬ್ರಹ್ಮಚಾರಿಯಾಗಿರಲು ಸಂಕಲ್ಪಮಾಡಿ, ಬ್ರಹ್ಮ
ರ್ಯ ದೀಕ್ಷೆಯನ್ನು ಸ್ವೀಕರಿಸಿದರು. ಆ ಸಮಯದಲ್ಲಿ
ವರ ಪತ್ನಿ ಕಸ್ತೂರಿ ಬಾ ರಕ್ತಸ್ರಾವದಿಂದ ಬಳಲಿ, ಮೂಳೆ
ರ್ಮವಾಗಿದ್ದರು. ಅವರ ಆರೋಗ್ಯ ಸುಧಾರಣೆಗಾಗಿ ಗಾಂಧೀಜಿ
ಯವರು ಬಹಳ ಕಷ್ಟಪಡಬೇಕಾಯಿತು.

ರಾಳ ಶಾಸನ

ದಕ್ಷಿಣ ಆಫ್ರಿಕದ ಸರ್ಕಾರ ೧೯೦೭ರ ಜುಲೈ ತಿಂಗಳ ಒಂದನೆ
ರೀಖಿನಿಂದ ವರ್ಣೀಯರೆಲ್ಲರೂ ತಮ್ಮ ಹೆಸರನ್ನು ನೋಂದಾ
ಯಿಸಿಕೊಳ್ಳಬೇಕೆಂಬ ಕರಾಳ ಶಾಸನವನ್ನು ಜಾರಿಗೆ ತಂದು, ಶಾಸನ
ನ್ನು ಉಲ್ಲಂಘಿಸಿದವರಿಗೆ ಸೆರೆಮನೆ, ದಂಡ, ಗಡೀಪಾರು ಇತ್ಯಾದಿ
ಕ್ಷೆ ಎಂದು ಘೋಷಿಸಿತು. ಆ ಶಾಸನ ಅಯುಕ್ತವೆಂದು ಗಾಂಧಿ
ಯವರು ಸರ್ಕಾರದೊಡನೆ ವಾದಿಸಿದರು. ಅವರ ಪ್ರಯತ್ನ ವಿಫಲ
ಾಗಲು ಅವರು ಇಂಗ್ಲೆಂಡಿಗೆ ಹೋಗಿ ನ್ಯಾಯಕ್ಕಾಗಿ ಬ್ರಿಟಿಷ್

ಮನವಿ ಮಾಡಿದರು. ಆದರೆ ಬ್ರಿಟಿಷ್ ಸರ್ಕಾರದಿಂದ ಯಾವ ಆಶ್ವಾಸನೆಯೂ ದೊರಕದಿದ್ದುದರಿಂದ ಗಾಂಧಿಯವರು ದಕ್ಷಿಣ ಆಫ್ರಿಕಕ್ಕೆ ಹಿಂತಿರುಗಬೇಕಾಯಿತು.

ಟಾಲ್‌ಸ್ಟಾಯ್ ಫಾರಂ

ದಕ್ಷಿಣ ಆಫ್ರಿಕದಲ್ಲಿ ತಮ್ಮ ಹಕ್ಕುಗಳಿಗಾಗಿ ಹೋರಾಡುವ ಭಾರತೀಯರು ಸೆರೆಮನೆಗೆ ಹೋದಾಗ, ಅವರ ಸಂಸಾರವನ್ನು ನೋಡಿಕೊಳ್ಳಲು ಯಾರೂ ಇರುತ್ತಿರಲಿಲ್ಲ. ಈ ಸಮಸ್ಯೆಯನ್ನು ಪರಿಹರಿಸಲು ಗಾಂಧಿಯವರು ಯೋಚಿಸಿದಾಗ, ಅವರ ಜರ್ಮನ್ ಮಿತ್ರರಾದ ಕಾಲೆನ್‌ಬಾಕ್ ಎಂಬುವವರು, ತಮಗೆ ಸೇರಿದ ಒಂದು ಸಾವಿರದ ಒಂದುನೂರು ಎಕರೆಯಷ್ಟು ವಿಸ್ತಾರವಾದ ಫಾರಂ ಅನ್ನು ಸತ್ಯಾಗ್ರಹಿಗಳ ಉಪಯೋಗಕ್ಕಾಗಿ ಬಿಟ್ಟುಕೊಟ್ಟರು. ಸತ್ಯಾಗ್ರಹಿಗಳು ಆ ಫಾರಂನಲ್ಲಿ ನೆಲಸಿದರು. ಆ ಫಾರಂಗೆ 'ಟಾಲ್ ಸ್ಟಾಯ್ ಫಾರಂ' ಎಂದು ಹೆಸರಾಯಿತು.

ಗಾಂಧಿಯವರೂ ಕೂಡಾ ಟಾಲ್‌ಸ್ಟಾಯ್ ಫಾರಂನಲ್ಲಿ ವಾಸಿಸುತ್ತ, ಅತ್ಯಂತ ಸರಳ ಜೀವನಕ್ಕೆ ತಮ್ಮನ್ನು ಅರ್ಪಿಸಿಕೊಂಡರು. ಭೂಮಿಯನ್ನು ಅಗೆದು ಸರಿಮಾಡುವುದು, ಮರವನ್ನು ಕೊಯ್ಯುವುದು, ಗೋಡೆಗಳನ್ನು ಕಟ್ಟುವುದು ಮೊದಲಾದ ಕಾರ್ಯಗಳಲ್ಲಿ ಅವರ ಮನಸ್ಸು ಹರಿಯಿತು. ಆ ಫಾರಂನಲ್ಲಿದ್ದ ಹಲವು ಜಾತಿಯ ಹಾವುಗಳನ್ನು ಕೊಲ್ಲಬಾರದೆಂಬ ನಿಯಮವಿದ್ದುದರಿಂದ, ಹಾವುಗಳನ್ನು ಯಾರೂ ಕೊಲ್ಲುತ್ತಿರಲಿಲ್ಲ. ಅಲ್ಲಿ ಸ್ವಾವಲಂಬನೆಗೆ ಪುರಸ್ಕಾರ. ಒಟ್ಟಿನಲ್ಲಿ ಅದು ಸಹಕಾರ ಸಮುದಾಯದ ಉದಯಕ್ಕೆ ನಾಂದಿಯಾಯಿತು.

ದಕ್ಷಿಣ ಆಫ್ರಿಕದ ಮತ್ತೊಂದು ಕರಾಳ ಶಾಸನ

ಭಾರತದಲ್ಲಿದ್ದ ಬ್ರಿಟಿಷ್ ಸರ್ಕಾರ, ದಕ್ಷಿಣ ಆಫ್ರಿಕದ ಭಾರತೀಯರ ಸ್ಥಿತಿಯನ್ನು ಪ್ರತ್ಯಕ್ಷವಾಗಿ ಅಧ್ಯಯನ ಮಾಡಲು ಗೋಪಾಲ ಕೃಷ್ಣ ಗೋಖಲೆಯವರನ್ನು ೧೯೧೨ರಲ್ಲಿ ಕಳುಹಿಸಿತು. ದಕ್ಷಿಣ ಆಫ್ರಿಕದ ಸರ್ಕಾರ ಅವರನ್ನು ಗೌರವದಿಂದ ಕಂಡು, ಭಾರತೀಯರ ಮೇಲೆ ಹೇರಿದ್ದ ಮೂರು ಪೌಂಡುಗಳ ತಲೆಗಂದಾಯವನ್ನು ತೆಗೆದುಹಾಕುವ ಭರವಸೆಯನ್ನು ನೀಡಿತು. ಅದನ್ನು ಕೇಳಿ ಭಾರತೀಯರೆಲ್ಲರಿಗೂ ಸಂತೋಷ. ಅತ್ತ ಗೋಖಲೆಯವರು ಭಾರತಕ್ಕೆ ಹಿಂತಿರುಗಿದ ಬಳಿಕ, ದಕ್ಷಿಣ ಆಫ್ರಿಕದ ವಂಚಕ ಸರ್ಕಾರ, ಮೂರು ಪೌಂಡ್ ತೆರಿಗೆಯನ್ನು ತೆಗೆಯಲೇ ಇಲ್ಲ. ಗಾಯದ ಮೇಲೆ ಬರೆ ಎಳೆದಂತೆ, ಮತ್ತೊಂದು ಕರಾಳ ಶಾಸನವನ್ನು ಸರ್ಕಾರ ಜಾರಿಗೆ ತಂದಿತು. ಭಾರತೀಯ ರೀತಿಯಲ್ಲಾದ ವಿವಾಹಗಳನ್ನು ಸರ್ಕಾರ ಮಾನ್ಯಮಾಡದೆ, ಭಾರತೀಯರೆಲ್ಲರೂ ರಿಜಿಸ್ಟರ್ಡ್ ರೀತಿಯಲ್ಲಿ ವಿವಾಹವಾದರೆ ಮಾತ್ರ ಮಾನ್ಯತೆ—ಎಂದು ಘೋಷಿಸಿತು.

ಅದುವರೆಗೆ ಭಾರತೀಯ ಮಹಿಳೆಯರು ಸತ್ಯಾಗ್ರಹದಲ್ಲಿ ಭಾಗವಹಿಸಿರಲಿಲ್ಲ. ಈಗ ತಮ್ಮ ಮದುವೆಯನ್ನೇ ಪ್ರಶ್ನಿಸುವ ಸರ್ಕಾರವನ್ನು ಎದುರಿಸಲು ಹಿಂದೂ, ಮುಸ್ಲಿಂ, ಪಾರ್ಸಿ ಮಹಿಳೆಯರೆಲ್ಲರೂ ಸಿದ್ಧರಾದರು. ೧೯೧೩ರಲ್ಲಿ ಹದಿನಾರು ಮಂದಿ ಸತ್ಯಾಗ್ರಹಿಗಳು ಅಪ್ಪಣೆ ಚೀಟಿ ಪಡೆಯದೆ ಟ್ರಾನ್ಸ್‌ವಾಲ್ ಪ್ರದೇಶವನ್ನು ಪ್ರವೇಶಿಸಿದರು. ಆ ತಂಡದಲ್ಲಿ ಗಾಂಧಿಯವರೊಡನೆ ಅವರ ಪತ್ನಿ ಕಸ್ತೂರಿ ಬಾ ಕೂಡಾ ಇದ್ದರು. ಸರ್ಕಾರ ಎಲ್ಲರನ್ನೂ ಬಂಧಿಸಿ, ಮೂರು ತಿಂಗಳ ಕಠಿಣ ಶಿಕ್ಷೆಯನ್ನು ವಿಧಿಸಿತು. ಸರ್ಕಾರದ ಕರಾಳ ಶಾಸನವನ್ನು ವಿರೋಧಿಸಿ, ಇತರರೂ ನಗುಮುಖದಿಂದಲೇ ಸೆರೆ

ಮನೆ ಸೇರಿದರು. ನರಕದಂತಿದ್ದ ಸೆರೆಮನೆಯ ವಾಸವನ್ನು ಅನುಭವಿಸಲು ಅವರು ಹೆದರಲಿಲ್ಲ.

ಸೆರೆಮನೆಯಿಂದ ಹೊರಬಂದ ಮೇಲೆ ಗಾಂಧಿಯವರು ಭಾರತೀಯರ ಸಂಘಟನೆಗಾಗಿ ದುಡಿದರು. ೧೯೧೩, ನವೆಂಬರ್ ೬ರಂದು ಪ್ರಾತಃಕಾಲ ೬.೩೦ಕ್ಕೆ ಪ್ರಾರ್ಥನೆ ಮುಗಿಸಿ, ೨೦೩೭ ಮಂದಿ ಪುರುಷರೂ ೧೨೭ ಮಂದಿ ಮಹಿಳೆಯರೂ ೫೭ ಮಕ್ಕಳೂ ಅಪ್ಪಣೆ ಚೀಟಿ ಪಡೆಯದೆ ಟ್ರಾನ್ಸ್‌ವಾಲ್ ಪ್ರದೇಶವನ್ನು ಪ್ರವೇಶಿಸಿದರು. ಅವರಲ್ಲಿ ಗಣಿಕೆಲಸವನ್ನು ಬಹಿಷ್ಕರಿಸಿ ಬಂದ ಕಾರ್ಮಿಕರೂ ಇದ್ದರು. ಅಂದು ರಾತ್ರಿ ಅವರೆಲ್ಲರೂ ಒಂದು ಬಯಲಿನಲ್ಲಿ ತಂಗಿದರು. ಮಹಿಳೆಯರೂ ಮಕ್ಕಳೂ ದಣಿದು ಮಲಗಿದ್ದಾಗ ಪೊಲೀಸ್ ಅಧಿಕಾರಿಯೊಬ್ಬರು ಬಂದು ಗಾಂಧಿಯವರನ್ನು ದಸ್ತಗಿರಿ ಮಾಡಿ ಕರೆದುಕೊಂಡು ಹೋದರು. ಆಗ, ಗಾಂಧಿಯವರು ಸ್ವಯಂಸೇವಕರೊಬ್ಬರಿಗೆ ಮುಂದಿನ ಕೆಲಸವನ್ನು ಧೈರ್ಯವಾಗಿ ಮಾಡಲು ಸಲಹೆ ಕೊಟ್ಟು, ಮುಂದೆ ಸಾಗಿದರು.

ಕೋರ್ಟಿನಲ್ಲಿ ಐವತ್ತು ಪೌಂಡುಗಳ ಜಾಮೀನು ಕೊಟ್ಟು ಗಾಂಧಿಯವರು ಪುನಃ ತಮ್ಮ ಅನುಯಾಯಿಗಳೊಡನೆ ಸೇರಿದರು. ಆದರೆ ನವೆಂಬರ್ ೮ರಂದು ಬಂಧಿತರಾಗಿ, ಜಾಮೀನಿನ ಮೇಲೆ ಬಿಡುಗಡೆಯಾಗಿ ತಮ್ಮ ಪಡೆಯನ್ನು ಪುನಃ ಸೇರಿದರು. ಸತ್ಯಾಗ್ರಹಿಗಳು ಜೊಹಾನ್ಸ್‌ಬರ್ಗನ್ನು ಸೇರಿದೊಡನೆ, ಗಾಂಧಿಯವರು ದಸ್ತಗಿರಿಯಾಗಿ ಒಂಬತ್ತು ತಿಂಗಳ ಕಠಿಣ ಶಿಕ್ಷೆಗೆ ಗುರಿಯಾದರು. ಉಳಿದ ಸತ್ಯಾಗ್ರಹಿಗಳನ್ನು ಸರ್ಕಾರ ನೇಟಾಲಿನ ಗಣಿ ಪ್ರದೇಶಕ್ಕೆ ಕರೆದೊಯ್ದು ಬಲಾತ್ಕಾರವಾಗಿ ಗಣಿಯ ಕೆಲಸಕ್ಕೆ ನೇಮಿಸಿ, ತಂತಿಯ ಬೇಲಿಯನ್ನು ನಿರ್ಮಿಸಿದ ಪ್ರದೇಶದಲ್ಲಿ ಅವರನ್ನು ಕೂಡಿತು. ಅವರಿಗೆ ಅದೇ ಸೆರೆಮನೆಯಾಯಿತು !

ಕಷ್ಟಗಳಿಂದ ಕುಗ್ಗದೆ, ಸತ್ಯಾಗ್ರಹವನ್ನು ದಿಟ್ಟತನದಿಂದ ಮುಂದುವರಿಸಿದ ಪರಿಣಾಮವಾಗಿ, ಸತ್ಯಾಗ್ರಹಿಗಳಿಗೆ ಜಯ ಲಭಿಸಿತು. ಭಾರತೀಯರ ಮೇಲೆ ಹೇರಿದ್ದ ಮೂರು ಪೌಂಡ್ ತಲೆಗಂದಾಯವನ್ನು ಸರ್ಕಾರ ತೆಗೆದುಹಾಕಿತು. ಹಿಂದೂ, ಪಾರ್ಸಿ ಮತ್ತು ಮುಸ್ಲಿಂ ವಿವಾಹಗಳಿಗೆ ಮಾನ್ಯತೆ ದೊರಕಿತು. ಆದರೆ ಭಾರತೀಯರು ತಮ್ಮ ಹೆಬ್ಬೆಟ್ಟಿನ ಗುರುತಿನಿಂದ ನೋಂದಾಯಿಸಿದ ನಿವಾಸಪತ್ರವನ್ನು ತಮ್ಮ ಬಳಿ ಇಟ್ಟುಕೊಳ್ಳಬೇಕೆಂಬ ಕಾಯಿದೆಯನ್ನು ಸರ್ಕಾರ ಹಿಂದಕ್ಕೆ ತೆಗೆದುಕೊಳ್ಳಲಿಲ್ಲ. ಭಾರತೀಯರ ಅದ್ಭುತ ವಿಜಯದ ಮುಂದೆ, ನೋಂದಾಣಿಕೆಯ ಪತ್ರ ಅಷ್ಟು ಮುಖ್ಯವಾಗಿ ಅವರಿಗೆ ಕಾಣಿಸಲಿಲ್ಲ. ಆ ತ್ಯಾಗಕ್ಕೆ ಅವರು ಒಪ್ಪಲೇಬೇಕಾಯಿತು.

ಇಂಗ್ಲೆಂಡಿನಲ್ಲಿ

೧೯೧೪ರ ಆಗಸ್ಟ್ ೬ರಂದು ಗಾಂಧೀಜಿಯವರು ಲಂಡನ್ ಸೇರಿದರು. ಅವರು, ಆಗತಾನೆ ಆರಂಭವಾದ ಮಹಾಯುದ್ಧದಲ್ಲಿ ಗಾಯಗೊಂಡವರ ಶುಶ್ರೂಷೆ ಮಾಡಲು ಬ್ರಿಟಿಷ್ ಸರ್ಕಾರವನ್ನು ಕೇಳಿದರು. ಅವರಿಗೆ ಅನುಮತಿ ದೊರಕುವುದು ಕಷ್ಟವಾಗಲಿಲ್ಲ. ಆದರೆ, ಅವರಲ್ಲಿ 'ಪ್ಲೂರಸಿ' ರೋಗ ಕಾಣಿಸಿಕೊಂಡದ್ದರಿಂದ ಅವರ ಸ್ನೇಹಿತರು ಲಂಡನ್ನಿನ ಹವಾ ಅವರ ಆರೋಗ್ಯಕ್ಕೆ ಯುಕ್ತವಲ್ಲವೆಂದು ತಿಳಿಸಿ, ಅವರನ್ನು ಭಾರತಕ್ಕೆ ಕಳುಹಿಸಿದರು. ಗಾಂಧೀಜಿಯವರು ತಮ್ಮ ಸಂಸಾರ ಸಮೇತವಾಗಿ ಜನವರಿ ೯, ೧೯೧೫ರಂದು ಭಾರತಕ್ಕೆ ಹಿಂತಿರುಗಿದರು.

೪. ಭಾರತದಲ್ಲಿ

ಭಾರತಕ್ಕೆ ಬಂದೊಡನೆ, ಕವಿ ರವೀಂದ್ರರು ವಾಸಿಸುತ್ತಿದ್ದ

ಶಾಂತಿನಿಕೇತನದಲ್ಲಿ ಗಾಂಧೀಜಿ ತಮ್ಮ ಪರಿವಾರದೊಡನೆ ಕೆಲವು ದಿನಗಳಿದ್ದರು. ಆಗ ಅವರಿಗೆ ಗೋಪಾಲಕೃಷ್ಣ ಗೋಖಲೆ ಯವರ ಮರಣದ ವಾರ್ತೆ ತಿಳಿದುದರಿಂದ ಪುಣೆಗೆ ಹೋದರು. ಅಲ್ಲಿಂದ ಗುಜರಾತಿನ ಸಬರ್ಮತಿಗೆ ಹೋಗಿ, ಅಲ್ಲಿ ಅವರು ಆಶ್ರಮವನ್ನು ಸ್ಥಾಪನೆ ಮಾಡಿದುದು ೧೯೧೫ರ ಮೇ ೨೫ರಂದು. ಕೆಲವು ದಿನಗಳಲ್ಲಿ ಹರಿಜನರ ಸಂಸಾರವೊಂದಕ್ಕೆ ಗಾಂಧೀಜಿ ಆಶ್ರಮದಲ್ಲಿರಲು ಅವಕಾಶ ಮಾಡಿದರು. ಅವರ ಈ ಕಾರ್ಯ ವನ್ನು ಹಲವರು ತಿರಸ್ಕರಿಸಿದರು. ಆಶ್ರಮಕ್ಕೆ ಬರುತ್ತಿದ್ದ ಧನ ಸಹಾಯ ನಿಂತು ಹೋಯಿತು. ಆ ಸಂದರ್ಭದಲ್ಲಿ ಶ್ರೀಮಂತ ರೊಬ್ಬರು ಹದಿಮೂರು ಸಾವಿರ ರೂಪಾಯಿಗಳ ಧನಸಹಾಯ ಮಾಡಿದುದರಿಂದ ಆಶ್ರಮದ ಕೆಲಸ ಸುಸೂತ್ರವಾಗಿ ನಡೆಯಲು ಸಾಧ್ಯವಾಯಿತು. ಆಶ್ರಮದ ನಿವಾಸಿಗಳಾದ ಕೆಲವರು, ಆಶ್ರಮಕ್ಕೆ ಸೇರಿದ ಹರಿಜನ ಸಂಸಾರದೊಡನೆ ಮುಕ್ತ ಹೃದಯ ದಿಂದ ವ್ಯವಹರಿಸಲಿಲ್ಲ. ಇದೆಲ್ಲವನ್ನೂ ಗಮನಿಸಿದ ಗಾಂಧೀಜಿ, ಆಶ್ರಮದಲ್ಲಿ ಸಮತ್ವ ದೃಷ್ಟಿ ಮೂಡಿಸಲು ಸರ್ವರೀತಿಯಲ್ಲಿಯೂ ಯತ್ನಿಸಿದರು.

ಚಂಪಾರಣ್ಯ

ಬಿಹಾರದ ಒಂದು ಜಿಲ್ಲೆ ಚಂಪಾರಣ್ಯ. ೧೯೧೭ ರಲ್ಲಿ ಚಂಪಾ ರಣ್ಯದ ಕೆಲವು ಗ್ರಾಮಗಳ ಜನರು ಗಾಂಧೀಜಿಯವರನ್ನು ಕಂಡು ತಮ್ಮ ಕಷ್ಟಗಳನ್ನು ಹೇಳಿಕೊಂಡರು. ಚಂಪಾರಣ್ಯದ ಇಂಗ್ಲಿಷ್ ಜಮೀನ್ದಾರರು, ತಮ್ಮ ರೈತರು ಕಡ್ಡಾಯವಾಗಿ, ಒಂದು ಎಕರೆಯ ಮೂರನೆಯ ಒಂದು ಭಾಗದಲ್ಲಿ ನೀಲಿ ಬೆಳೆಯನ್ನು ಬೆಳೆಯಬೇಕೆಂದು ನಿಯಮ ಮಾಡಿದ್ದರು. ಆ ನೀಲಿ ಬೆಳೆಗೆ

ಜಮೀನ್ದಾರರು ಕೊಟ್ಟದ್ದೇ ಬೆಲೆ. ಆ ಪದ್ಧತಿ 'ತೀನ್ ಕಠಿಯಾ' ಎಂಬ ಹೆಸರಿನಿಂದ ನಡೆದು ಬರುತ್ತಿತ್ತು. ರೈತರಿಗೆ ಆ ನಿಯಮ ದಿಂದ ತುಂಬ ನಷ್ಟವಾಗುತ್ತಿತ್ತು.

ಗಾಂಧೀಜಿ ಹಲವು ರೈತರೊಡನೆ ಮಾತನಾಡಿ, ಅವರ ವಿಚಾರ ವನ್ನು ತಿಳಿದುಕೊಂಡರು. ರೈತರಲ್ಲಿ ಐಕ್ಯಮತ್ಯವನ್ನು ಮೂಡಿಸು ತ್ತಿದ್ದ ಗಾಂಧೀಜಿಯವರ ಕಾರ್ಯವನ್ನು ತಿಳಿದ ಆ ಬಿಳಿಯ ಜಮೀನ್ದಾರರು ಪೋಲೀಸರಿಗೆ ದೂರಿತ್ತರು. ಗಾಂಧೀಜಿ ಚಂಪಾ ರಣ್ಯದಿಂದ ಹೊರಟು ಹೋಗಬೇಕೆಂದು ಪೋಲೀಸರ ಆಜ್ಞೆಯಾ ಯಿತು. ಅದಕ್ಕೆ ಗಾಂಧೀಜಿ ಪುರಸ್ಕಾರ ನೀಡಲಿಲ್ಲ.

ಗಾಂಧೀಜಿ, ಚಂಪಾರಣ್ಯ ಜಿಲ್ಲೆಯ ಗ್ರಾಮಗಳಲ್ಲಿ ಸಂಚರಿಸುತ್ತ ಗ್ರಾಮ ನೈರ್ಮಲ್ಯ, ವಿದ್ಯಾಭ್ಯಾಸದ ಆವಶ್ಯಕತೆ, ವೈದ್ಯಕೀಯ ನೆರವು—ಇತ್ಯಾದಿ ವಿಷಯಗಳಲ್ಲಿ ರೈತರ ಮನಸ್ಸು ಹರಿಯುವಂತೆ ಮಾಡಿ, ರೈತರ ಸಂಘಟನೆ ಮಾಡಿದರು. ರೈತರೆಲ್ಲ ಒಗ್ಗಟ್ಟಾದು ದರಿಂದ, ರೈತರಿಗೆ ಜಯವಾಯಿತು, 'ತೀನ್ ಕಠಿಯಾ' ಪದ್ಧತಿ ರದ್ದಾಯಿತು.

ಕೂಲಿಗಾರರ ಸಮಸ್ಯೆ

ಅಹಮದಾಬಾದಿನ ಗಿರಣಿಯಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕ ರಿಗೆ ಸಿಗುತ್ತಿದ್ದ ಕೂಲಿ ಬಹಳ ಕಡಿಮೆಯಾಗಿತ್ತು. ಬಡ ಕಾರ್ಮಿ ಕರು ಗಾಂಧೀಜಿಯವರ ಬಳಿಗೆ ಬಂದು, ತಮಗೆ ನ್ಯಾಯ ದೊರಕಿಸಿ ಕೊಡಲು ಸಹಾಯ ಮಾಡಬೇಕೆಂದು ಕೇಳಿಕೊಂಡರು, ಗಾಂಧೀಜಿ ಯವರ ನೇತೃತ್ವದಲ್ಲಿ ಇಪ್ಪತ್ತೊಂದು ದಿನಗಳ ಮುಷ್ಕರ ನಡೆಯಿತು. ಅನಂತರ, ಕಾರ್ಮಿಕರಲ್ಲಿ ಒಗ್ಗಟ್ಟು ಸಡಿಲವಾಗಿ ಮುಷ್ಕರಕ್ಕೆ ಧಕ್ಕೆ ಬರುತ್ತಿರುವುದನ್ನು ಗಮನಿಸಿದ ಗಾಂಧೀಜಿ,

ಉಪವಾಸ ವ್ರತವನ್ನು ಕೈಗೊಂಡರು. ಅದರ ಫಲವಾಗಿ ಗಿರಣಿಯ ಮಾಲೀಕರಿಗೂ ಕಾರ್ಮಿಕರಿಗೂ ಒಪ್ಪಂದವಾಗಿ ಕಾರ್ಮಿಕರಿಗೆ ನ್ಯಾಯ ದೊರಕಿತು.

ಖೇಡಾ ಸತ್ಯಾಗ್ರಹ

ಖೇಡಾ ಜಿಲ್ಲೆಯಲ್ಲಿ ಬರಗಾಲದಂತಹ ಪರಿಸ್ಥಿತಿ ಬಂದು ರೈತರು ಕಂಗಾಲಾಗಿದ್ದರು. ಜಮೀನಿನಲ್ಲಿ ಬೆಳೆದ ಬೆಳೆ, ನಿರೀಕ್ಷಿಸಿದ ಬೆಳೆಯ ಕಾಲು ಭಾಗವಾಗಿದ್ದರೆ, ಕಂದಾಯವನ್ನು ಮನ್ನಾ ಮಾಡುವ ಅಧಿಕಾರ ಸರ್ಕಾರಕ್ಕಿತ್ತು. ಆದರೆ ಸರ್ಕಾರಕ್ಕೆ, ರೈತರ ಕಷ್ಟವನ್ನು ಅರಿಯುವ ಸಹಾನುಭೂತಿ ಇರಲಿಲ್ಲ. ರೈತರಿಂದ ಕಂದಾಯ ವಸೂಲಿ ಮಾಡುವುದೇ ಅದರ ಧೋರಣೆಯಾಯಿತು. ರೈತರು ಗಾಂಧೀಜಿಯವರನ್ನು ಆಶ್ರಯಿಸಿದರು. ಗಾಂಧೀಜಿಯವರ ನೇತೃತ್ವದಲ್ಲಿ ರೈತರ ಸತ್ಯಾಗ್ರಹ ಆರಂಭವಾಯಿತು.

ಕಂದಾಯ ಕೊಡದ ರೈತರ ಆಸ್ತಿಯನ್ನು ಸರ್ಕಾರ ಜಪ್ತಿ ಮಾಡಲು ಆರಂಭಿಸಿತು. ಅದರಿಂದ ರೈತರು ನೊಂದರು, ಕಷ್ಟಕ್ಕೆ ಸಿಕ್ಕಿದರು. ಆದರೆ ಗಾಂಧೀಜಿಯವರ ನೇತೃತ್ವದಲ್ಲಿ ರೈತರ ಸಂಘಟನೆ ಬಲವಾಯಿತು. ಕಡೆಗೆ, ಶ್ರೀಮಂತ ರೈತರು ಮಾತ್ರ ಕಂದಾಯ ಕೊಡಬೇಕೆಂದೂ, ಬಡ ರೈತರು ಕಂದಾಯ ಕೊಡಬೇಕಾಗಿಲ್ಲವೆಂದೂ ಸರ್ಕಾರ ತೀರ್ಮಾನಿಸಿದ್ದರಿಂದ, ಸತ್ಯಾಗ್ರಹ ನಿಂತು ರೈತರಿಗೆ ನ್ಯಾಯ ದೊರಕಿತು.

ರೋಗಗ್ರಸ್ತ ಗಾಂಧೀಜಿ

೧೯೧೮ರಲ್ಲಿ ಮೊದಲನೆಯ ಮಹಾಯುದ್ಧ ಆರಂಭವಾಯಿತು. ಭಾರತೀಯರು ಸೈನ್ಯಕ್ಕೆ ಸೇರಬೇಕೆಂದು ಪ್ರಚಾರ ಮಾಡಿದರು

ಗಾಂಧೀಜಿ. ಅಹಿಂಸಾವಾದಿಗಳಾದ ಅವರು ಬ್ರಿಟಿಷರ ಸಹಾಯಕ್ಕಾಗಿ ಈ ರೀತಿ ಪ್ರಚಾರ ಮಾಡಿದುದು ಹಲವರಿಗೆ ಸರಿಕಾಣಲಿಲ್ಲ. ಅವರು, ಹಿಂದೆ ಖೇಡಾ ಜಿಲ್ಲೆಯ ಗ್ರಾಮಗಳಲ್ಲಿ ಕೆಲಸ ಮಾಡುತ್ತಿದ್ದಾಗ, ಅವರಿಗಾಗಿ ಎತ್ತಿನ ಬಂಡಿಯನ್ನೂ ಯೋಗ್ಯ ಆಹಾರವನ್ನೂ ಒದಗಿಸುತ್ತಿದ್ದ ಹಳ್ಳಿಯ ಜನರು ಈಗ ಅವರ ಬಳಿ ಸುಳಿಯಲಿಲ್ಲ. ಆದರೆ, ಗಾಂಧೀಜಿ ತಮ್ಮ ಪ್ರಚಾರ ಕಾರ್ಯವನ್ನು ಮುಂದುವರಿಸಿದರು. ಆದರೆ ಕೆಲವು ದಿನಗಳಲ್ಲಿಯೇ ಅವರು ಆಮಶಂಕೆ ರೋಗದಿಂದ ಬಳಲಿದರು. ಕಡೆಗೆ ಅವರು ಸಬರ್ಮತಿ ಆಶ್ರಮಕ್ಕೆ ಹಿಂತಿರುಗಬೇಕಾಯಿತು. ಅವರದು, ಔಷಧ ತೆಗೆದುಕೊಳ್ಳದ ಪ್ರತಿಜ್ಞೆ. ಅವರ ಸ್ಥಿತಿ ಮೃತ್ಯು ಮುಖದಲ್ಲಿರುವಂತಾಯಿತು. ಆಗ, ಡಾ. ತಲವಲ್ಕರ್ ಎಂಬುವವರ ಮಂಜಿನ ಗಡ್ಡೆಯ ಚಿಕಿತ್ಸೆಯಿಂದ ಅವರು ಆರೋಗ್ಯವಂತರಾದರು.

ರೌಲಟ್ ಶಾಸನ

ಮೊದಲನೆಯ ಮಹಾಯುದ್ಧ ಕಾಲದಲ್ಲಿ ಸರ್ಕಾರ ತನ್ನ ಭದ್ರತೆಗಾಗಿ ಹಲವು ಶಾಸನಗಳನ್ನು ಮಾಡಿತು. ಅದೇ ರೌಲಟ್ ಶಾಸನ. ಯುದ್ಧ ಮುಗಿದ ಬಳಿಕವೂ, ಸ್ವಾತಂತ್ರ್ಯಕ್ಕಾಗಿ ಭಾರತೀಯರು ನಡೆಸುತ್ತಿದ್ದ ಹೋರಾಟದ ಮೇಲೆ ಗದಾಪ್ರಹಾರ ಮಾಡಲೆಂದು ಬ್ರಿಟಿಷ್ ಸರ್ಕಾರ ರೌಲಟ್ ಶಾಸನವನ್ನು ಉಳಿಸಿಕೊಂಡಿತು. ಆ ಶಾಸನವನ್ನು ಮುರಿಯಲು ಗಾಂಧೀಜಿ ಅಖಂಡ ರಾಷ್ಟ್ರಕ್ಕೇ ಕರೆಯಿತ್ತರು. ಸತ್ಯಾಗ್ರಹಕ್ಕೆ ಮೊದಲು ೧೯೧೯ರ ಮಾರ್ಚ್ ತಿಂಗಳ ೩೦ನೆ ತಾರೀಖೆಂದು ನಿರ್ಧರಿಸಿ, ಅನಂತರ ಆ ತಾರೀಖನ್ನು ಏಪ್ರಿಲ್ ೬ ಎಂದು ಅವರು ಘೋಷಿಸಿದರು.

ಗಾಂಧೀಜಿ ಸತ್ಯಾಗ್ರಹವನ್ನು ಏಪ್ರಿಲ್ ೬ಕ್ಕೆ ಮುಂದುವರಿಸಿದು

ದನ್ನು ತಿಳಿಯದೆ, ಮಾರ್ಚಿ ೩೦ರಂದೇ ದೆಹಲಿಯಲ್ಲಿ ಸತ್ಯಾಗ್ರಹ ಆರಂಭವಾಯಿತು. ಭಾರತೀಯರ ಚಳುವಳಿಯನ್ನು ಬಗ್ಗು ಬಡಿಯಲು ಆರಂಭಿಸಿತು ಬ್ರಿಟಿಷ್ ಸರ್ಕಾರ. ಶಾಂತರಾಗಿದ್ದ ಸತ್ಯಾಗ್ರಹಿಗಳು ಲಾಠಿ ಏಟು ತಿಂದರು, ಮೂಳೆ ಮುರಿಸಿಕೊಂಡರು. ಲಾಠಿ ಏಟಿಗೆ ಹೆದರದೆ ಮುಷ್ಕರವನ್ನು ಮುಂದುವರಿಸಿದ ಸತ್ಯಾಗ್ರಹಿಗಳಲ್ಲಿ ಹಲವರು ಗುಂಡಿನೇಟಿಗೆ ಬಲಿಯಾದರು. ಸರ್ಕಾರದ ದಮನ ನೀತಿಯನ್ನು ಎದುರಿಸಿ, ನಿರಾಯುಧರಾಗಿ ಮೆರವಣಿಗೆಯಲ್ಲಿ ಹೋದ ಸತ್ಯಾಗ್ರಹಿಗಳಿಗೆ ಗುಂಡಿನೇಟು ! ಆ ಅಕೃತ್ಯವನ್ನು ಕಂಡು ರೊಚ್ಚಿಗೆದ್ದ ಕೆಲವರು ಐವರು ಇಂಗ್ಲಿಷರನ್ನು ಕೊಂದರು. ಆಗ ಕುಪಿತ ಸರ್ಕಾರ ಸೈನಿಕ ಸರ್ಕಾರವನ್ನು ಜಾರಿಗೆ ತಂದು ನರಬಲಿಗೆ ಆರಂಭಿಸಿತು.

ಜಲಿಯನ್‌ವಾಲಾ ಬಾಗ್

೧೯೧೯ ಏಪ್ರಿಲ್ ಹದಿಮೂರರಂದು, ಅಮೃತಸರದ ಜಲಿಯನ್‌ವಾಲಾ ಬಾಗ್‌ನಲ್ಲಿ ಮಹಿಳೆಯರೂ ಪುರುಷರೂ ಮಕ್ಕಳೂ ಒಟ್ಟಿಗೆ ಸುಮಾರು ಇಪ್ಪತ್ತು ಸಾವಿರ ಮಂದಿ ರೌಲಟ್ ಶಾಸನವನ್ನು ವಿರೋಧಿಸಲು ಸಭೆ ಸೇರಿದ್ದರು. ಜಲಿಯನ್‌ವಾಲಾ ಬಾಗಿಗೆ ಹೋಗಲು ಇದ್ದುದು ಇಕ್ಕಟ್ಟಾದ ಒಂದೇ ದಾರಿ. ಸುತ್ತಲೂ ಮನೆಗಳು. ಚಳುವಳಿಗಾರರು ಐವರು ಇಂಗ್ಲಿಷರನ್ನು ಕೊಂದಿದ್ದಕ್ಕೆ ಪ್ರತೀಕಾರ ತೋರುವ ಸಲುವಾಗಿ, ಜನರಲ್ ಡೈಯರ್ ಜಲಿಯನ್‌ವಾಲಾ ಬಾಗಿನ ಪ್ರವೇಶ ದ್ವಾರದಲ್ಲಿ ಮೆಷೀನ್‌ಗನ್‌ಗಳನ್ನಿರಿಸಿ, ಅವುಗಳಿಂದ ನಿರಪರಾಧಿ ಜನರನ್ನು ಕೊಲೆ ಮಾಡಿಸಿದನು. ಮದ್ದು ಗುಂಡುಗಳು ಮುಗಿದಾಗಲೇ ಮೆಷೀನ್‌ಗನ್ನುಗಳಿಗೆ ವಿರಾಮ. ಒಂದು ಸಾವಿರದ ಇನ್ನೂರು ಜನರು ಸತ್ತರು;

ಮೂರು ಸಾವಿರದ ಆರುನೂರು ಜನರು ಗಾಯಗೊಂಡರು. ರಕ್ತದ ಕೋಡಿ ಹರಿಯಿತು. ಯುದ್ಧ ಭೂಮಿಯಲ್ಲಿ ಉಪಯೋಗಿಸಬೇಕಾದ ಮೆಷೀನ್‌ಗನ್ನುಗಳನ್ನು ನಿರಪರಾಧಿಗಳಾದ ಪುರುಷರು, ಮಹಿಳೆಯರು ಮತ್ತು ಮಕ್ಕಳ ಮೇಲೆ ಪ್ರಯೋಗಿಸಿದವ. ಆಸುರೀಸ್ವಭಾವದ ಜನರಲ್ ಡೈಯರ್. ಗಾಯಗೊಂಡವರಿಗೆ ಔಷಧೋಪಚಾರವಿರಲಿ, ಕುಡಿಯಲು ನೀರೂ ಸಿಗಲಿಲ್ಲ. ಆ ಪೈಶಾಚಿಕ ಕೃತ್ಯವನ್ನು ನೆನೆದರೆ ಯಾರಿಗಾದರೂ ರಕ್ತ ಕುದಿಯದಿರಲಾರದು.

ಆ ಭಯಂಕರ ಕಗ್ಗೊಲೆಯನ್ನು ಪ್ರತ್ಯಕ್ಷವಾಗಿ ಸಮೀಕ್ಷಿಸಲು ಗಾಂಧೀಜಿ ಧಾವಿಸಿದಾಗ, ಸರ್ಕಾರ ಅವರ ಪ್ರವೇಶಕ್ಕೆ ಅವಕಾಶ ಕೊಡಲಿಲ್ಲ. ಆರುತಿಂಗಳ ಬಳಿಕ ಅಲ್ಲಿಗೆ ಹೋಗಿ, ಅವರು ಎಲ್ಲವನ್ನೂ ಪರಿಶೀಲಿಸಿದಾಗ, ಅವರಿಗಾದ ದುಃಖ ವರ್ಣನಾತೀತ. ಜಲಿಯನ್‌ವಾಲಾ ಬಾಗಿನ ಹತ್ಯಾಕಾಂಡದಿಂದ ನೊಂದ ರವೀಂದ್ರನಾಥ ಠಾಕೂರರೇ ಮೊದಲಾದ ಗಣ್ಯ ವ್ಯಕ್ತಿಗಳು, ಬ್ರಿಟಿಷರು ನೀಡಿದ್ದ ಬಿರುದುಗಳನ್ನು ತ್ಯಜಿಸಿಬಿಟ್ಟರು.

ಖಿಲಾಫತ್ ಚಳುವಳಿ

ಮೊದಲ ಮಹಾಯುದ್ಧ ನಡೆದಾಗ ತುರ್ಕಿಯಲ್ಲಿ ಮಹಮ್ಮದ್ ಪೈಗಂಬರ್ ಅವರ ವಂಶಜರಾದ ಸುಲ್ತಾನರು ರಾಜ್ಯವಾಳುತ್ತಿದ್ದರು. ಕ್ರಾಂತಿಕಾರರು ಸುಲ್ತಾನರನ್ನು ಕೆಳಗಿಳಿಸಿ, ತಾವೇ ರಾಜ್ಯದ ಅಧಿಕಾರ ಸೂತ್ರಗಳನ್ನು ಕೈವಶಮಾಡಿಕೊಂಡರು. ಕ್ರಾಂತಿಕಾರಿಗಳಿಗೆ ಬ್ರಿಟಿಷರು ನೆರವು ನೀಡಿದರೆಂಬ ಭಾವನೆ ಹಲವು ಮುಸ್ಲಿಮರಲ್ಲಿತ್ತು. ಸುಲ್ತಾನರಿಗೆ ಖಲೀಫರೆಂಬ ಹೆಸರೂ ಇತ್ತು. ಭಾರತದಲ್ಲಿ ಮಹಮ್ಮದಾಲಿ ಮತ್ತು ಷೌಕತಾಲಿ ಎಂಬ ಇಬ್ಬರು

ಸೋದರರು, ತುರ್ಕಿಯಲ್ಲಿ ಖಲೀಫರು ಅಧಿಕಾರದಿಂದ ಇಳಿಯಲು ಬ್ರಿಟಿಷರೇ ಕಾರಣವೆಂದು ಅವರನ್ನು ಖಂಡಿಸಿ, ಬ್ರಿಟಿಷರ ವಿರುದ್ಧ ವಾಗಿ ಭಾರತದಲ್ಲಿ ಖಿಲಾಫತ್ ಚಳುವಳಿಯನ್ನು ಆರಂಭಿಸಿದರು. ಗಾಂಧಿಯವರ ಬೆಂಬಲವನ್ನು ಅವರು ಕೇಳಿದಾಗ, ಗಾಂಧೀಜಿ ಯವರ ಸಹಕಾರ ಅವರಿಗೆ ದೊರಕಿತು.

ದೂರದ ತುರ್ಕಿಯಲ್ಲಿ ಖಲೀಫರು ಅಧಿಕಾರದಿಂದ ಇಳಿದದ್ದಕ್ಕೂ ಭಾರತಕ್ಕೂ ಯಾವ ಸಂಬಂಧವೂ ಇರಲಿಲ್ಲ. ನ್ಯಾಯವಾಗಿ ಗಾಂಧೀಜಿಯವರು ಖಿಲಾಫತ್ ಚಳುವಳಿಯಲ್ಲಿ ಭಾಗವಹಿಸಬಾರ ದಿತ್ತು. ಆದರೆ, ಅವರು ಹಿಂದೂ ಮುಸ್ಲಿಂ ಐಕ್ಯತೆಗೆ ಅದೊಂದು ಭೂಮಿಕೆಯೆಂದು ಭಾವಿಸಿದರು. ಕಡೆಗೆ ಆ ಚಳುವಳಿ ಮುಸ್ಲಿಮರಿಗೇ ಪ್ರಿಯವಾಗದೆ ನಿಂತುಹೋಯಿತು.

ಸೆರೆಮನೆ

ಉತ್ತರ ಪ್ರದೇಶದ ಚೌರಿಚೌರ ಎಂಬ ಪ್ರದೇಶದಲ್ಲಿ ಸತ್ಯಾ ಗ್ರಹಿಗಳ ಮೇಲೆ ಪೊಲೀಸರು ಗುಂಡು ಹಾರಿಸಿದರು. ನಿರಪರಾಧಿ ಗಳ ಮೇಲೆ ಗುಂಡು ಹಾರಿಸಿದುದನ್ನು ಕಂಡು ಉದ್ರಿಕ್ತರಾದ ಕೆಲವರು ಪೊಲೀಸ್ ಠಾಣೆಯನ್ನು ಸುಟ್ಟು ಹಾಕಿದರು. ಬೊಂಬಾಯಿ ಮತ್ತು ಇತರೆಡೆಗಳಲ್ಲಿ ಚಳುವಳಿ ಹಿಂಸಾತ್ಮಕ ರೂಪಕ್ಕೆ ತಿರುಗಿತು. ಇವೆಲ್ಲವನ್ನೂ ತಿಳಿದ ಗಾಂಧೀಜಿ ಸತ್ಯಾಗ್ರಹ ವನ್ನು ನಿಲ್ಲಿಸಲು ಕರೆಕೊಟ್ಟರು. ಇದು ಅನೇಕರಿಗೆ ಸರಿಕಾಣಲಿಲ್ಲ. ಕೆಲವರು ಮಾತ್ರ ಗಾಂಧೀಜಿಯವರ ಕ್ರಮವನ್ನು ಒಪ್ಪಿಕೊಂಡರು.

ಭಾರತೀಯ ಸ್ವಾತಂತ್ರ್ಯಕ್ಕಾಗಿ ನಡೆಯುವ ಆಂದೋಳನವನ್ನು ನಿಗ್ರಹಿಸಲು ಗಾಂಧೀಜಿಯವರನ್ನು ದೀರ್ಘಕಾಲ ಸೆರೆಮನೆಯಲ್ಲಿ ಡುವುದೇ ಯುಕ್ತ ಮಾರ್ಗವೆಂದು ತಿಳಿದ ಬ್ರಿಟಿಷ್ ಸರ್ಕಾರ,

ಅವರನ್ನು ೧೯೨೨ನೇ ಮಾರ್ಚಿ ೧೮ರಂದು ಕೋರ್ಟಿನ ಮುಂದೆ ನಿಲ್ಲಿಸಿತು. ಆಗ ನ್ಯಾಯಮೂರ್ತಿಗಳಾಗಿದ್ದ ಬ್ಲೂಮ್‌ಫೀಲ್ಡರು ನೀಡಿದ ತೀರ್ಮಾನ ಹೀಗಿತ್ತು :

"...ಇದುವರೆಗೆ ನಿಮ್ಮಂಥವರನ್ನು ನಾನು ವಿಚಾರಣೆ ಮಾಡಿಲ್ಲ. ಮುಂದೆ ಮಾಡುತ್ತೇನೆಯೋ ಇಲ್ಲವೋ ತಿಳಿಯದು. ನಿಮ್ಮ ಜನರ ಭಾವನೆಯಲ್ಲಿ ನೀವು ನಾಯಕರು, ದೇಶಪ್ರೇಮಿಗಳು. ನೀವು ಋಷಿ ಸದೃಶ ಜೀವನವನ್ನು ನಡೆಸುತ್ತಿರುವಿರೆಂದೂ ಆದರ್ಶ ಪುರುಷರೆಂದೂ ನಿಮ್ಮ ರಾಜಕೀಯ ತತ್ತ್ವಗಳನ್ನು ಒಪ್ಪದವರೂ ನಿಮ್ಮನ್ನು ಶ್ಲಾಘಿಸುತ್ತಾರೆ. ನಿಮ್ಮ ಕಾರ್ಯವ್ಯಾಪ್ತಿಯನ್ನು ಟೀಕಿಸುವುದು ನನ್ನ ಕಾರ್ಯವಲ್ಲ. ನಿಮ್ಮ ಬರವಣಿಗೆ ಹಿಂಸೆಗೆ ಪ್ರಚೋದಕವಾಗಿದೆ. ಈ ಕಾರಣದಿಂದ ನಿಮ್ಮನ್ನು ಬಂಧಿಸದೆ ಸರ್ಕಾರಕ್ಕೆ ಬೇರೆ ಮಾರ್ಗವಿಲ್ಲ. ಹನ್ನೆರಡು ವರ್ಷಗಳ ಹಿಂದೆ, ಬಾಲಗಂಗಾಧರ ತಿಲಕರನ್ನು ಸರ್ಕಾರ ವಿಚಾರಣೆಗೆ ಗುರಿ ಮಾಡಿ, ಅವರಿಗೆ ಆರು ವರ್ಷಗಳ ಕಾಲ ಸಾಧಾರಣ ಶಿಕ್ಷೆಯನ್ನು ವಿಧಿಸಿತ್ತು. ಈಗ ನಿಮ್ಮ ಒಂದೊಂದು ಅಪರಾಧಕ್ಕೆ ಎರಡು ವರ್ಷಗಳಂತೆ, ಮೂರು ಅಪರಾಧಗಳಿಗೆ ಆರು ವರ್ಷಗಳ ಕಾಲ ಸಾಧಾರಣ ಶಿಕ್ಷೆಯನ್ನು ಕಾರಾಗೃಹದಲ್ಲಿ ಅನುಭವಿಸಬೇಕೆಂಬುದು ನನ್ನ ತೀರ್ಮಾನ. ಸರ್ಕಾರ ನಿಮ್ಮ ಶಿಕ್ಷೆಯನ್ನು ಕಡಿಮೆ ಮಾಡಿದರೆ ನನಗೆ ಸಂತೋಷ".

ಈ ತೀರ್ಪು ಬ್ಲೂಮ್ ಫೀಲ್ಡರ ಸಂಸ್ಕೃತಿಯನ್ನೂ ಗಾಂಧಿಯವರ ವ್ಯಕ್ತಿತ್ವದ ಹಿರಿಮೆಯನ್ನೂ ತೋರುವುದಕ್ಕೆ ಸಾಕ್ಷಿ. ಸೆರೆಮನೆಯಲ್ಲಿ ಎರಡು ವರ್ಷ ಕಳೆಯುವ ಮೊದಲೆ ಗಾಂಧೀಜಿಯವರಿಗೆ 'ಅಪೆಂಡಿಸೈಟಿಸ್' ರೋಗ ಕಾಣಿಸಿತು. ಶಸ್ತ್ರ ಚಿಕಿತ್ಸೆಯಾಗಿ ಗುಣಮುಖರಾದ ಬಳಿಕ, ಗಾಂಧೀಜಿ ಫೆಬ್ರುವರಿ ೧೯೨೪ರಂದು ಸೆರೆಮನೆಯಿಂದ ಬಿಡುಗಡೆಯಾದರು.

೧೯೩೦ರವರೆಗೆ ಗಾಂಧೀಜಿ ಭಾರತದ ಬೇರೆ ಬೇರೆ ಪ್ರದೇಶಗಳಲ್ಲಿ ಸಂಚರಿಸಿ, ರಚನಾತ್ಮಕ ಕಾರ್ಯಗಳಲ್ಲಿ ಮಗ್ನರಾದರು.

ದಂಡಿಯಾತ್ರೆ

ಸಬರ್ಮತಿಯಿಂದ ಸಮುದ್ರ ತೀರದಲ್ಲಿದ್ದ ದಂಡಿ ಎಂಬ ಪ್ರದೇಶಕ್ಕೆ ೩೮೫ ಕಿಲೋಮೀಟರ್‌ಗಳ ದೂರ. ಉಪ್ಪು ಎಲ್ಲರಿಗೂ ಬೇಕಾದ ವಸ್ತು. ಅದನ್ನು ತಯಾರಿಸಲು ಸುಂಕವನ್ನೇಕೆ ಕೊಡಬೇಕು ? ಈ ವಿಚಾರವನ್ನು ಗಾಂಧೀಜಿ, ಆಗ ವೈಸ್‌ರಾಯಿಯಾಗಿದ್ದ ಇರ್ವಿನ್ ಅವರಿಗೆ ಪತ್ರ ಬರೆದು ತಿಳಿಸಿದರು. ಆ ಪತ್ರಕ್ಕೆ ವೈಸ್‌ರಾಯಿಯವರ ಕಾರ್ಯದರ್ಶಿ ನಾಲ್ಕು ಪಂಕ್ತಿಗಳ ಉತ್ತರ ಬರೆದು, ತೆರಿಗೆ ತೆಗೆದುಹಾಕುವುದು ಅಸಾಧ್ಯವೆಂದು ತಿಳಿಸಿದರು. ಆ ಉತ್ತರದಿಂದ ಅತೃಪ್ತರಾದ ಗಾಂಧೀಜಿ ೧೯೩೦ರ ಮಾರ್ಚಿ ೧೨ರಂದು, ಎಪ್ಪತ್ತೆಂಟು ಮಂದಿ ಸತ್ಯಾಗ್ರಹಿಗಳೊಡನೆ ಸಬರ್ಮತಿಯ ಆಶ್ರಮದಿಂದ ದಂಡಿಯಾತ್ರೆಯನ್ನು ಆರಂಭಿಸಿದರು. ದಾರಿಯುದ್ದಕ್ಕೂ ಗಾಂಧೀಜಿ ತಂಗಿದ್ದ ಸ್ಥಳಕ್ಕೆ ಸಹಸ್ರಾರು ಜನರು ಅವರ ಸಂದರ್ಶನಕ್ಕಾಗಿ ಬಂದರು, ಪ್ರಾರ್ಥನಾ ಸಭೆಗಳಲ್ಲಿ ಭಾಗವಹಿಸಿದರು. ಗಾಂಧೀಜಿಯವರು ದಂಡಿಯನ್ನು ಸೇರಿದ್ದು ಏಪ್ರಿಲ್ ೫ರಂದು. ಉಪ್ಪನ್ನು ತಯಾರಿಸಿದ್ದು ಏಪ್ರಿಲ್ ೬ರಂದು. ಅಲ್ಲಿ ನೆರೆದಿದ್ದ ಜನರ ಸಂಖ್ಯೆ ಸಹಸ್ರಾರು. ಉಪ್ಪಿನ ಯಾತ್ರೆ, ಮಹಾಸೈನ್ಯವಾದುದನ್ನು ಕಂಡ ಸರ್ಕಾರ ಬೆದರಿ, ಗಾಂಧೀಜಿಯವರನ್ನು ೧೯೩೦ರ ಮೇ ೪ರ ಮಧ್ಯರಾತ್ರಿ ಬಂಧಿಸಿ, ಯೆರವಾಡದ ಸೆರೆಮನೆಗೆ ನೂಕಿತು.

ಗಾಂಧೀಜಿ ಸೆರೆಮನೆಯನ್ನು ಸೇರಿದ ವಾರ್ತೆಯನ್ನು ಕೇಳಿ ರಾಷ್ಟ್ರದ ಎಲ್ಲೆಡೆ ಸತ್ಯಾಗ್ರಹ ಆರಂಭವಾಯಿತು. ಒಂದು

ತಿಂಗಳಲ್ಲಿ ದಸ್ತಗಿರಿಯಾದವರ ಸಂಖ್ಯೆ ಒಂದು ಲಕ್ಷಕ್ಕೇರಿತು. ಕೆಲವರು ಲಾಠಿ ಏಟಿನಿಂದ ಗಾಯಗೊಂಡರು, ಮತ್ತೆ ಕೆಲವರು ಮೂಳೆ ಮುರಿದುಕೊಂಡರು, ಕೆಲವರು ಸತ್ತರು. ಮಹಿಳೆಯರೂ ಜೀವದ ಹಂಗು ತೊರೆದು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದರು. ಚಳುವಳಿಯ ವ್ಯಾಪಕತೆಯನ್ನು ತಿಳಿದ ಸರ್ಕಾರ, ಗಾಂಧೀಜಿಯವರನ್ನು ಬಿಡುಗಡೆ ಮಾಡಿತು.

ದುಂಡು ಮೇಜಿನ ಪರಿಷತ್ತು

ಬ್ರಿಟಿಷ್ ಸರ್ಕಾರದ ಆಹ್ವಾನದಂತೆ, ೧೯೩೧ನೆ ಸೆಪ್ಟಂಬರ್ ೧೨ರಂದು, ಗಾಂಧೀಜಿ ದುಂಡು ಮೇಜಿನ ಪರಿಷತ್ತಿನಲ್ಲಿ ಭಾಗವಹಿಸಲು, ಲಂಡನ್ ಸೇರಿದರು. ಅಲ್ಲಿ ಅವರಿದ್ದುದು ಡಿಸೆಂಬರ್ ೧ರ ವರೆಗೆ. ದುಂಡು ಮೇಜಿನ ಪರಿಷತ್ತಿಗೆ ವೈಸರಾಯರು ಆಯ್ಕೆ ಮಾಡಿದ್ದ ೧೧೨ ಪ್ರತಿನಿಧಿಗಳಲ್ಲಿ ಕಾಂಗ್ರೆಸ್ ಪ್ರತಿನಿಧಿಯಾಗಿ ಹೋದವರು ಗಾಂಧೀಜಿಯವರೊಬ್ಬರೆ. ಉಳಿದವರೆಲ್ಲರೂ ಬ್ರಿಟಿಷ್ ಪರವಾಗಿದ್ದವರು. ಈ ಕಾರಣದಿಂದ ಗಾಂಧೀಜಿ ಬರಿಗೈಯಲ್ಲಿ ಹಿಂತಿರುಗಬೇಕಾಯಿತು.

ಡಿಸೆಂಬರ್ ೫ರಂದು ಲಂಡನ್ ಬಿಟ್ಟು, ಗಾಂಧೀಜಿ ತಮ್ಮ ಪರಿವಾರದೊಡನೆ ಪ್ಯಾರಿಸ್ ಮತ್ತು ಸ್ವಿಟ್ಜರ್‌ಲೆಂಡ್ ಮಾರ್ಗವಾಗಿ ಪ್ರಯಾಣ ಮಾಡಿ, ಡಿಸೆಂಬರ್ ೨೮ರಂದು ಬೊಂಬಾಯಿಯನ್ನು ಸೇರಿದರು. ಆಗ ತಾನೆ ಭಾರತಕ್ಕೆ ಬಂದ ವೈಸರಾಯ್ ಲಾರ್ಡ್ ವಿಲ್ಲಿಂಗ್‌ಡನ್ ಅವರು ಭಾರತೀಯರ ಸ್ವಾತಂತ್ರ್ಯದ ಹೋರಾಟವನ್ನು ಹತ್ತಿಕ್ಕಲು ಸರ್ಕಾರದ ಪಾಶವೀ ಬಲವನ್ನು ವಿಸ್ತರಿಸಿಕೊಂಡರು.

ಹರಿಜನೋದ್ಧಾರ

ಅಸ್ಪೃಶ್ಯತೆಯ ನಿವಾರಣೆಗಾಗಿ ಕ್ರಿಯಾಶೀಲರಾದ ಗಾಂಧೀಜಿ ಹೊಲೆಯ ಎಂಬ ಪದವನ್ನು ದೂರಮಾಡಿ, ಅಸ್ಪೃಶ್ಯರೆನಿಸಿದ್ದ ಜನರನ್ನು ಹರಿಜನರೆಂದು ಕರೆದರು. ೧೯೩೨ರಲ್ಲಿ 'ಹರಿಜನ' ಎಂಬ ಪತ್ರಿಕೆಯನ್ನು ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳಲ್ಲಿ ಆರಂಭಿಸಿದರು. ೧೯೩೪ರಲ್ಲಿ ಸಬರ್ಮತಿ ಆಶ್ರಮವನ್ನು ಹರಿ ಜನರ ಉದ್ಧಾರಕ್ಕಾಗಿಯೇ ಸಮರ್ಪಿಸಿದರು. ಸವರ್ಣ ಹಿಂದೂ ಕನ್ಯೆಯರು ಯೋಗ್ಯರಾದ ಹರಿಜನ ವರರನ್ನು ವಿವಾಹವಾಗ ಬೇಕೆಂದು ಪ್ರಚಾರ ಮಾಡಿದರು. ಹರಿಜನರ ಕಲ್ಯಾಣಕ್ಕಾಗಿ ಅವರು ಭಾರತದ ಎಲ್ಲೆಡೆ ಸಂಚರಿಸಿ, ಹಣ ಸಂಗ್ರಹಮಾಡಲು ಆರಂಭಿಸಿದರು.

ಸೇವಾಗ್ರಾಮ

ಸಬರ್ಮತಿ ಆಶ್ರಮವನ್ನು ಹರಿಜನರ ಸೇವಾಕಾರ್ಯಕ್ಕಾಗಿ ಸಮರ್ಪಿಸಿದ ಬಳಿಕ, ಗಾಂಧೀಜಿ ವರ್ಧಾ ಬಳಿ ಇದ್ದ ಸೇಗಾಂವ್ ಎಂಬ ಹಳ್ಳಿಯ ಬಳಿ ನೆಲಸಿದರು. ಸೇಗಾಂವ್ ಸೇವಾಗ್ರಾಮ ವಾಯಿತು. ಗಾಂಧೀಜಿ ಗುಡಿಸಲಿನಲ್ಲಿ ವಾಸಮಾಡತೊಡಗಿದರು. ಅಲ್ಲಿ ಕುರ್ಚಿಗಳಾಗಲಿ, ಮೇಜಾಗಲಿ ಇರಲಿಲ್ಲ. ಚಾಪೆಯ ಮೇಲೆ ಹಾಸಿದ ಹಾಸಿಗೆಯ ಮೇಲೆ ಕುಳಿತು, ಇಳಿಜಾರಾದ ಕಾಲು ಮಣೆಯ ಮೇಲೆ ಅವರ ಬರವಣಿಗೆ.

ಗಾಂಧೀಜಿ ಬೆಳಗ್ಗೆ ಏಳುತ್ತಿದ್ದುದು ಮೂರು ಗಂಟೆಗೆ. ಆನಂತರ ಶೌಚ. ನಾಲ್ಕು ಗಂಟೆಗೆ ಪ್ರಾರ್ಥನೆ. ಎಂಥ ಚಳಿ ಇದ್ದರೂ ಪ್ರಾರ್ಥನೆ ನಡೆಯಲೇಬೇಕೆಂಬ ನಿಯಮ. ಪ್ರಾರ್ಥನೆ ಯಾದ ಬಳಿಕ ಹಣ್ಣಿನ ರಸ ಕುಡಿದು ಆರೂವರೆ ಗಂಟೆಗೆ ಗಾಳಿ

ಸಂಚಾರ. ಹತ್ತು ಗಂಟೆಗೆ ಸ್ನಾನ. ಬಳಿಕ ಪತ್ರ ವ್ಯವಹಾರ. ಅನಂತರ ಮಧ್ಯಾಹ್ನದ ಊಟ. ಅನಂತರ ವಿಶ್ರಾಂತಿ. ಮಧ್ಯಾಹ್ನ ಎರಡು ಗಂಟೆಯಿಂದ ನೂಲುವ ಕೆಲಸ ಹಾಗೂ ಸಂದರ್ಶನಾರ್ಥಿಗಳಿಗೆ ಸಂದರ್ಶನ. ಸಂಜೆ ಗಾಳಿ ಸಂಚಾರವಾದ ಬಳಿಕ ಪ್ರಾರ್ಥನೆ. ಅನಂತರ ಆಶ್ರಮವಾಸಿಗಳನ್ನು ಸಂದರ್ಶಿಸುವುದು. ರಾತ್ರಿಯ ಆಹಾರವನ್ನು ತೆಗೆದುಕೊಂಡ ಬಳಿಕ ಅಧ್ಯಯನ. ರಾತ್ರಿ ಒಂಬತ್ತು ಗಂಟೆಗೆ ನಿದ್ದೆ ಮಾಡುವುದು. ಕೆಲಸದ ಒತ್ತಡವಿದ್ದಾಗ ಗಾಂಧೀಜಿ ಬೆಳಗ್ಗೆ ಎರಡು ಗಂಟೆಗೇ ಏಳುತ್ತಿದ್ದರು. ಅವರ ದಿನಚರಿ ಗಡಿಯಾರದ ಮುಳ್ಳಿದ್ದಂತೆ ! ಸೋಮಾರಿತನಕ್ಕೆ ಅವರ ಜೀವನದಲ್ಲಿ ಅವಕಾಶವಿರಲಿಲ್ಲ.

'ಬ್ರಿಟಿಷರೆ ಹೊರಟು ಹೋಗಿ'

ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ೧೯೪೨ನೆ ಆಗಸ್ಟ್ ೭ರಂದು ಬೊಂಬಾಯಿಯಲ್ಲಿ ನಡೆಯಿತು. ಆ ಅಧಿವೇಶನದಲ್ಲಿ ಗಾಂಧೀಜಿಯವರ ಘೋಷಣೆ, "ಇಂದಿನಿಂದಲೆ ಭಾರತ ಸ್ವತಂತ್ರ, ಬ್ರಿಟಿಷರೇ ಹೊರಟುಹೋಗಿ" ಎಂದು. ಆ ಘೋಷಣೆಯನ್ನು ಸಹಿಸದ ಸರ್ಕಾರ ಗಾಂಧೀಜಿ, ಕಸ್ತೂರಿ ಬಾ, ಮಹಾದೇವ ದೇಸಾಯಿ, ಸರದಾರ್‌ಪಟೇಲ್, ನೆಹ್ರೂ ಮೊದಲಾದವರನ್ನು ಬಂಧಿಸಿ ಸೆರೆಮನೆಗೆ ಕಳುಹಿಸಿತು. ಗಾಂಧೀಜಿ, ಕಸ್ತೂರಿ ಬಾ, ಮಹಾದೇವ ದೇಸಾಯಿ–ಇವರು ಪುಣೆಯಲ್ಲಿರುವ ಆಗಾಖಾನರ ಅರಮನೆಯಲ್ಲಿ ಬಂಧಿತರಾದರು. ಆ ವಾರ್ತೆಯನ್ನು ಕೇಳಿ, ಅಖಂಡ ಭಾರತವೇ ಆಂದೋಳನವನ್ನು ಆರಂಭಿಸಿತು. ಸರ್ಕಾರ ಲಾಠಿ ಮತ್ತು ಗುಂಡುಗಳನ್ನು ಯಥೇಚ್ಛವಾಗಿ ಬಳಸಿತು. ಆಗ ವೈಸರಾಯಿಯಾಗಿದ್ದ ಲನ್‌ಲಿಥ್‌ಗೋ, ಹಿಂಸಾಚಾರಕ್ಕೆ ಗಾಂಧೀಜಿ

ಯವರೇ ಕಾರಣವೆಂದು ಆಪಾದಿಸಿದರು. ಆ ಸಂದರ್ಭದಲ್ಲಿ ಗಾಂಧೀಜಿಯವರ ಆಪ್ತ ಕಾರ್ಯದರ್ಶಿ ಮಹಾದೇವ ದೇಸಾಯಿ ಯವರು ನಿಧನರಾದರು. ಆ ದುಃಖವನ್ನು ತಡೆಯುವುದು ಗಾಂಧೀಜಿಯವರಿಗೆ ತುಂಬ ಕಷ್ಟವಾಯಿತು. ೧೯೪೩ರಲ್ಲಿ ಗಾಂಧೀಜಿ ಇಪ್ಪತ್ತೊಂದು ದಿನಗಳ ಉಪವಾಸ ವ್ರತವನ್ನು ಕೈಗೊಂಡರು. ಅವರು ತುಂಬ ನಿಶ್ಯಕ್ತರಾದರೂ ಉಪವಾಸ ವ್ರತ ಯಶಸ್ವಿಯಾಗಿ ಮುಕ್ತಾಯವಾಯಿತು.

ಫೆಬ್ರುವರಿ ೨೨, ೧೯೪೪ ರಂದು ಗಾಂಧೀಜಿಯವರ ಸಹ ಧರ್ಮಿಣಿ ಕಸ್ತೂರಿ ಬಾ ಕಾಲವಾದರು. ಅಪಾರ ಶೋಕದಲ್ಲಿ ಗಾಂಧೀಜಿ ಮುಳುಗಿದರು. ಮಲೇರಿಯಾ ರೋಗ ಬೇರೆ ಅವ ರನ್ನು ಬಳಲಿಸಿತು. ಅವರ ಆರೋಗ್ಯ ಕುಂದುತ್ತಿರುವುದನ್ನು ಕಂಡ ಸರ್ಕಾರ, ಅವರನ್ನು ಬಿಡುಗಡೆ ಮಾಡಿತು. ಇತರರೂ ಬಿಡುಗಡೆಯಾದರು.

ಜಿನ್ನಾರ ಹಠ

ಮುಸ್ಲಿಮರಿಗೆ ಪಾಕಿಸ್ತಾನವೆಂಬ ಬೇರೆ ರಾಷ್ಟ್ರವಿರಬೇಕೆಂಬ ಹಠ ಜಿನ್ನಾ ಅವರದು. ೧೯೪೦ರಲ್ಲಿ ಲಾಹೋರಿನಲ್ಲಿ ನಡೆದ ಮುಸ್ಲಿಂ ಲೀಗಿನ ವಾರ್ಷಿಕ ಸಭೆಯಲ್ಲಿ ಜಿನ್ನಾರವರು, "ಮುಸ್ಲಿಂ ಮತ್ತು ಹಿಂದೂ ಸಂಸ್ಕೃತಿಗಳು ಬೇರೆ ಬೇರೆ. ಇವೆರಡು ಸಂಸ್ಕೃತಿ ಗಳನ್ನು ಕೂಡಿಸುವುದು ಸಾಧ್ಯವಿಲ್ಲ" ಎಂದು ಘೋಷಿಸಿದರು. ಗಾಂಧೀಜಿಯವರನ್ನು ಕುರಿತು ಹಿಂದೂತ್ವವನ್ನು ಉದ್ಧಾರ ಮಾಡಲು ಹಾಗೂ ಹಿಂದೂ ರಾಜ್ಯವನ್ನು ಕಟ್ಟಲು ಕಾಂಗ್ರೆಸ್ಸನ್ನು ಬಳಸುತ್ತಿರುವವರೇ ಗಾಂಧೀಜಿ ಎಂದು ಟೀಕಿಸಿದರು.

ಸೆರೆಮನೆಯಿಂದ ಹೊರಬಂದ ಗಾಂಧೀಜಿ, ಜಿನ್ನಾರವರ ಗೃಹ

ವಲ್ಲಿಯೇ ಅವರನ್ನು ಕಂಡು ಭಾರತದ ಸ್ವಾತಂತ್ರ್ಯದ ಬಗ್ಗೆ ವಿಚಾರವಿನಿಮಯ ಮಾಡಿದರು. ಜಿನ್ನಾ ತಾವು ಹಿಡಿದ ಪಟ್ಟನ್ನು ಬಿಡಲಿಲ್ಲ. ಪಾಕಿಸ್ತಾನ ನಿರ್ಮಾಣದ ಸಿದ್ಧಾಂತದಿಂದ ಅವರು ಕದಲಲಿಲ್ಲ. ಎರಡನೆಯ ಮಹಾಯುದ್ಧದಲ್ಲಿ ಬ್ರಿಟಿಷರಿಗೆ ಮುಸ್ಲಿಮರ ಸಂಪೂರ್ಣ ಬೆಂಬಲವಿದೆ ಎಂದು ಘೋಷಿಸಿದ ಜಿನ್ನಾರು, ಸೈನ್ಯಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಮುಸ್ಲಿಮರು ಸೇರುವಂತೆ ಮಾಡಿದರು. ಮುಸ್ಲಿಂ ಲೀಗಿನ ಬೇಡಿಕೆಯಾದ ಪಾಕಿಸ್ತಾನ ರೂಪಿತವಾಗದಿದ್ದರೆ, ೧೯೪೬, ಆಗಸ್ಟ್ ೧೬ ರಂದು ನೇರ ಕಾರ್ಯಾಚರಣೆ ನಡೆಸುವುದಾಗಿ ಅವರು ಆರ್ಭಟಿಸಿದರು. ಗಾಂಧೀಜಿ, ಭಾರತದ ವಿಭಜನೆಯನ್ನು ಒಪ್ಪಲಿಲ್ಲ. ಆದರೆ, ಸರ್ಕಾರದಲ್ಲಿ ಮುಸ್ಲಿಮರಿಗೆ ಹೆಚ್ಚಿನ ಪ್ರಾತಿನಿಧ್ಯವಿರುವುದನ್ನು ಒಪ್ಪಿದ್ದು ಮಾತ್ರವಲ್ಲ, ಜಿನ್ನಾ ಅವರೇ ಭಾರತದ ಪ್ರಥಮ ಪ್ರಧಾನಿಯಾಗಲೆಂದು ಅವರು ಹೇಳಿದರು. ಇವೆಲ್ಲ ಜಿನ್ನಾರವರ ಹೃದಯವನ್ನು ಕರಗಿಸಲಿಲ್ಲ. ಈ ಕಾರಣಗಳಿಂದ, ಭಾರತಕ್ಕೆ ಆಗಮಿಸಿದ ಬ್ರಿಟಿಷ್ ಮಂತ್ರಿಗಳ ನಿಯೋಗ ವಿಫಲವಾಯಿತು.

ಹತ್ಯಾಕಾಂಡ

ಬಂಗಾಳದ ಚುನಾವಣೆಯಲ್ಲಿ ಮುಸ್ಲಿಂ ಲೀಗ್ ಬಹುಮತ ಗಳಿಸಿದುದರಿಂದ, ಸುಹ್ರವರ್ದಿ ಮುಖ್ಯಮಂತ್ರಿಯಾದರು. ಅವರಿಗೆ ೧೯೪೬ರ ಆಗಸ್ಟ್ ಹದಿನಾರರಂದು ಮುಸ್ಲಿಂ ಲೀಗಿನ ನೇರ ಕಾರ್ಯಾಚರಣೆಯನ್ನು ಜಾರಿಗೆ ತರಲು ಅತೀವ ತವಕ. ಆಗಸ್ಟ್ ಹದಿನಾರರಂದು ಅವರು ರಜಾ ಘೋಷಿಸಿದರು. ಮುಸ್ಲಿಮ್ ಗೂಂಡಾಗಳಿಗೆ ಬಂದೂಕು ಹಾಗೂ ಇತರ ವಿನಾಶಕರ ಆಯುಧಗಳನ್ನು ಅವರು ಒದಗಿಸಿದರು. ಕಲ್ಕತ್ತೆಯಲ್ಲಿದ್ದ ಹಿಂದೂ

ಪೊಲೀಸ್ ಅಧಿಕಾರಿಗಳನ್ನು ಬೇರೆ ಕಡೆಗೆ ವರ್ಗಮಾಡಿ, ಮುಸ್ಲಿಂ ಪೊಲೀಸ್ ಅಧಿಕಾರಿಗಳೇ ಕಲ್ಕತ್ತೆಯಲ್ಲಿರುವಂತೆ ಮಾಡಿದರು. ಹಿಂದೂಗಳ ಹತ್ಯಾಕಾಂಡಕ್ಕೆ ಸರ್ವರೀತಿಯಿಂದಲೂ ಸುಹ್ರವರ್ದಿ ಸಿದ್ಧಮಾಡಿಕೊಂಡರು. ಆಗಸ್ಟ್ ಹದಿನಾರರಂದು ಬೆಳಗ್ಗೆ ಮುಸ್ಲಿಂ ಗೂಂಡಾಗಳ ಸೇನೆ "ಲಡ್ಕೇ ಲೆಂಗೇ ಪಾಕಿಸ್ತಾನ್"–ಹೋರಾಡಿ ಪಾಕಿಸ್ತಾನ ಪಡೆಯುತ್ತೇವೆ–ಎಂದು ಕೂಗುತ್ತ ಕಲ್ಕತ್ತದ ಎಲ್ಲ ಭಾಗಗಳಲ್ಲಿ ಸಂಚರಿಸಿ, ಹಿಂದೂಗಳನ್ನು ಪುರುಷರು, ಸ್ತ್ರೀಯರು, ಮಕ್ಕಳು, ವೃದ್ಧರೆಂಬ ಭೇದವಿಲ್ಲದೆ ಕೊಲೆ ಮಾಡಲು ಆರಂಭಿಸಿದರು. ಹಿಂದೂ ಮಹಿಳೆಯರ ಮಾನಾಪಹಾರವಾಯಿತು, ಹಿಂದೂಗಳ ಬಲಾತ್ಕಾರ ಮತಾಂತರವಾಯಿತು, ಸಹಸ್ರಾರು ಹಿಂದೂಗಳು ಸತ್ತರು. ಎರಡು ದಿನಗಳ ಕಾಲ ಅವ್ಯಾಹತವಾಗಿ ಈ ರಾಕ್ಷಸೀ ಕೃತ್ಯ ನಡೆದು ಹೋಯಿತು. ಹಿಂದೂಗಳು ಸರ್ಕಾರಕ್ಕೆ ತಮ್ಮ ದುಃಸ್ಥಿತಿಯನ್ನು ಮನವಿ ಮಾಡಿಕೊಂಡು ಹತ್ಯಾಕಾಂಡವನ್ನು ನಿಲ್ಲಿಸಲು ಕೋರಿದರು. ಸರ್ಕಾರವೇ ಹತ್ಯಾಕಾಂಡಕ್ಕೆ ಬೆಂಬಲ ನೀಡಿದರೆ ಇನ್ನಾರಿಗೆ ಮನವಿ ಮಾಡಿಕೊಳ್ಳಬೇಕು? ಸರ್ಕಾರದಿಂದ ಯಾವ ನೆರವೂ ಬಾರದಿದ್ದುದರಿಂದ, ಹಿಂದೂಗಳು ಸಂಘಟಿತರಾಗಿ ಗೂಂಡಾಗಳನ್ನು ಎದುರಿಸಿದರು. ಆಗ ಮುಸ್ಲಿಮರೂ ಹತರಾದರು. ಆಗ ಸುಹ್ರವರ್ದಿ ಸೈನ್ಯವನ್ನು ಕರೆಸಿ ಹಿಂದೂಗಳ ನಾಶಕ್ಕೆ ಆರಂಭಿಸಿದರು. ಹಿಂದೂಗಳಿಂದ ಮುಸ್ಲಿಮರು ಹತರಾದ ಸುದ್ದಿ ನೋಆಖಲಿ ಎಂಬ ಪ್ರದೇಶಕ್ಕೆ ಮುಟ್ಟಿತು. ೧೯೪೬ ಅಕ್ಟೋಬರ್ ಹತ್ತರಂದು ಹಿಂದೂಗಳ ಕೊಲೆ ಅಲ್ಲಿ ಭಯಂಕರ ಪ್ರಮಾಣದಲ್ಲಿ ನಡೆದುಹೋಯಿತು. ಅಲ್ಲಿ ಮುಸ್ಲಿಮರೇ ಬಹು ಸಂಖ್ಯಾತರು. ಹಿಂದೂ ಯುವತಿಯರ ಮಾನಭಂಗ, ಬಲಾತ್ಕಾರ ಮತಾಂತರ ನಡೆದುಹೋಯಿತು.

ಹಲವು ಹಿಂದೂಗಳು ಸತ್ತರು. ಕೆಲವರು ತಮ್ಮ ಮನೆಮಠ ಗಳನ್ನು ಬಿಟ್ಟು ಪ್ರಾಣರಕ್ಷಣೆಗಾಗಿ ನೋಆಖಲಿಯನ್ನು ತ್ಯಜಿಸಿದರು. ಅಲ್ಲಿಯ ಪೈಶಾಚಿಕ ಕೃತ್ಯಗಳನ್ನು ಕುರಿತು ಮ್ಯುರಿಯಲ್ ಲಿಸ್ಟರ್ ಎಂಬ ಮಹಿಳೆ, "ಮುಸ್ಲಿಂ ಲೀಗಿನ ಕೃತ್ಯ ಹಿಟ್ಲರನ ಅಮಾನುಷ ವರ್ತನೆಯನ್ನು ಮೀರಿಸಿತ್ತು" ಎಂದು ದುಃಖದಿಂದ ನುಡಿದರು.

ಗಾಂಧೀಜಿ, ೧೯೪೬, ನವೆಂಬರ್ ೬ ರಂದು. ನೋಆಖಲಿಗೆ ಹೊರಟರು. ಅವರು ಅಲ್ಲಿಗೆ ಹೋದುದು ಮುಸ್ಲಿಂ ಲೀಗಿನವರಿಗೆ ಇಷ್ಟವಾಗಲಿಲ್ಲ. ಆಗಲೆ ನೋಆಖಲಿಯ ಘಟನೆಗೆ ಪ್ರತೀಕಾರವಾಗಿ ಬಿಹಾರದಲ್ಲಿ ಮುಸ್ಲಿಮರ ಕೊಲೆಯಾದ ವೃತ್ತಾಂತ ಗಾಂಧೀಜಿಯವರಿಗೆ ತಿಳಿದು, ಅವರು ಪರಿತಪಿಸಿದರು. ನೋಆಖಲಿಯಲ್ಲಿ ಶಾಂತಿ ಸ್ಥಾಪನೆಗಾಗಿ, ಎರಡು ತಿಂಗಳ ಕಾಲ ಅವರು ಸಂಚರಿಸಿದರು, ಶಾಂತಿಗಾಗಿ ಮನವಿಮಾಡಿಕೊಂಡರು. ಅವರು ನಡೆಸುತ್ತಿದ್ದ ಪ್ರಾರ್ಥನಾ ಸಭೆಯಲ್ಲಿ ಕೆಲವೇ ಮುಸ್ಲಿಮರು ಭಾಗವಹಿಸಿದರು. ಕ್ರಮೇಣ ಯಾವ ಮುಸ್ಲಿಮರೂ ಪ್ರಾರ್ಥನಾ ಸಭೆಯಲ್ಲಿ ಭಾಗವಹಿಸಲಿಲ್ಲ. ಗಾಂಧೀಜಿ ಹೆಚ್ಚಿನ ಕೆಲಸ ಮಾಡಲು ನೋಆಖಲಿಯಲ್ಲಿ ಪ್ರೋತ್ಸಾಹ ಸಿಗಲಿಲ್ಲ.

ಗಾಂಧೀಜಿ ನೋಆಖಲಿಯಿಂದ ಬಿಹಾರಿಗೆ ಹೋದಾಗ, ಅಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರ್ಕಾರ, ಪರಿಸ್ಥಿತಿಯನ್ನು ಬಹುಬೇಗನೆ ಹತೋಟಿಗೆ ತಂದುದನ್ನು ಅವರು ಪ್ರತ್ಯಕ್ಷವಾಗಿ ನೋಡಿದರು. ಮುಸ್ಲಿಂ ಲೀಗಿನ ನಾಯಕರು 'ಪಿರ್‌ಪೂರ್' ಎಂಬ ಸುಳ್ಳು ವರದಿಯನ್ನು ಸೃಷ್ಟಿಸಿ, ಭಾರತದ ಎಲ್ಲೆಡೆ, ಹಿಂದೂಗಳು ಮುಸ್ಲಿಮರ ಕೊಲೆ ಮಾಡುತ್ತಿದ್ದಾರೆ ಎಂಬ ಪ್ರಚಾರ ಮಾಡಿ, ಹಿಂದೂಗಳ ಮೇಲೆ ವಿಷಕಾರಿದರು. ಆಗ ಬಾಬು ರಾಜೇಂದ್ರಪ್ರಸಾದರು

ಆಗ ಮುಖ್ಯ ನ್ಯಾಯಾಧೀಶರಾಗಿದ್ದ ಸರ್ ಮಾರಿಸ್ ಗ್ವೈಯರ್ ಅವರಿಂದ ನ್ಯಾಯಾಂಗ ವಿಚಾರಣೆಯಾಗಲೆಂದು ಸಲಹೆ ಮಾಡಿದರು. ಆ ಸಲಹೆಗೆ ಜಿನ್ನಾರವರು ಒಪ್ಪಲಿಲ್ಲ.

ಸಿಂಧ್ ಮತ್ತು ಪಂಜಾಬುಗಳಲ್ಲಿ ವಿಷಬೀಜ ಬಿತ್ತಿದುದರಿಂದ, ಅಲ್ಲಿ ಹಿಂದೂಗಳ ಭಯಂಕರ ಕೊಲೆಯಾಯಿತು. ಹಿಂದೂ ಮಹಿಳೆಯರ ಮೇಲೆ ಭಯಂಕರ ದೌರ್ಜನ್ಯ, ಆಸ್ತಿಪಾಸ್ತಿಗಳ ನಾಶ, ಬಲಾತ್ಕಾರ ಮತಾಂತರ ನಡೆದುಹೋಯಿತು. ಲಕ್ಷಾಂತರ ಮಂದಿ ನಿರಾಶ್ರಿತರಾಗಿ, ತಮ್ಮ ಸರ್ವಸ್ವವನ್ನೂ ಕಳೆದುಕೊಂಡು ದೆಹಲಿಗೆ ಬಂದರು. ಸಹಸ್ರಾರು ನಿರಾಶ್ರಿತರು ಹೀಗೆ ಬರುತ್ತಿರುವಾಗ, ಹಲವರು ಮುಸ್ಲಿಂ ಗೂಂಡಾಗಳ ಕೈಗೆ ಸಿಕ್ಕಿ ಸತ್ತರು.

ದೇಶದ ವಿಭಜನೆಯಾಯಿತು, ಸ್ವಾತಂತ್ರ್ಯ ಬಂದಿತು

ಆ ಘೋರ ಪರಿಸ್ಥಿತಿಯನ್ನು ಕಂಡ ಕಾಂಗ್ರೆಸ್ ಕಾರ್ಯಕಾರಿ ಮಂಡಲಿ ದೇಶದ ವಿಭಜನೆಗೆ ಒಪ್ಪಿತು. ಆಗ ವೈಸರಾಯಿಯಾಗಿದ್ದ ಲಾರ್ಡ್ ಮೌಂಟ್ ಬೇಟನ್ ಅವರ ನೇತೃತ್ವದಲ್ಲಿ ಭಾರತದ ವಿಭಜನೆಯಾಯಿತು. ಪೂರ್ವ ಮತ್ತು ಪಶ್ಚಿಮ ಪಾಕಿಸ್ತಾನಗಳ ಉದಯವಾಯಿತು. ಆಗಸ್ಟ್ ೧೫, ೧೯೪೭ರಂದು ಭಾರತ ಸ್ವತಂತ್ರವಾಯಿತು.

ಪಾಕಿಸ್ತಾನದ ದೌರ್ಜನ್ಯ

ಪಾಕಿಸ್ತಾನ ಉದಯವಾದೊಡನೆ, ಅಲ್ಲಿ ಹಿಂದೂಗಳ ಕೊಲೆ ಅವ್ಯಾಹತವಾಗಿ ನಡೆಯಿತು. ಹಿಂದೂಗಳು ಚಿತ್ರಹಿಂಸೆಗೆ ಸಿಕ್ಕಿ ಸಹಸ್ರಾರು ಜನ ಸತ್ತರು. ಲಕ್ಷಾಂತರ ನಿರಾಶ್ರಿತರು ತಮ್ಮ ಸರ್ವಸ್ವವನ್ನೂ ಕಳೆದುಕೊಂಡು ಬಹುಪ್ರಯಾಸದಿಂದ ಭಾರತಕ್ಕೆ ಬಂದರು.

ೋಮುವಾರು ವಿಷಜ್ವಾಲೆಗೆ ಸಿಕ್ಕಿದ ನಿರಪರಾಧಿಗಳ ಸಂಕಟವನ್ನು
ರ್ಣಿಸುವುದು ಅಸಾಧ್ಯ.

ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ಗಾಂಧೀಜಿ ಕಲ್ಕತ್ತೆಯಲ್ಲಿದ್ದರು.
ಶಾಂತಿದೂತರ ಪ್ರಭಾವದಿಂದ ಕೋಮುವಾರು ವಿಷಜ್ವಾಲೆ
ಲ್ಕತ್ತೆಯಲ್ಲಿ ಕಾಣಿಸಲಿಲ್ಲ. "ಐವತ್ತು ಸಾವಿರ ಸೈನಿಕರಿಂದಲೂ
ಸಾಧ್ಯವಾಗಬಹುದಾದ ಶಾಂತಿ ಸ್ಥಾಪನೆಯ ಕಾರ್ಯವನ್ನು
ಾಂಧೀಜಿ ತಮ್ಮ ಸಾತ್ತ್ವಿಕ ಶಕ್ತಿಯಿಂದ ಕಲ್ಕತ್ತ ಮಹಾನಗರದಲ್ಲಿ
ಸ್ಥಾಪಿಸಿದ್ದಾರೆ"–ಎಂದು ವೈಸರಾಯಿ ಮೌಂಟ್ ಬೇಟನ್ ಅವರು
ುಕ್ತಕಂಠದಿಂದ ಶ್ಲಾಘಿಸಿದರು.

ಅತ್ತ ಪಾಕಿಸ್ತಾನ ಕಾಶ್ಮೀರದ ಮೇಲೆ ಇದ್ದಕ್ಕಿದ್ದಂತೆ ಧಾಳಿ ಮಾಡಿ,
ಾಶ್ಮೀರದ ಬಹುಭಾಗವನ್ನು ಕಬಳಿಸಿತು. ಆ ಧಾಳಿಕಾರರನ್ನು
ಾರತದಿಂದ ಓಡಿಸಲು ಅವಕಾಶಬೇಕೆಂದು ಸರದಾರ್ ಪಟೇಲರ
ೂತಿಗೆ ನೆಹ್ರು ಪುರಸ್ಕಾರ ನೀಡದೆ, ಸಮಸ್ಯೆಯನ್ನು ವಿಶ್ವಸಂಸ್ಥೆಯ
ುಂದಿಟ್ಟರು. ಇದುವರೆಗೆ ವಿಶ್ವಸಂಸ್ಥೆಯಿಂದ ಭಾರತಕ್ಕೆ ನ್ಯಾಯ
ೊರಕಿಲ್ಲ. ಪಾಕಿಸ್ತಾನದ ವಶದಲ್ಲಿಯೇ ಕಾಶ್ಮೀರದ ಭಾಗ ಇರು
ಂತಾಯಿತು! ಭಾರತ ಒಡೆದು ಎರಡು ಭಾಗವಾದಾಗ,
ಾರತವು ಐವತ್ತೈದು ಕೋಟಿ ರೂಪಾಯಿಗಳನ್ನು ಪಾಕಿಸ್ತಾನಕ್ಕೆ
ೊಡಬೇಕೆಂದು ಒಪ್ಪಂದವಾಗಿತ್ತು. ಪಾಕಿಸ್ತಾನ, ಕಾಶ್ಮೀರದ ಬಹು
ಾಗವನ್ನು ಕಬಳಿಸಿದ ಬಳಿಕ ನೆಹ್ರು ಆ ಹಣವನ್ನು, ಪಾಕಿಸ್ತಾನ
ಾನು ಆಕ್ರಮಿಸಿದ ಕಾಶ್ಮೀರದ ಭಾಗವನ್ನು ತೆರವು ಮಾಡಿದ
ಳಿಕ ಕೊಡುವುದಾಗಿ ಹೇಳಿದರು. ಆದರೆ ಗಾಂಧೀಜಿಯವರ
ತ್ತಡಕ್ಕೆ ಮಣಿದು, ಐವತ್ತೈದು ಕೋಟಿ ರೂಪಾಯಿಗಳನ್ನು
ಅವರು ಪಾಕಿಸ್ತಾನಕ್ಕೆ ಕೂಡಲೆ ಸಲ್ಲಿಸಿದರು.

೫. ಕೊನೆಯ ದಿನಗಳು

ಪಾಕಿಸ್ತಾನದಲ್ಲಾದ ಭಯಂಕರ ಕಗ್ಗೊಲೆಯ ವೃತ್ತಾಂತ ನಿರಾಶ್ರಿತರ ಮೂಲಕ ದೆಹಲಿಯ ಜನರಿಗೆ ತಿಳಿಯಿತು. ದೆಹಲಿಯಲ್ಲಿಯೂ ಕೋಮುವಾರು ವಿಷಜ್ವಾಲೆ ಹಬ್ಬಿತು. ಹಲವಾರು ಮುಸ್ಲಿಮರು ಸತ್ತರು. ಈ ವೃತ್ತಾಂತವನ್ನು ಕೇಳಿದ ಗಾಂಧೀಜಿ ದೆಹಲಿಗೆ ಧಾವಿಸಿದರು. ಹಿಂದೂಮುಸ್ಲಿಮರಲ್ಲಿ ಐಕಮತ್ಯವಿರಬೇಕೆಂದೂ ದೆಹಲಿಯಲ್ಲಿ ಒಬ್ಬ ಮುಸ್ಲಿಮನೂ ಸಾಯಬಾರದೆಂದೂ ಘೋಷಿಸಿ, ಆ ಆದರ್ಶ ಸಾಧನೆಗಾಗಿ ಉಪವಾಸವನ್ನು ಕೈಗೊಂಡರು. ಉಪವಾಸ ನಿಲ್ಲಿಸಲು ಏಳು ಷರತ್ತುಗಳನ್ನು ಹಾಕಿದರು. ಆ ಷರತ್ತುಗಳು ಹೀಗಿದ್ದವು:

೧. ಕ್ವಾಜಾ ಭಕ್ತಿಯಾರ್ ಗೋರಿಯ ಬಳಿ, ವರ್ಷವರ್ಷವೂ ಉತ್ಸವ ನಡೆಯುವಂತೆ ಆ ವರ್ಷವೂ ನಡೆಯಬೇಕು.

೨. ದೆಹಲಿಯಲ್ಲಿ ಹಿಂದೂ ನಿರಾಶ್ರಿತರು ಆಕ್ರಮಿಸಿಕೊಂಡಿದ್ದ ೧೧೭ ಮಸೀದಿಗಳನ್ನು ಕೂಡಲೆ ತೆರವು ಮಾಡಿಕೊಡಬೇಕು. ಅವುಗಳೆಲ್ಲ ಹಿಂದಿನಂತೆ ಮಸೀದಿಗಳೇ ಆಗಿರಬೇಕು.

೩. ಮುಸ್ಲಿಮರು ಸ್ವತಂತ್ರವಾಗಿ ಎಲ್ಲಿ ಬೇಕಾದರೂ ಓಡಾಡಲು ಸ್ವಾತಂತ್ರ್ಯವಿರಬೇಕು.

೪. ಪಾಕಿಸ್ತಾನಕ್ಕೆ ಹೋದ ಮುಸ್ಲಿಮರು ಭಾರತಕ್ಕೆ ಹಿಂತಿರುಗಲು ಇಚ್ಛಿಸಿದರೆ, ಅವರಿಗೆ ಹಿಂದೂಗಳು ಸಂಪೂರ್ಣ ಸ್ವಾತಂತ್ರ್ಯ ನೀಡಬೇಕು.

೫. ಮುಸ್ಲಿಮರು ರೈಲಿನಲ್ಲಿ ಪ್ರಯಾಣ ಮಾಡಲು ಸಂಪೂರ್ಣ ಸ್ವಾತಂತ್ರ್ಯವಿರಬೇಕು.

೬. ಮುಸ್ಲಿಮರ ಮೇಲೆ ಆರ್ಥಿಕ ದಿಗ್ಬಂಧನ ಹೇರಬಾರದು.
೭. ಮುಸ್ಲಿಮರು ವಾಸಿಸುವ ಪ್ರದೇಶಗಳಲ್ಲಿ, ಅವರು ಇಚ್ಛಿಸಿದರೆ ಮಾತ್ರ ಹಿಂದೂಗಳು ವಾಸ ಮಾಡಬೇಕು.

ಗಾಂಧೀಜಿಯವರು ಉಪವಾಸಕ್ಕೆ ಆರಂಭಿಸಿದ್ದು ೧೯೪೮ ಜನವರಿ ಹದಿಮೂರನೇ ದಿನಾಂಕದಂದು. ಆ ಉಪವಾಸ ಮುಕ್ತಾಯವಾದುದು ೧೯೪೮, ಜನವರಿ ಹದಿನೆಂಟರಂದು. ಕೇವಲ ಐದು ದಿನಗಳಲ್ಲಿ, ಪರ್ವತೋಪಮವಾದ ಕಷ್ಟಗಳನ್ನು ಅನುಭವಿಸಿ ಬಂದ ನಿರಾಶ್ರಿತರು, ತಮ್ಮ ಸಂಕಟಗಳನ್ನು ಮರೆತು, ಗಾಂಧೀಜಿ ಉಳಿಯಬೇಕೆಂದು ಅವರ ನಿಯಮಗಳಿಗೆ ತಲೆಬಾಗಿದರು. ಪಾಕಿಸ್ತಾನದಲ್ಲಾದ ಹಿಂದೂಗಳ ಕಗ್ಗೊಲೆಯನ್ನು ಭಾರತೀಯ ಮುಸ್ಲಿಮರಾರೂ ಖಂಡಿಸಲೇ ಇಲ್ಲ.

ಕೆಲವರು ಹಿಂದೂಗಳಿಗೆ ಗಾಂಧೀಜಿಯವರ ಏಕಪಕ್ಷೀಯ ದೃಷ್ಟಿ ಸರಿಕಾಣಲಿಲ್ಲ. ಕೇವಲ ಹಿಂದೂಗಳ ಮಹಾತ್ಯಾಗಕ್ಕೆ ಅವರು ಕರೆಕೊಟ್ಟದ್ದು, ಕಾಶ್ಮೀರವನ್ನು ಕಬಳಿಸಿದ ಪಾಕಿಸ್ತಾನಕ್ಕೆ ಐವತ್ತೈದು ಕೋಟಿ ರೂಪಾಯಿಗಳನ್ನು ಕೊಡಿಸಿದ್ದು ಅವರಿಗೆ ಅಪ್ರಿಯವಾಯಿತು. ಗಾಂಧೀಜಿ ನೋಆಖಲಿಯಲ್ಲಿದ್ದಾಗ, ಮುಸ್ಲಿಮರಿಗೆ ಯಾವ ನಿಯಮಗಳನ್ನೂ ಹೇಳಲಿಲ್ಲ. ದೆಹಲಿಯಲ್ಲಿ ಮುಸ್ಲಿಮರ ಕ್ಷೇಮಕ್ಕಾಗಿ ಉಪವಾಸ ಹಾಗೂ ಷರತ್ತುಗಳು. ಇವೆಲ್ಲ ಕೆಲವು ಹಿಂದೂಗಳ ಅತೃಪ್ತಿಗೆ ಕಾರಣವಾದುವು.

ಉಪವಾಸ ಮುಗಿಸಿದ ಬಳಿಕ ಗಾಂಧೀಜಿ ಬಹಳ ನಿಶ್ಶಕ್ತರಾಗಿದ್ದರು. ಜನವರಿ ಇಪ್ಪತ್ತನೆಯ ದಿನಾಂಕ ಅವರು ಕುಳಿತಿದ್ದ ಕುರ್ಚಿಯನ್ನೇ ಸ್ವಯಂಸೇವಕರು ಪ್ರಾರ್ಥನಾ ಸಭೆಗೆ ಎತ್ತಿಕೊಂಡು ಹೋದರು. ಅವರಿಗೆ ಮಾತನಾಡಲೂ ಶಕ್ತಿ ಇರಲಿಲ್ಲ. ಧ್ವನಿವರ್ಧಕದಲ್ಲಿಯೂ ಅವರ ಮಾತು ಸರಿಯಾಗಿ ಕೇಳುತ್ತಿರಲಿಲ್ಲ. ಅಷ್ಟೊಂದು

ಅವರು ಬಳಲಿದ್ದರು. ಆ ದಿನ ಪ್ರಾರ್ಥನಾ ಸಭೆಯಲ್ಲಿ ಒಂದು ಬಾಂಬು ಸಿಡಿಯಿತು. ಅದರಿಂದ ಯಾರಿಗೂ ಸಾವು ನೋವುಗಳಾಗ ಲಿಲ್ಲ. ಈ ಘಟನೆಯಾದ ಬಳಿಕ ಮುನ್ನೆಚ್ಚರಿಕೆಯ ಕ್ರಮವಾಗಿ ಸರದಾರ್ ಪಟೇಲರು ಪೋಲೀಸ್ ಬಂದೋಬಸ್ತು ಮಾಡಿದರು. ಆ ವ್ಯವಸ್ಥೆಯನ್ನು ಗಾಂಧೀಜಿ ಒಪ್ಪಲಿಲ್ಲ. ಪ್ರಾರ್ಥನಾ ಸಭೆಗೆ ಬರುವವರನ್ನಾದರೂ ಶೋಧಿಸಿ ಬಿಡಬೇಕೆಂಬ ಸರದಾರರ ಸಲಹೆ ಯನ್ನೂ ಅವರು ತಿರಸ್ಕರಿಸಿದರು.

೧೯೪೮, ಜನವರಿ ಮೂವತ್ತರಂದು ಸರದಾರ್ ಪಟೇಲರು ಬಿರ್ಲಾ ಭವನದಲ್ಲಿದ್ದ ಗಾಂಧೀಜಿಯವರೊಡನೆ ಮಾತನಾಡುತ್ತ ಕುಳಿತಿದ್ದರು. ಪ್ರಾರ್ಥನಾ ಸಭೆಗೆ ಹೊರಡುವಾಗ ಗಾಂಧೀಜಿಯವರಿಗೆ ಕೆಲವು ನಿಮಿಷಗಳ ಹೊತ್ತಾಯಿತು. ಆಭಾಗಾಂಧಿ ಮತ್ತು ಮನುಬೆನ್ ಗಾಂಧಿ ಎಂಬ ಇಬ್ಬರು ತರುಣಿಯರ ಹೆಗಲ ಮೇಲೆ ಕೈಯಿಟ್ಟು ಗಾಂಧೀಜಿ ಪ್ರಾರ್ಥನಾ ಸಭೆಗೆ ಹೊರಟರು. ಆಗ ಖಾಕಿ ಉಡುಪಿ ನಲ್ಲಿದ್ದ ವ್ಯಕ್ತಿಯೊಬ್ಬರು ಕೈಮುಗಿದು, ಗಾಂಧೀಜಿಯವರ ಎದುರಿಗೆ ಬಂದರು. ಆಗ ಮನುಬೆನ್ ಗಾಂಧಿಯವರು, "ಈಗಾಗಲೆ ಪ್ರಾರ್ಥನಾ ಸಭೆಗೆ ಹತ್ತು ನಿಮಿಷಗಳ ಹೊತ್ತಾಗಿದೆ. ನೀವೇಕೆ ಅಡ್ಡ ಬರುತ್ತಿದ್ದೀರಿ ?" ಎಂದು ಪ್ರಶ್ನಿಸಿದಾಗ, ಆ ವ್ಯಕ್ತಿ ಅವರನ್ನು ತಳ್ಳಿದ ರಭಸಕ್ಕೆ ಅವರ ಕೈಯಲ್ಲಿದ್ದ ಜಪಮಾಲೆ ಹಾಗೂ ಪುಸ್ತಕ ಕೆಳಗೆ ಬಿತ್ತು. ಆ ಸಮಯಕ್ಕೆ, ಆ ಖಾಕಿ ಉಡುಪಿನಲ್ಲಿದ್ದ ವ್ಯಕ್ತಿ, ಗಾಂಧೀಜಿಯವರ ಎದೆಗೆ ಪಿಸ್ತೂಲಿನಿಂದ ಹೊಡೆದರು. "ಹೇ ರಾಮ್, ಹೇ ರಾಮ್, ಹೇ ರಾ...." ಎಂದು ಹೇಳುತ್ತ ನೆಲಕ್ಕುರುಳಿ ದರು. ಆಭಾ ಗಾಂಧಿಯವರೂ ಗಾಂಧೀಜಿಯವರೊಡನೆ ನೆಲಕ್ಕುರುಳಿದರು. ಆದರೆ ಕೂಡಲೆ ಚೇತರಿಸಿಕೊಂಡು, ಗಾಂಧೀಜಿ ಯವರ ತಲೆಯನ್ನು ತಮ್ಮ ತೊಡೆಯ ಮೇಲೆ ಇರಿಸಿಕೊಂಡರು.

ಆಗ ಸಂಜೆ ಐದು ಗಂಟೆಯಾಗಿ ಹದಿನೇಳು ನಿಮಿಷಗಳಾಗಿದ್ದವು. ಆ ಭಯಂಕರ ಕೊಲೆ ಮಾಡಿದ ವ್ಯಕ್ತಿ ನಾಥೂರಾಮ್ ಗೋಡ್ಸೆ.

ಗಾಂಧೀಜಿಯವರ ಪ್ರಾಣಪಕ್ಷಿ ಹಾರಿಹೋಯಿತು. ಸ್ವಲ್ಪ ಹೊತ್ತಿನಲ್ಲಿಯೇ ಲಕ್ಷಾಂತರ ಜನರು, ಅವರ ಅಂತ್ಯದರ್ಶನಕ್ಕಾಗಿ ಬಿರ್ಲಾಭವನದ ಸುತ್ತ ನೆರೆದರು ; ತಮ್ಮ ಶ್ರದ್ಧಾಂಜಲಿಗಳನ್ನು ಅರ್ಪಿಸಿದರು. ಅಂದು ರಾತ್ರಿ ಆಕಾಶವಾಣಿಯ ಪ್ರಸಾರ ಭಾಷಣ ದಲ್ಲಿ ಜವಹರಲಾಲ್ ನೆಹ್ರೂ ಅವರು, "ನಮ್ಮ ಜೀವನದ ಬೆಳಕು ನಂದಿ ಹೋಯಿತು. ಎಲ್ಲೆಲ್ಲಿಯೂ ಕತ್ತಲೆ ಕವಿದಿದೆ....ರಾಷ್ಟ್ರಪಿತ ಇನ್ನಿಲ್ಲ"—ಎಂದು ಕಂಬನಿ ತುಂಬಿದ ನುಡಿಗಳಲ್ಲಿ ಹೇಳಿದರು.

೧೯೪೮, ಜನವರಿ ಮೂವತ್ತೊಂದರಂದು ಬೆಳಗ್ಗೆ ೧೧.೩೦ಕ್ಕೆ ಬಿರ್ಲಾಭವನದಿಂದ ಗಾಂಧೀಜಿಯವರ ಪಾರ್ಥಿವ ಶರೀರದ ಅಂತಿಮ ಯಾತ್ರೆ ಆರಂಭವಾಯಿತು. ಯಮುನಾ ನದಿಯ ತೀರದಲ್ಲಿ ಅವರ ಅಂತಿಮ ಸಂಸ್ಕಾರವಾಯಿತು. ದಾರಿಯುದ್ದಕ್ಕೂ ದುಃಖ ತಪ್ತರಾದ ಲಕ್ಷಾಂತರ ಜನರು ಕಿಕ್ಕಿರಿದು ನಿಂತು ತಮ್ಮ ಶ್ರದ್ಧಾಂಜಲಿ ಗಳನ್ನು ಅರ್ಪಿಸಿದರು.

ವಿಶ್ವಪ್ರೇಮಿ ಗಾಂಧೀಜಿ, ತಮ್ಮ ಶರೀರವನ್ನು ತ್ಯಜಿಸಿದರೂ, ಅವರ ಸಂದೇಶ ಅಮರ. ಯಾರು ಬೇಕಾದರೂ ಅವರ ವಿಚಾರ ಧಾರೆ ಹಾಗೂ ಸಂದೇಶಗಳಿಂದ ಸ್ಫೂರ್ತಿಪಡೆದು ತಮ್ಮ ಜೀವನ ವನ್ನು ಸಾರ್ಥಕ ಪಡಿಸಿಕೊಳ್ಳಬಹುದು.

೬. ಗಾಂಧೀ ವಿಚಾರಧಾರೆ

ಧರ್ಮ, ಸತ್ಯ, ಅಹಿಂಸೆ

ಗಾಂಧೀಜಿಯವರ ಜೀವನದ ಬೇರುಗಳಿದ್ದುದು ಧರ್ಮದಲ್ಲಿ. ಅವರ ಜೀವನ ಅರಳಿದ್ದು ಸಾಮಾಜಿಕ ಹಾಗೂ ರಾಜಕೀಯ

ಜೀವನದಲ್ಲಿ. ಅವರು ಪ್ರತಿಪಾದಿಸಿದ್ದು ವಿಶ್ವಮಾನ್ಯ ತತ್ತ್ವಗಳನ್ನು. ಅವರ ಜೀವನ ದೃಷ್ಟಿಯನ್ನು ರೂಪಿಸುವುದಕ್ಕೆ ಬೆಂಬಲವಾಗಿದ್ದ ಗ್ರಂಥ ಭಗವದ್ಗೀತೆ. ಅವರ ದೃಷ್ಟಿಯಲ್ಲಿ ದೇವರೇ ಸತ್ಯ, ಸತ್ಯವೇ ದೇವರು.

ಸತ್ಯಶೋಧನೆಯೆಂಬುದು ಅವರಿಗೆ ಕೇವಲ ಬೌದ್ಧಿಕ ಕ್ರಿಯೆಯಾಗಿರಲಿಲ್ಲ. ಅದು ಅವರ ಜೀವನದ ಸಮಗ್ರ ಸಾಧನೆಯಾಗಿತ್ತು. ಅವರ ದೃಷ್ಟಿಯಲ್ಲಿ ಸತ್ಯಶೋಧನೆಯೆಂದರೆ ಧ್ಯೇಯ, ಚಿಂತನೆ ಮತ್ತು ಕಾರ್ಯಗಳಲ್ಲಿ ಏಕರೂಪತೆಯನ್ನು ಸಾಧಿಸುವುದಾಗಿತ್ತು. ಯೋಚಿಸುವುದೊಂದು, ಹೇಳುವುದು ಇನ್ನೊಂದು, ಮಾಡುವುದು ಮತ್ತೊಂದು–ಇಂತಹ ವಂಚಕ ಜೀವನವನ್ನು ಅವರು ನಿರಾಕರಿಸಿದರು. ಮೈತ್ರಿ, ಕರುಣೆ, ಪ್ರೀತಿಗಳೇ ಅವರ ದೃಷ್ಟಿಯಲ್ಲಿ ಅಹಿಂಸೆ.

ಸತ್ಯಾಗ್ರಹ

ದೌಷ್ಟ್ಯವನ್ನೂ ಅನೀತಿಯನ್ನೂ ಅಸತ್ಯವನ್ನೂ ಆತ್ಮ ಶಕ್ತಿಯಿಂದ ಎದುರಿಸುವುದೇ ಸತ್ಯಾಗ್ರಹ. ಆತ್ಮ ವಿಶ್ವಾಸವೇ ಸತ್ಯಾಗ್ರಹಿಗಳ ಶಕ್ತಿ. ಗುಂಡನ್ನು ಎದುರಿಸುವುದಾಗಲಿ, ಸೆರೆಮನೆಗೆ ಹೋಗುವುದಾಗಲಿ ಸತ್ಯಾಗ್ರಹಿಗಳಿಗೆ ಭೀತಿಯನ್ನುಂಟುಮಾಡಲಾರದು. ಏಕೆಂದರೆ, ಆತ್ಮ ಶಾಶ್ವತ, ದೇಹ ನಶ್ವರವೆಂದು ಅವರು ತಿಳಿಯುವುದರಿಂದ. ದೌಷ್ಟ್ಯವನ್ನು ಸದ್ಗುಣಗಳಿಂದಲೂ, ಕೋಪವನ್ನು ಪ್ರೀತಿಯಿಂದಲೂ, ಅಸತ್ಯವನ್ನು ಸತ್ಯದಿಂದಲೂ, ಹಿಂಸೆಯನ್ನು ಅಹಿಂಸೆಯಿಂದಲೂ ಗೆಲ್ಲಲು ಯತ್ನಿಸುವವರೇ ಸತ್ಯಾಗ್ರಹಿಗಳು. ಸರ್ಕಾರದ ಕಾನೂನು ಸಮಾಜದ ಹಿತಕ್ಕಾಗಿದ್ದರೆ ಅದನ್ನು ಸತ್ಯಾಗ್ರಹಿಗಳು ಮುರಿಯುವವರಲ್ಲ. ಅದು ಅನೀತಿಯು

ತವೂ ಅಯುಕ್ತವೂ ಆಗಿದ್ದರೆ, ಅದನ್ನು ಮುರಿಯುವ ಸ್ವಾತಂತ್ರ್ಯ ತ್ಯಾಗ್ರಹಿಗಳದು. ಸತ್ಯಾಗ್ರಹಿಗಳು ಒಟ್ಟಿಗೆ ಸೇರಿ, ಕ್ರಿಯಾಶೀಲ ಾದರೆ, ಅದು ಶಾಂತಿಸೇನೆಯಾಗುತ್ತದೆ. ಉಪವಾಸವನ್ನು ಹಿಂಸಾ ಅಸ್ತ್ರವನ್ನಾಗಿ ಸತ್ಯಾಗ್ರಹಿಗಳು ಬಳಸಬಹುದು. ದರೆ, ಆ ಅಸ್ತ್ರವನ್ನು ಆತ್ಮಶುದ್ಧಿಗಾಗಿ, ಅನೀತಿವಂತರ ಹೃದಯ ರಿವರ್ತನೆಗಾಗಿ, ಶಾಂತಿ ಸ್ಥಾಪನೆಗಾಗಿ ಬಳಸುವಾಗ ಎಚ್ಚರಿಕೆ ಹಿಸಬೇಕು; ಸ್ವಾರ್ಥ ಸಾಧನೆಗಾಗಿ ಎಂದೂ ಬಳಸಬಾರದು.

ಆತ್ಮಶಕ್ತಿಯುಳ್ಳವರೇ ಸತ್ಯಾಗ್ರಹಿಗಳು. ಹೇಡಿಗಳೆಂದಿಗೂ ತ್ಯಾಗ್ರಹಿಗಳಾಗಲಾರರು. ಮಹಿಳೆಯರಾಗಲಿ, ಪುರುಷರಾಗಲಿ, ಾತಿಮತಗಳ ಭೇದವಿಲ್ಲದೆ, ಆತ್ಮಶಕ್ತಿಯುಳ್ಳವರು ಯಾರು ೇಕಾದರೂ ಸತ್ಯಾಗ್ರಹಿಗಳಾಗಬಹುದು.

ರ್ಕ್ಸ್ ಮತ್ತು ಗಾಂಧೀವಾದ

ಕಾರ್ಲ್ ಮಾರ್ಕ್ಸ್‌ರಿಗೆ ಶೋಷಿತ ಬಡಜನರ ಮೇಲಿದ್ದ ಆಸಕ್ತಿ ುಚ್ಚತಕ್ಕದ್ದೆಂದು ಗಾಂಧೀಜಿ ನುಡಿದರು. ಅವರು ಮಾರ್ಕ್ಸ್‌ರ ಲ್ಲ ಕೃತಿಗಳನ್ನೂ ಅಧ್ಯಯನ ಮಾಡಿರದಿದ್ದರೂ ಮಾರ್ಕ್ಸ್‌ರ ತ್ತ್ವಗಳನ್ನು ಅರಿತಿದ್ದರು.

ಹಿಟ್ಲರ್, ಸೋವಿಯೆತ್ ದೇಶವನ್ನು ಆಕ್ರಮಿಸಲು ಯುದ್ಧ ಾಡಿದಾಗ, ಗಾಂಧೀಜಿಯವರ ಸಹಾನುಭೂತಿ ಸೋವಿಯೆತ್ ೇಶದ ಮೇಲೆಯೇ ಇತ್ತು. ಸೋವಿಯೆತ್ ಸಮಾಜವಾದಕ್ಕೂ ಮ್ಮ ದೃಷ್ಟಿಗೂ ಇದ್ದ ವ್ಯತ್ಯಾಸಗಳನ್ನು ಅವರು ಮನಗಂಡಿದ್ದರು. ೇವರ ವಿಚಾರವಾಗಿ ತಲೆಕೆಡಿಸಿಕೊಳ್ಳದೆ, ವೈಚಾರಿಕ ಭೌತವಾದ ನ್ನು ಸಮರ್ಥಿಸಿದವರು ಕಾರ್ಲ್ ಮಾರ್ಕ್ಸ್. ಪರಾತ್ಪರ ್ತಿಯೇ ದೇವರು. ಆ ಶಕ್ತಿಯನ್ನು ನೆಚ್ಚಿ, ಅಹಿಂಸೆಯ

ಮಾರ್ಗದಲ್ಲಿ, ಸರ್ವೋದಯವನ್ನು ಸಾಧಿಸಬೇಕೆಂದವರು ಗಾಂಧೀಜಿ. ದುಷ್ಟರನ್ನು ದ್ವೇಷಿಸಿ, ಅವರನ್ನು ನಾಶಮಾಡುವುದು ಕಮ್ಯುನಿಸ್ಟ್ ತತ್ತ್ವವಾದರೆ, ದುಷ್ಟರನ್ನು ಪ್ರೀತಿಸಿ, ಅಹಿಂಸೆಯಿಂದ ಅವರ ಹೃದಯವನ್ನು ಗೆಲ್ಲಬೇಕೆಂಬುದು ಗಾಂಧೀಜಿಯವರ ಗುರಿಯಾಗಿತ್ತು. ಗಾಂಧೀಜಿಯವರಿಗೆ ಗುರಿಯಷ್ಟೇ ಮಾರ್ಗವೂ ಮುಖ್ಯವಾಗಿತ್ತು.

ಸೋವಿಯೆತ್ ದೇಶ ಆದರ್ಶ ರಾಷ್ಟ್ರವಾಗಿ ಮುಂದುವರಿಯಬೇಕಾದರೆ, ಅದು ಆಧ್ಯಾತ್ಮಿಕವಾಗಿ ಮುಂದುವರಿಯಬೇಕೆಂದರು ಗಾಂಧೀಜಿ. ಅವರ ದೃಷ್ಟಿಯಲ್ಲಿ ಪ್ರಜಾಪ್ರಭುತ್ವವೇ ಆದರ್ಶ. ಹಿಂಸಾತ್ಮಕ ಕ್ರಾಂತಿಯಿಂದ ಒಳಿತನ್ನು ಸಾಧಿಸುವುದು ಗಾಂಧಿಯವರ ದೃಷ್ಟಿಯಲ್ಲಿ ಅಯುಕ್ತವಾಗಿತ್ತು. ಮಾರ್ಕ್ಸ್‌ವಾದಿಗಳಿಗೆ ಒಳಿತನ್ನು ಸಾಧಿಸಲು ಕ್ರಾಂತಿ ಯೋಗ್ಯವಾದ ಮಾರ್ಗವೇ. ಅಹಿಂಸಾತ್ಮಕ ವಿಧಾನದಿಂದ ಸಮಾಜದ ಉದ್ಧಾರವಾದರೆ, ಮಾರ್ಕ್ಸ್ ವಾದಕ್ಕೂ ತಮ್ಮ ದೃಷ್ಟಿಗೂ ವ್ಯತ್ಯಾಸವಿಲ್ಲವೆಂದರು ಗಾಂಧೀಜಿ.

ಮದ್ಯಪಾನ ನಿರೋಧ

ಮದ್ಯಪಾನದಿಂದಾಗುವ ಘೋರ ಪರಿಣಾಮವನ್ನು ಗಾಂಧೀಜಿಯವರು ಮನಗಂಡಿದ್ದರು. ಮದ್ಯಪಾನದ ಚಟಕ್ಕೆ ಸಿಕ್ಕಿದ ವ್ಯಕ್ತಿಗಳು ನಾಶವಾದುದನ್ನು ಅವರು ಕಂಡಿದ್ದರು. ಆದುದರಿಂದಲೆ ಅವರು ಮದ್ಯಪಾನ ನಿರೋಧವನ್ನು ಪ್ರಚಾರ ಮಾಡಿದ್ದು. ಸ್ವಾತಂತ್ರ್ಯ ಬಂದೊಡನೆ ಭಾರತದಲ್ಲಿ ಮದ್ಯಪಾನ ದೂರವಾಯಿತು. ಆದರೆ ಗಾಂಧೀಜಿ ಕಣ್ಮರೆಯಾದೊಡನೆ, ಸರ್ಕಾರವು ತನ್ನ ಉತ್ಪತ್ತಿಯನ್ನು ಹೆಚ್ಚಿಸಲು ಪಾನನಿರೋಧವನ್ನು

ದಿಗೊತ್ತಿದುದರಿಂದ ಜನರಲ್ಲಿ ಪಾನಪ್ರೀತಿ ಮೈದೋರಿದೆ. ರೈನ್ ಮಾರುವ ಅಂಗಡಿಗಳೂ ಹೆಂಡದ ಪಡಖಾನೆಗಳೂ ಈಗ ಎಲ್ಲೆಲ್ಲಿಯೂ ಮೆರೆಯುತ್ತಿವೆ.

ದೇಶದಲ್ಲಿ ಪಾನನಿರೋಧವಿದ್ದಾಗ ಕಾರ್ಮಿಕರ ಸಂಸಾರಗಳು ಸುಖವಾಗಿದ್ದವು. ಈಗ ಪಾನ ನಿರೋಧವಿಲ್ಲದಿರುವುದರಿಂದ ವಿದ್ಯಾರ್ಥಿಗಳೂ ಪಾನಪ್ರಿಯರಾಗುತ್ತಿದ್ದಾರೆ. ಒಟ್ಟಿನಲ್ಲಿ, ಇಂದು ಸಮಾಜದ ಅಧೋಗತಿಗೆ ಪಾನಪ್ರೀತಿಯು ತನ್ನ ಕಾಣಿಕೆ ಸಲ್ಲಿಸುತ್ತಿದೆ. ಇದನ್ನು ತಪ್ಪಿಸುವವರಾರು ?

ಸರ್ವೋದಯ ಮತ್ತು ಸಾಮಾಜಿಕ ಸಮಾನತೆ

ಪ್ರಪಂಚದ ಸರ್ವರೂ ಸುಖವಾಗಿರಬೇಕೆಂಬುದು ಗಾಂಧೀಜಿಯವರ ಆದರ್ಶವಾಗಿತ್ತು. ಜಾತಿಭೇದಗಳು ಭಾರತೀಯರ ಒಗ್ಗಟ್ಟನ್ನು ಮುರಿದು ಹಾಕಿದುದು ಅವರಿಗೆ ಚೆನ್ನಾಗಿ ತಿಳಿದಿತ್ತು. ವರ್ಣವ್ಯವಸ್ಥೆಯನ್ನು ಕುರಿತು ಅವರು ಹೇಳಿದ ನುಡಿಗಳು ಗಮನಾರ್ಹ. ಅವರ ವಿಚಾರಧಾರೆಯನ್ನು ಗಮನಿಸಬೇಕು:

"ನಾಲ್ಕು ವರ್ಣಗಳನ್ನು ವೇದಗಳಲ್ಲಿ ದೇಹದ ನಾಲ್ಕು ಅಂಗಗಳಿಗೆ ಹೋಲಿಸಲಾಗಿದೆ. ಇದಕ್ಕಿಂತ ಸುಂದರ ಉಪಮೆ ಬೇರೆ ಇಲ್ಲ. ಒಂದೇ ದೇಹದ ಅಂಗಗಳು ಅವು ಆಗಿದ್ದರೆ, ಒಂದು ಇನ್ನೊಂದಕ್ಕಿಂತ ಉಚ್ಚ ಅಥವಾ ನೀಚ ಹೇಗಾಗಬಹುದು ?"

"ಇಂದಿನ ಜಾತಿ ಪದ್ಧತಿ, ವರ್ಣಾಶ್ರಮಕ್ಕೇ ವಿರುದ್ಧವಾಗಿದೆ. ಇದನ್ನು ಎಷ್ಟು ಜಾಗ್ರತೆಯಾಗಿ ತೊಡೆದು ಹಾಕುತ್ತೇವೆಯೋ ಅಷ್ಟು ಉತ್ತಮ."

ಅಸ್ಪೃಶ್ಯತೆ ಹಿಂದೂಧರ್ಮಕ್ಕೇ ಮಹಾ ಕಳಂಕವೆಂದ ಗಾಂಧೀಜಿ, ಅದನ್ನು ಹೋಗಲಾಡಿಸಲು ಸರ್ವಪ್ರಯತ್ನ

ಮಾಡಿದರು. ಸಾಮಾಜಿಕ ಸಮಾನತೆ, ಸರ್ವೋದಯ—ಇವು ಗಳಿಗಾಗಿ, ಅವರು ಬದುಕಿರುವವರೆಗೂ ದುಡಿದರು.

ಸಾಮಾಜಿಕ ಸಪ್ತಪಾತಕಗಳು

ಸಾಮಾಜಿಕ ವಿಕಾಸವಾಗಬೇಕಾದರೆ, ಸಪ್ತಪಾತಕಗಳಿಂದ ಸಮಾಜ ದೂರವಾಗಬೇಕೆಂಬುದು ಗಾಂಧೀಜಿಯವರ ಸಂದೇಶ. ಆ ಸಪ್ತ ಪಾತಕಗಳಾವುವೆಂಬುದನ್ನು ನೋಡೋಣ :

೧. ತತ್ತ್ವರಹಿತ ರಾಜಕೀಯ

ರಾಜಕೀಯ ಕ್ಷೇತ್ರ, ಸ್ವಾರ್ಥಸಾಧನೆಗೆ ಭೂಮಿಕೆಯಾಗಬಾರದು. ನೈತಿಕ ಮೌಲ್ಯಗಳು ಹಾನಿಯಾದರೆ, ರಾಜಕೀಯ ಮೌಲ್ಯಗಳು ನಶಿಸಿ, ರಾಷ್ಟ್ರಕ್ಕೆ ವಿಪತ್ತು ಬರುತ್ತದೆ. ಯಾವ ಕೆಲಸಕ್ಕೆ ಹೋಗ ಬೇಕಾದರೂ ಯುಕ್ತ ಶಿಕ್ಷಣವಿರಬೇಕು. ಆದರೆ ರಾಜಕೀಯಕ್ಕೆ ಪ್ರವೇಶಿಸಲು ಯಾವ ಶಿಕ್ಷಣವೂ ಬೇಡವೆಂದರೆ ಅರ್ಥವೇನು? ಚುನಾವಣೆಯಲ್ಲಿ ಗೆಲ್ಲಲು ಯಾವ ಮಾರ್ಗವನ್ನಾದರೂ ಅನು ಸರಿಸಿದರೆ ಎಂಥ ವ್ಯಕ್ತಿಗಳು ರಾಜಕೀಯ ಸೂತ್ರಗಳನ್ನು ಹಿಡಿದಾರು? ಮತಗಳನ್ನು ಪಡೆಯಲು ಹಣವನ್ನೂ ಹೆಂಡವನ್ನೂ ಚೆಲ್ಲಿದರೆ ಅದರ ಪರಿಣಾಮವೇನು? ರಾಜಕೀಯ ಜೀವನ ಸ್ವಚ್ಛವಾಗಿದ್ದರೆ ರಾಜ್ಯವೂ ಕ್ಷೇಮವಾಗಿರುತ್ತದೆ. ಆದುದರಿಂದಲೆ, ತತ್ತ್ವಪೂರ್ಣ ರಾಜಕೀಯದ ಆದರ್ಶವನ್ನು ಗಾಂಧೀಜಿ ಜನರ ಮುಂದಿರಿಸಿದರು.

೨. ದುಡಿಮೆಯಿಲ್ಲದ ಸಂಪತ್ತು

ಸಂಪತ್ತಿನ ಗಳಿಕೆಯೇ ಸಮಾಜದ ಮುಂದಿನ ಏಕೈಕ ಗುರಿ ಯಾದರೆ, ಅದಕ್ಕಾಗಿ ಯಾವ ಅಪಮಾರ್ಗವನ್ನು ಹಿಡಿಯಲೂ

ಜನರು ಹೇಸುವುದಿಲ್ಲ. ರಾಷ್ಟ್ರಪ್ರೇಮ ಸಮಾಜದಿಂದ ಕಣ್ಮರೆ ಯಾಗಲು, ಮನುಷ್ಯನ ಕ್ಷುದ್ರ ಬುದ್ಧಿಯೇ ಕಾರಣ. ಪ್ರಾಮಾಣಿಕತೆ ಹಾಗೂ ನಿಷ್ಠೆ ಲೋಪವಾದರೆ, ದುಡಿಮೆ ಇಲ್ಲದೆ ಸುಖ ಪಡೆಯ ಬೇಕೆಂಬ ಅಭಿಲಾಷೆ ಮೂಡುತ್ತದೆ. ಆದರಿಂದ ವಂಚಕ ಬುದ್ಧಿ ಸ್ಫೈದೋರಿ ರಾಷ್ಟ್ರದ ಉತ್ಪತ್ತಿ ಕುಂಠಿತವಾಗುತ್ತದೆ. ಈ ಕಾರಣದಿಂದಲೆ ಗಾಂಧೀಜಿ ದುಡಿಮೆಯಿಂದಲೇ ಸಂಪತ್ತನ್ನು ಆರ್ಜಿಸಬೇಕೆಂದು ಹೇಳಿದುದು.

. ನೀತಿಹೀನ ವಾಣಿಜ್ಯ

ಆಹಾರ ಪದಾರ್ಥಗಳಲ್ಲಿ ಕಲಬೆರಕೆ, ತೂಕದಲ್ಲಿ ವಂಚನೆ—ಈ ನೀತಿಯ ವ್ಯವಹಾರ ಆರಂಭವಾದರೆ, ವರ್ತಕರು ಹಣ ಮಾಡ ಬಹುದು. ಆದರೆ ಬಳಕೆದಾರರ ಪಾಡೇನು? ಶೀಘ್ರವಾಗಿ ಲಾಭ ಸಂಪಾದನೆ ಮಾಡುವ ದುರಾಶೆಯಿಂದ ಜನತೆಯ ಆರೋಗ್ಯ ನಷ್ಟವಾಗುತ್ತದೆ. ಕೆಲವು ವೇಳೆ ವರ್ತಕರು ದಾಸ್ತಾನುಗಳನ್ನು ಬಚ್ಚಿಟ್ಟು, ಆಹಾರ ಪದಾರ್ಥಗಳ ಕೃತಕ ಅಭಾವವನ್ನು ಸೃಷ್ಟಿಸಿ, ವಸ್ತುಗಳನ್ನು ಒಂದಕ್ಕೆ ನಾಲ್ಕರಷ್ಟು ಬೆಲೆಗೆ ಮಾರುವ ಅನೀತಿ ಯುತ ಮಾರ್ಗವನ್ನು ಅನುಸರಿಸುತ್ತಾರೆ. ಆಗ ಬಳಕೆದಾರರಿಗೆ ಆಗುವ ತೊಂದರೆ ಅವರ್ಣನೀಯ. ವಾಣಿಜ್ಯ ಪ್ರಪಂಚದಲ್ಲಿ ನೈತಿಕ ಮೌಲ್ಯವಿದ್ದರೆ ಜನಜೀವನ ಸುಖವಾಗಿರಲು ಸಾಧ್ಯ. ಆದುದರಿಂದಲೆ ಗಾಂಧೀಜಿಯವರ ಎಚ್ಚರಿಕೆಯ ನುಡಿ.

. ಶೀಲವಿಲ್ಲದ ಶಿಕ್ಷಣ

ಬುದ್ಧಿಗೆ ಮಾತ್ರ ಶಿಕ್ಷಣ ದೊರಕಿದರೆ ಸಾಲದು. ವಿದ್ಯೆಯಿಂದ ಶೀಲ ನಿರ್ಮಾಣವಾಗಬೇಕು. ಹೇಗಾದರೂ ಪದವಿ ಪಡೆದು ಅಧಿಕಾರಕ್ಕೆ ಬಂದು ಹಣ ಮಾಡಿ ಸುಖವಾಗಿರಬೇಕೆಂಬ ಭಾವನೆ

ಶಿಕ್ಷಣದ ಗುರಿಯಾದರೆ, ರಾಷ್ಟ್ರದ ಕ್ಷೇಮ ಹೇಗೆ ಸಾಧ್ಯ? ಜ್ಞಾನಾರ್ಜನೆಗಾಗಿ ಬರುವ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾದರೆ, ವಿದ್ಯಾರ್ಥಿಗಳಲ್ಲಿ ಆದರ್ಶಗಳೇ ಲೋಪವಾದರೆ, ಎಂತಹ ರಾಷ್ಟ್ರ ನಿರ್ಮಾಣವಾದೀತು ?

ಜಾತಿಯ ಆಧಾರದ ಮೇಲೆ ಹುಟ್ಟಿಕೊಂಡ ವಿದ್ಯಾಸಂಸ್ಥೆಗಳು, ತಮ್ಮ ಜಾತಿಯ ವಿದ್ಯಾರ್ಥಿಗಳು ಹೆಚ್ಚಿನ ಅಂಕಗಳನ್ನು ಪಡೆದು ಮುಂದಕ್ಕೆ ಬರಲೆಂದು ಅಕ್ರಮ ರೀತಿಯಲ್ಲಿ ಪ್ರೋತ್ಸಾಹ ನೀಡುವ ತಂತ್ರವನ್ನು ಕಂಡುಹಿಡಿದರೆ, ರಾಷ್ಟ್ರದ ನೈತಿಕಶಕ್ತಿಯು ಪತನವಾಗುತ್ತದೆ. ವಿದ್ಯಾಸಂಸ್ಥೆಗಳೇ ಸ್ವಾರ್ಥದಲ್ಲಿ ಮುಳುಗಿದರೆ, ಸಮಾಜದ ರೋಗರುಜಿನಗಳನ್ನು ಪರಿಹರಿಸುವವರು ಯಾರು? ಅಧ್ಯಾಪಕರು ಶೀಲವಂತರಾಗಿದ್ದರೆ, ವಿದ್ಯಾಸಂಸ್ಥೆಗಳು ಆದರ್ಶವಾಗಿದ್ದರೆ ಮಾತ್ರ ಶೀಲವಂತ ವಿದ್ಯಾರ್ಥಿಗಳನ್ನು ರೂಪಿಸುವುದು ಸಾಧ್ಯ. ಆದುದರಿಂದಲೆ ಶೀಲಕ್ಕೆ ಮಹತ್ವಪೂರ್ಣ ಸ್ಥಾನ ನೀಡಿದರು ಗಾಂಧೀಜಿ.

೫. ಆತ್ಮಸಾಕ್ಷಿರಹಿತ ಭೋಗ

ಧರ್ಮಮಾರ್ಗದಲ್ಲಿ ನಡೆದು ಅರ್ಥಕಾಮಗಳನ್ನು ಪಡೆಯಬೇಕೆಂಬುದು ಪ್ರಾಚೀನ ಋಷಿವಾಣಿ. ಧರ್ಮದ ಮೂಲವಾದ ಆತ್ಮಸಾಕ್ಷಿಯೇ ಮಾಯವಾದರೆ, ನೈತಿಕ ಪತನವಾಗುತ್ತದೆ. ವೃತ್ತಾಂತ ಪತ್ರಿಕೆಗಳಲ್ಲಿ, ಚಲನಚಿತ್ರ ಜಾಹೀರಾತುಗಳಲ್ಲಿ, ಮಾಸಿಕ ಹಾಗೂ ವಾರಪತ್ರಿಕೆಗಳಲ್ಲಿ ಅದೆಷ್ಟು ಅರೆನಗ್ನ ತರುಣಿಯರ ಚಿತ್ರಗಳು ಪ್ರಕಟವಾಗುತ್ತಿವೆ! ನಮ್ಮ ಅಕ್ಕಂದಿರ, ತಂಗಿಯರ ಚಿತ್ರಗಳನ್ನು ಕಂಡು ನಮ್ಮ ಯುವ ಜನರು ಉದ್ರಿಕ್ತರಾಗುವ ಪರಿಸ್ಥಿತಿ ಬಂದಿದೆ. ಅಶ್ಲೀಲ ಕಾದಂಬರಿಗಳೂ ನಮ್ಮ ಯುವ

ಜನರನ್ನು ಅಧೋಗತಿಗೆ ತಳ್ಳುತ್ತಿದೆ. ಹಣ ಸಂಪಾದನೆಯ ದೃಷ್ಟಿಯಿಂದ ಚಲನಚಿತ್ರ ನಿರ್ಮಾಪಕರು ಅರೆನಗ್ನ ಹೆಣ್ಣುಗಳ ಚಿತ್ರಗಳನ್ನು ಭಾವೋದ್ರೇಕಗೊಳ್ಳುವ ಸನ್ನಿವೇಶಗಳನ್ನೂ ಸೃಷ್ಟಿಸುತ್ತಿದ್ದಾರೆ. ಕಲೆ ಜೀವನವನ್ನು ರೂಪಿಸುವ ಬದಲು ವಿಕೃತಗೊಳಿಸಿದರೆ, ಅದರಿಂದಾಗುವ ಹಾನಿ ಭಯಂಕರ.

ಅತೃಪ್ತ ಕಾಮಿಗಳು, ನಿರಪರಾಧಿಗಳಾದ ಮಹಿಳೆಯರ ಮೇಲೆ ಮಾಡುತ್ತಿರುವ ಅತ್ಯಾಚಾರ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವುದನ್ನು ನೋಡಿದಾಗ, ಜನತೆಯ ವಿಕೃತ ಭೋಗಾಭಿಲಾಷೆಯ ತೃಷ್ಣೆ ತಿಳಿಯುತ್ತದೆ. ಇಂತಹ ಅನೈತಿಕ ದೃಷ್ಟಿಯಿಂದ ರಾಷ್ಟ್ರದ ಭದ್ರತೆಗೇ ಅಪಾಯವಾಗುತ್ತದೆ. ಈ ಕಾರಣದಿಂದಲೇ ಭೋಗಕ್ಕೆ ಆತ್ಮಸಾಕ್ಷಿಯೇ ಮಾರ್ಗವೆಂದರು ಗಾಂಧೀಜಿ.

೬. ಮಾನವತಾ ಶೂನ್ಯ ವಿಜ್ಞಾನ

ಧರ್ಮ, ವಿಜ್ಞಾನ ಮತ್ತು ಸಮಾಜ—ಇವು ಮೂರಕ್ಕೂ ನಿಕಟವಾದ ಸಂಬಂಧವಿದೆ. ಮಾನವೀಯತೆಯ ಅಡಿಪಾಯದ ಮೇಲೆಯೇ ವಿಜ್ಞಾನದ ಸೌಧ ನಿರ್ಮಿತವಾಗಬೇಕು. ಇಂದು ವಿಜ್ಞಾನದ ನೆರವಿನಿಂದ ನಿರ್ಮಾಣವಾಗುತ್ತಿರುವ ಮಾರಕಾಸ್ತ್ರಗಳನ್ನು ನೋಡಿದಾಗ ಮಾನವಕೋಟಿಯ ಕ್ಷೇಮಕ್ಕೆ ಅಪಾಯ ಬರುವಂತೆ ಕಾಣುತ್ತಿದೆ. ಬುದ್ಧಿಗೆಟ್ಟ ರಾಜಕೀಯ ಧುರೀಣರು ಮಾರಕಾಸ್ತ್ರಗಳನ್ನು ಉಪಯೋಗಿಸಿದರೆ, ಪ್ರಪಂಚವೇ ನಾಶವಾಗುತ್ತದೆ. ಈ ಕಾರಣದಿಂದಲೇ ಗಾಂಧೀಜಿ ವೈಜ್ಞಾನಿಕ ಸಂಶೋಧನೆಗಳು ಮಾನವರ ಕ್ಷೇಮಕ್ಕಾಗಿಯೇ ಸಮರ್ಪಿತವಾಗಬೇಕೆಂದು ಹೇಳಿದುದು.

೭. ತ್ಯಾಗವಿಲ್ಲದ ಪೂಜೆ

ಆಡಂಬರದ ಪೂಜೆಗಾಗಿ ಕೋಟ್ಯಾಂತರ ರೂಪಾಯಿಗಳು ವರ್ಷ ವರ್ಷ ವೆಚ್ಚವಾಗುತ್ತಿದೆ. ದೇವರ ಹೆಸರಿನಲ್ಲಿ ಜನರನ್ನು ಶೋಷಣೆ ಮಾಡುವ ವಿಚಿತ್ರ ರೀತಿಯ ವ್ಯಕ್ತಿಗಳು ಜನರನ್ನು ಅಂಧಕಾರದಲ್ಲಿ ನಡೆಯುವಂತೆ ಮಾಡಿ, ತಮ್ಮ ಪ್ರತಿಷ್ಠೆಯನ್ನು ಬೆಳೆಸುತ್ತಿರುವುದು ನಿಜವಾಗಿಯೂ ಶೋಚನೀಯವಾದ ಸಂಗತಿ. ದೇವರ ಪೂಜೆಯ ಹೆಸರಿನಲ್ಲಿ ಕುರುಡು ನಂಬಿಕೆಗಳನ್ನು ಮೂಡಿಸಿ, ಜನರ ನಂಬಿಕೆಯನ್ನು ದುರುಪಯೋಗಪಡಿಸುವುದು ಪೂಜೆಯಲ್ಲ. ತ್ಯಾಗವೇ ನಿಜವಾದ ದೇವರ ಪೂಜೆಯೆಂಬುದು ಗಾಂಧೀಜಿಯವರ ನಂಬಿಕೆಯಾಗಿತ್ತು. ಕೋಟ್ಯಾಂತರ ದೀನರೂ ದಲಿತರೂ ದರಿದ್ರರೂ ಆದ ಜನರ ಸೇವೆಯೂ, ಅವರಿಗಾಗಿ ಮಾಡುವ ತ್ಯಾಗವೂ ನಿಜವಾದ ಪೂಜೆಯೆಂದು ಅವರ ಭಾವನೆಯಾಗಿತ್ತು.

೭. ಗಾಂಧೀ ಸೂಕ್ತಿಗಳು

ನಿರ್ಭೀತಿಯೇ ಆಧ್ಯಾತ್ಮಿಕ ಜೀವನದ ಪ್ರಥಮ ಆವಶ್ಯಕತೆ. ಹೇಡಿಗಳೆಂದಿಗೂ ನೀತಿವಂತರಾಗಲಾರರು.

* * *

ಸರ್ವವ್ಯಾಪಿ ಅವರ್ಣನೀಯ ಶಕ್ತಿಯೊಂದಿದೆ. ನಾನು ಅದನ್ನು ನೋಡದಿದ್ದರೂ, ಅದರ ಸ್ಪರ್ಶ ನನಗಾಗಿದೆ. ತರ್ಕ ಹಾಗೂ ಪ್ರಮಾಣಗಳನ್ನು ದಾಟಿ, ಕಣ್ಣಿಗೆ ಕಾಣದಿದ್ದರೂ ಅನುಭವಕ್ಕೆ ಬರುವ ಆ ಶಕ್ತಿ ಇಂದ್ರಿಯಗೋಚರವಾದ ಎಲ್ಲಕ್ಕಿಂತಲೂ ಬೇರೆ. ಅದು ಇಂದ್ರಿಯಾತೀತ.

* * *

ಸತ್ಯವೆಂಬುದು ವಿಶಾಲ ವೃಕ್ಷ. ಅದನ್ನು ಸಂರಕ್ಷಿಸಿದರೆ,

ಹೆಚ್ಚು ಫಲಗಳನ್ನು ನೀಡುತ್ತದೆ. ಸತ್ಯದ ಗಣಿಯಲ್ಲಿ ಆಳಕ್ಕೆ ಇಳಿದಷ್ಟೂ ಅಮೂಲ್ಯ ರತ್ನಗಳು ದೊರಕುತ್ತವೆ. ಸೇವಾವಕಾಶಗಳೇ ಆ ರತ್ನಗಳು, ಅವೇ ಶ್ರೀಮಂತಿಕೆ.

* * *

ಸತ್ಯ, ಅಸತ್ಯವನ್ನು ದೂರ ಮಾಡುತ್ತದೆ. ಪ್ರೀತಿ ಕೋಪವನ್ನು ದೂರ ಮಾಡುತ್ತದೆ, ತಪಸ್ಸು ಹಿಂಸೆಯನ್ನು ದೂರ ಮಾಡುತ್ತದೆ. ಈ ಶಾಸನ ಸತ್ಪುರುಷರಿಗೆ ಮಾತ್ರವಲ್ಲ. ಎಲ್ಲರಿಗೂ ಅನ್ವಯಿಸುವ ನಿಯಮ. ಈ ಶಾಸನವನ್ನು ಕೆಲವರೇ ಅನುಸರಿಸಬಲ್ಲರು, ನಿಜ. ಆದರೆ, ಇಂಥವರೇ ಈ ಭೂಮಿಯ ತಿರುಳು.

* * *

ದೇವರು ಒಂದು ವ್ಯಕ್ತಿಯಲ್ಲ. ಆತನು ಮನುಷ್ಯ ದೇಹವನ್ನು ಧರಿಸಿ, ಮತ್ತೆ ಮತ್ತೆ ಭೂಮಿಯಲ್ಲಿ ಅವತರಿಸುತ್ತಾನೆಂದು ಹೇಳುವುದು ಪೂರ್ಣ ಸತ್ಯವಲ್ಲ. ಆದರೆ ಅದರಲ್ಲೂ ಸತ್ಯಾಂಶವಿದೆ. ಅಂಥ ವ್ಯಕ್ತಿ ದೇವರ ಸ್ವರೂಪಕ್ಕೆ ಹತ್ತಿರವಿದ್ದಾನೆಂದು ತಿಳಿಯಬೇಕು. ದೇವರು ಸರ್ವವ್ಯಾಪಿ. ಅವನು ಎಲ್ಲರ ಹೃದಯದಲ್ಲೂ ನೆಲಸಿದ್ದಾನೆ. ಈ ದೃಷ್ಟಿಯಿಂದ ಎಲ್ಲರೂ ಅವನ ಅವತಾರವೆನ್ನಬಹುದು,

* * *

ಆಲೋಚನೆಯಲ್ಲಿ, ಆಡುವ ಮಾತಿನಲ್ಲಿ, ಮಾಡುವ ಕೆಲಸದಲ್ಲಿ ಸತ್ಯವಿರಬೇಕು.

* * *

ಸತ್ಯ ಮತ್ತು ಅಹಿಂಸೆ ಪರ್ವತಗಳಷ್ಟು ಅರ್ವಾಚೀನವು. ಇವೆರಡರಲ್ಲಿ ಸಾಧ್ಯವಾದಷ್ಟು ಪ್ರಯೋಗಗಳನ್ನು ಮಾಡಿರುವೆ. ಹೀಗೆ ಮಾಡುವಾಗ ಕೆಲವು ವೇಳೆ ತಪ್ಪು ಮಾಡಿದ್ದುಂಟು. ತಪ್ಪು

ಗಳಿಂದ ಪಾಠ ಕಲಿತಿರುವೆ. ಜೀವನ ಹಾಗೂ ಅದರ ಸಮಸ್ಯೆಗಳು ನನ್ನ ಪಾಲಿಗೆ ಸತ್ಯ ಮತ್ತು ಅಹಿಂಸೆಗಳ ಆಚರಣೆಯಲ್ಲಿ ನಡೆಸಿದ ಪ್ರಯೋಗಗಳು.

* * *

ತಪ್ಪು ಮಾಡದವರು ಯಾರಿದ್ದಾರೆ ? ದಿವ್ಯಮಾನವರೂ ಪೂರ್ಣ ನಿರ್ದೋಷಿಗಳಲ್ಲ, ದೋಷಗಳನ್ನು ಅರಿತು, ಅವುಗಳಿಂದ ದೂರವಿರಲು ಮಾಡುವ ಸಾಧನಗಳಿಂದಲೇ ದೇವಮಾನವರಾಗುವುದು. ಅವರು ತಮ್ಮ ದೋಷಗಳನ್ನು ಬಚ್ಚಿಡುವುದಿಲ್ಲ. ತಮ್ಮ ದೋಷಗಳನ್ನು ತಿದ್ದಿಕೊಳ್ಳಲು ಅವರು ಸದಾ ಸಿದ್ಧ.

* * *

ಶೀಲವಿಲ್ಲದ ಜ್ಞಾನ ಕೇಡಿಗೆ ನೆರವಾಗುವ ಶಕ್ತಿ. ಇದನ್ನು ಪ್ರಪಂಚದ ಮೇಧಾವಿಗಳೆಂದು ಭಾವಿಸಿದ ಕಳ್ಳರ ಮತ್ತು ಸಭ್ಯರೆನಿಸಿಕೊಂಡ ದುಷ್ಟರ ಕಾರ್ಯಗಳಲ್ಲಿ ಕಾಣಬಹುದು.

* * *

ಮಹಿಳೆಯರನ್ನು ಅಬಲೆಯೆಂದು ಕರೆಯುವುದು ಸೂಕ್ತವಲ್ಲ. ಹಾಗೆ ಕರೆಯುವುದು ಮಹಿಳೆಯರಿಗೆ ಅಪಚಾರವೆಸಗಿದಂತೆ. ಬಲ ಎಂದರೆ ಪಶುಬಲವಾದರೆ, ಮಹಿಳೆಯರು ಪುರುಷರಿಗಿಂತ ದುರ್ಬಲರು. ಆದರೆ ಬಲವನ್ನು ನೈತಿಕಬಲವೆಂದು ಅರ್ಥಮಾಡಿಕೊಂಡರೆ, ಮಹಿಳೆಯರು ಪುರುಷರಿಗಿಂತ ಉತ್ತಮರು.

* * *

ಮಾನವ ಸೇವೆಯ ಮೂಲಕ ದೇವರನ್ನು ಕಾಣಲು ನಾನು ಯತ್ನಿಸುತ್ತಿದ್ದೇನೆ. ಏಕೆಂದರೆ, ದೇವರು ಸ್ವರ್ಗದಲ್ಲಾಗಲಿ ಪಾತಾಳದಲ್ಲಾಗಲಿ ಇಲ್ಲ. ಪ್ರತಿಯೊಬ್ಬರಲ್ಲಿಯೂ ಅವನಿದ್ದಾನೆ ಎಂಬುದನ್ನು ನಾನು ಬಲ್ಲೆ.

* * *

ಮದ್ಯಪಾನದ ಚಟಕ್ಕೆ ಸಿಕ್ಕಿದ ಚಕ್ರಾಧಿಪತ್ಯಗಳು ನಾಶವಾದುದಕ್ಕೆ ಇತಿಹಾಸವೇ ಸಾಕ್ಷಿ. ಭಾರತದಲ್ಲಿ ಶ್ರೀಕೃಷ್ಣನ ಬಂಧುಗಳೇ ಈ ದುರಭ್ಯಾಸಕ್ಕೆ ಸಿಕ್ಕಿ ಹೇಳಹೆಸರಿಲ್ಲದಂತಾದರು. ರೋಮನ್ ಚಕ್ರಾಧಿಪತ್ಯದ ಪತನಕ್ಕೆ ಈ ಭಯಂಕರ ದುಷ್ಟ ಅಭ್ಯಾಸವೂ ಕಾರಣವಾಯಿತು. ಸಭ್ಯರಾಗಿ ಬದುಕಲು ಈ ದುರಭ್ಯಾಸದಿಂದ ದೂರವಿರಬೇಕು.

* * *

ನೀವು ಮಾಡಬೇಕಾದ ಕೆಲಸ, ಎಷ್ಟೇ ಚಿಕ್ಕದಾದರೂ ಅದನ್ನು ಎಷ್ಟು ಚೆನ್ನಾಗಿ ಮಾಡಲು ಸಾಧ್ಯವೋ ಅಷ್ಟು ಚೆನ್ನಾಗಿ ಮಾಡಬೇಕು. ಅತ್ಯಂತ ಮುಖ್ಯವೆಂದು ಭಾವಿಸುವ ಕೆಲಸಕ್ಕೆ ಕೊಡುವ ಗಮನ ಮತ್ತು ಎಚ್ಚರಿಕೆಗಳನ್ನು ಚಿಕ್ಕ ಕೆಲಸಕ್ಕೂ ಕೊಡಬೇಕು. ನಿಮ್ಮ ಯೋಗ್ಯತೆಯು ನಿರ್ಣಯವಾಗುವುದು ಅಂಥ ಚಿಕ್ಕ ಕಾರ್ಯಗಳಿಂದ.

* * *

ನನ್ನ ಮನೆಯ ಸುತ್ತಲೂ ಗೋಡೆಯನ್ನು ನಿರ್ಮಿಸಿ, ಕಿಟಕಿಗಳನ್ನೆಲ್ಲ ಮುಚ್ಚಿರುವುದನ್ನು ನಾನು ಅಪೇಕ್ಷಿಸುವುದಿಲ್ಲ. ಪ್ರಪಂಚದ ಎಲ್ಲ ಸಂಸ್ಕೃತಿಗಳೂ ನನ್ನ ಮನೆಯಲ್ಲಿ ಎಷ್ಟು ಸ್ವತಂತ್ರವಾಗಿ ಸಾಧ್ಯವೋ ಅಷ್ಟು ಸ್ವತಂತ್ರವಾಗಿ ವ್ಯವಹರಿಸಬೇಕು. ಆದರೆ, ಇತರ ಸಂಸ್ಕೃತಿಗಳು, ನನ್ನ ಸಂಸ್ಕೃತಿಯ ಬೇರುಗಳಿಂದ ನನ್ನನ್ನು ಕಿತ್ತೆಸೆಯುವುದನ್ನು ವಿರೋಧಿಸುತ್ತೇನೆ.

* * *

ಪ್ರೀತಿ ಇರುವಲ್ಲಿ ದೇವರು ಇರುತ್ತಾನೆ.

* * *

೮. ಉಪಸಂಹಾರ

ಗಾಂಧೀಜಿ, ದರಿದ್ರ ಭಾರತೀಯರ ಪ್ರತಿನಿಧಿಯಾಗಿ ನಡೆಸಿದ್ದು ಸರಳ ಜೀವನ. ರೈಲಿನಲ್ಲಿ ಅವರು ಪ್ರಯಾಣ ಮಾಡಿದ್ದು ಮೂರನೆಯ ದರ್ಜೆಯಲ್ಲಿ. ಹಲವೆಡೆ ಅವರು ವಾಸಿಸಿದ್ದು ಹರಿಜನರ ವಸತಿಯ ಮಧ್ಯೆ. ಲಂಡನ್ನಿನಲ್ಲಿ ನಡೆದ ದುಂಡು ಮೇಜಿನ ಪರಿಷತ್ತಿನಲ್ಲಿ ಭಾಗವಹಿಸಲು ಹೋದಾಗಲೂ, ಅವರು ವಾಸಿಸಿದ್ದು ಕಾರ್ಮಿಕರ ವಸತಿಯ ನಡುವೆ.

ಪಾಕಿಸ್ತಾನದ ಪೈಶಾಚಿಕ ಕೃತ್ಯಗಳಿಗೆ ಬಲಿಯಾಗಿ ತಮ್ಮ ಸರ್ವಸ್ವವನ್ನೂ ಕಳೆದುಕೊಂಡು ಭಾರತಕ್ಕೆ ನಿರ್ಗತಿಕರಾಗಿ ಬಂದ ಲಕ್ಷಾಂತರ ಸಿಖ್ಖರೂ ಹಿಂದೂಗಳೂ ದೆಹಲಿಗೆ ಓಡಿಬಂದರು. ಅವರೆಲ್ಲರಿಗೂ ಮುಸ್ಲಿಮರ ಮೇಲೆ ಕೋಪವಿತ್ತು. ಮುಸ್ಲಿಮರನ್ನು ನಾಶ ಮಾಡಲು ಅವರು ಯೋಚಿಸಿದಾಗ, ಗಾಂಧೀಜಿಯವರು, "ಭಾರತದ ನಿರಪರಾಧಿ ಮುಸ್ಲಿಮರನ್ನು ಕೊಂದು ಏನು ಪ್ರಯೋಜನ? ನೀವು ಕೊಲೆ ಮಾಡಲು ಇಚ್ಛಿಸಿದರೆ, ನಿಮ್ಮ ಬಂಧುಬಳಗ, ಆಸ್ತಿಪಾಸ್ತಿಗಳನ್ನು ನಾಶ ಮಾಡಿದ ಪಾಕಿಸ್ತಾನದ ಕೊಲೆಪಾತಕರ ಮೇಲೆ ಸೇಡು ತೀರಿಸಿಕೊಳ್ಳಿ" ಎಂದು ಹೇಳಿ ವಿವೇಕ ಮೂಡಿಸಿದರು. ದೆಹಲಿಯಲ್ಲಿ ಹಿಂಸಾಚಾರ ನಿಂತಿತು. ಅಂತಹ ಪ್ರಭಾವ ಅವರದು.

ಗೋಡ್ಸೆ, ಗಾಂಧೀಜಿಯವರ ಶರೀರವನ್ನು ಕೊಂದಿರಬಹುದು. ಗಾಂಧೀಜಿಯವರು ಯಾವ ಉದ್ದೇಶಗಳಿಗಾಗಿ ಬದುಕಿದರೋ ಆ ಮೌಲ್ಯಗಳಿಗೆ ಸಾವಿಲ್ಲ. ಅವರ ಪ್ರೀತಿ ವಿಶ್ವವ್ಯಾಪಕ. ಅವರನ್ನು ಕುರಿತು, ವಿಶ್ವವಿಖ್ಯಾತ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೀನರು, "ಇಂಥವರೊಬ್ಬರು ಈ ಭೂಮಿಯಲ್ಲಿ ರಕ್ತಮಾಂಸ

ಗಳಿಂದ ಕೂಡಿ, ಮಾನವರೂಪದಲ್ಲಿ ಬದುಕಿದ್ದರೆ ?—ಎಂದು ಮುಂದಿನ ಪೀಳಿಗೆಯುವರು ಸಂದೇಹಪಡಬಹುದು !" ಎಂದರು.

ಗಾಂಧೀಜಿಯುವರ ಕಾರ್ಯವ್ಯಾಪ್ತಿ ವಿಶಾಲ. ಅದರ ನಡುವೆ, ಆಗೊಮ್ಮೆ ಈಗೊಮ್ಮೆ ತಾವೂ ನಕ್ಕು ಇತರರನ್ನೂ ನಗಿಸಿದ ಅವರ ಮನೋಧರ್ಮದಲ್ಲಿ ನಿಸ್ಸಂಗತೆ ಇತ್ತು. "ನನ್ನ ಜೀವನದಲ್ಲಿ ಹಾಸ್ಯ ಮತ್ತು ವಿನೋದಗಳಿಲ್ಲದಿದ್ದರೆ, ನಾನು ಎಂದೋ ಆತ್ಮಹತ್ಯೆ ಮಾಡಿಕೊಳ್ಳಬೇಕಾಗಿತ್ತು !" ಎಂದು ನುಡಿದರು. ಅಂತಹ ನಿರ್ಮಲ ಸ್ವಭಾವ ಅವರದು.

ಗಾಂಧೀಜಿ ತಮ್ಮನ್ನು ಮಹಾತ್ಮಾ ಎಂದು ಕರೆಸಿಕೊಳ್ಳಲು ಇಷ್ಟಪಡಲಿಲ್ಲ. ಸತ್ಯ ಅಹಿಂಸೆಗಳ ಸಾಧಕ ತಾವೆಂದು ನುಡಿದ ವಿನಯಶೀಲರವರು. ತಾವು ಪೂರ್ಣರಲ್ಲ, ಪೂರ್ಣತೆಯತ್ತ ಸಾಗುವ ಯಾತ್ರಿಯೆಂಬ ನಮ್ರತೆ ಅವರಲ್ಲಿತ್ತು. ಅವರ ಜೀವನ ವನ್ನೂ ಅವರ ಕೃತಿಗಳನ್ನೂ ಓದಿ, ಅವುಗಳ ಸಾರವನ್ನು ಜೀವನ ದಲ್ಲಿ ಅನುಷ್ಠಾನಕ್ಕೆ ತರಲು ಯತ್ನಿಸಿದರೆ ಪ್ರಪಂಚಕ್ಕೆ ಕ್ಷೇಮ.

ಕೆ.ಸಂ. ೨೭೪೩೭—ಎಂಯುಪಿಎಂ—೫,೦೦೦ ಪ್ರತಿಗಳು—೨೦-೫-೮೭

ಕೆಲವು ಸಾಹಿತ್ಯ ಕೃತಿಗಳು

ಬೆಲೆ : ೨೫ ಪೈಸೆಗಳು

೧. ಕುಮಾರವ್ಯಾಸ—ಎಸ್. ವಿ. ರಂಗಣ್ಣ
೨. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್
೩. ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ
೪. ಪಂಪ—ತೀ. ನಂ. ಶ್ರೀಕಂಠಯ್ಯ
೫. ಕರ್ಣಾಟಕ ಕಾದಂಬರಿ—ವಿ. ಸೀತಾರಾಮಯ್ಯ
೬. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್
೭. ಭಾಸ—ಡಾ. ಎಚ್. ಎಲ್. ಹರಿಯಪ್ಪ
೮. ಸರ್ವಜ್ಞಕವಿ—ಎ. ಆರ್. ಕೃಷ್ಣಶಾಸ್ತ್ರೀ
೯. ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜುನಾಥ್
೧೦. ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ
೧೧. ಕುಮಾರವ್ಯಾಸ ವಾಣಿ—ಎಸ್. ವಿ. ರಂಗಣ್ಣ
೧೨. ನಯಸೇನ—ಜಿ. ವೆಂಕಟಸುಬ್ಬಯ್ಯ
೧೩. ತೆಲುಗು ಚಾಟುಪದ್ಯಗಳು—ಕೆ. ವೆಂಕಟರಾಮಪ್ಪ
೧೪. ಲಕ್ಷ್ಮೀಶ—ಎನ್. ಅನಂತರಂಗಾಚಾರ್
೧೫. ಮುದ್ದಣ—ತ. ಸು. ಶಾಮರಾವ್
೧೬. ಜನಪದ ಮುಕ್ತಕಗಳು—ಎಚ್. ಎಂ. ಶಂಕರನಾರಾಯಣರಾವ್
೧೭. ಭಾಮಗೀತೆ—ಎಸ್. ವಿ. ಪರಮೇಶ್ವರಭಟ್ಟ
೧೮. ಮಹಾಭಾರತ—ಡಾ. ಕೆ. ಕೃಷ್ಣಮೂರ್ತಿ
೧೯. ನೇಮಿಚಂದ್ರ—ಎನ್. ಅನಂತರಂಗಾಚಾರ್
೨೦. ಶ್ರೀನಾಥ—ಕೆ. ವೆಂಕಟರಾಮಪ್ಪ
೨೧. ಷಡಕ್ಷರದೇವ—ದೇ. ಜವರೇಗೌಡ
೨೨. ಚಿತ್ರಾಂಗದಾ—ಉ. ಕಾ. ಸುಬ್ಬರಾಯಾಚಾರ್
೨೩. ಸಂಚಿಯ ಹೊನ್ನಮ್ಮ—ಎಚ್. ಎಂ. ಶಂಕರನಾರಾಯಣರಾವ್
೨೪. ವಾಲ್ಮೀಕಿ ರಾಮಾಯಣ—ಉ. ಕಾ. ಸುಬ್ಬರಾಯಾಚಾರ್
೨೫. ಮಹಾಕವಿ ಬಾಣ—ಟಿ. ಎಸ್. ಕೃಷ್ಣಮೂರ್ತಿ
೨೬. ತುಳಸೀದಾಸ—ಡಾ. ಹಿರಣ್ಮಯ

೨೭. ವೇಮನ—ಕೆ. ವೆಂಕಟರಾಮಪ್ಪ
೨೮. ಕನ್ನಡದಲ್ಲಿ ಅನುಭಾವ ಸಾಹಿತ್ಯ—ಡಾ. ಎಚ್. ತಿಪ್ಪೇರುದ್ರಸ್ವಾಮಿ
೨೯. ಅಲ್ಲಮಪ್ರಭು—ಡಾ. ಟಿ. ಜಿ. ಸಿದ್ದಪ್ಪಾರಾಧ್ಯ
೩೦. ಕಾಳಿದಾಸನ ನಾಟಕಗಳು—ಡಾ. ಕೆ. ಕೃಷ್ಣಮೂರ್ತಿ
೩೧. ಅಣ್ಣನ ಆದರ್ಶ—ಡಾ. ಟಿ. ಜಿ. ಸಿದ್ದಪ್ಪಾರಾಧ್ಯ
೩೨. ಹೊಸಗನ್ನಡ ಭಾವಗೀತೆಗಳಲ್ಲಿ ಜೀವನ ವಿಕಾಸ—ದೇವಂಗಿ ಟಿ. ಚಂದ್ರಶೇಖರ
೩೩. ಸೂರದಾಸ—ಎಂ. ಎಸ್. ಕೃಷ್ಣಮೂರ್ತಿ
೩೪. ಜನ್ನ—ಡಾ. ಸಿ. ಪಿ. ಕೃಷ್ಣಕುಮಾರ್
೩೫. ರತ್ನಾಕರ ಮಹಾಕವಿ—ಜಿ. ಬ್ರಹ್ಮಪ್ಪ
೩೬. ಮಾಘಕವಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೩೭. ನಿಜಗುಣಶಿವಯೋಗಿ—ಎಚ್. ಗಂಗಾಧರನ್
೩೮. ಮುದ್ರಾರಾಕ್ಷಸ—ಡಾ. ಎನ್. ಎಸ್. ಅನಂತರಂಗಾಚಾರ್
೩೯. ರಾಘವಾಂಕ—ರಾಮೇಗೌಡ
೪೦. ಮೂರನೆಯ ಮಂಗರಸ ಕವಿ—ಹಂಪ ನಾಗರಾಜಯ್ಯ
೪೧. ನಾಗಚಂದ್ರ—ಡಾ. ಸಿ. ಪಿ. ಕೃಷ್ಣಕುಮಾರ್
೪೨. ವಡ್ಡಾರಾಧನೆ—ಹಂಪ ನಾಗರಾಜಯ್ಯ
೪೩. ಮಹಾಕವಿ ಭಾರವಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೪೪. ಕವಿ ಮುರಾರಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೪೫. ಚನ್ನಬಸವಣ್ಣ—ಓ. ಎನ್. ಲಿಂಗಣ್ಣಯ್ಯ
೪೬. ಕವಿ ಶ್ರೀ ಹರ್ಷ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೪೭. ಕಬೀರದಾಸ—ಡಾ. ಹಿರಣ್ಮಯ
೪೮. ವಿದ್ಯಾಪತಿ—ಎಂ. ಎಸ್. ಕೃಷ್ಣಮೂರ್ತಿ
೪೯. ಕವಿ ಭಟ್ಟನಾರಾಯಣ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೫೦. ಕಾವ್ಯದಲ್ಲಿ ಧ್ವನಿ—ಗುರುಪಾದ ಕೆ. ಹೆಗಡೆ
೫೧. ಪೊನ್ನ—ಎನ್. ಅನಂತರಂಗಾಚಾರ್
೫೨. ಎಡೆಯೂರು ತೋಂಟದ ಸಿದ್ಧಲಿಂಗಯತಿ—ಓ. ಎನ್. ಲಿಂಗಣ್ಣಯ್ಯ
೫೩. ದೇವರ ದಾಸಿಮಯ್ಯ—ಕೆ. ಅನಂತರಾಮು
೫೪. ಸಂಸ್ಕೃತ ಸಾಹಿತ್ಯ—ಡಾ. ಆರ್. ಎಸ್. ಶಿವಗಣೇಶಮೂರ್ತಿ
೫೫. ಚಾಮುಂಡರಾಯ—ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ
೫೬. ಶ್ರೀ ಸಮರ್ಥ ರಾಮದಾಸರು—ಬಿ. ಪಿ. ಚಂದ್ರಾಬಾಯಿ
೫೭. ಉಪಭಾಷಾ ಅಧ್ಯಯನ—ಶಾಲಿನಿ ರಘುನಾಥ